ಪ್ರಜಾವಾಣಿ

# ‘ಪ್ರಜಾವಾಣಿ’ಯಲ್ಲಿ ಕೈವಲ್ಯಮಯಿ ಮಾತಾಜೀ ‘ವಚನಾಮೃತ’

ವಿಜಯಪುರ: ‘ಪ್ರಜಾವಾಣಿ’ಯಲ್ಲಿ ಪ್ರತಿದಿನ ಪ್ರಕಟವಾಗುವ ‘ವಚನಾಮೃತ’ ಅಂಕಣದಲ್ಲಿ ಇನ್ನು ಮುಂದೆ ಪ್ರತಿ ಶನಿವಾರ ವಿಜಯಪುರದ ‘ಕೃಪಾಮಯಿ ಶಾರದಾಶ್ರಮ’ದ ಅಧ್ಯಕ್ಷರಾದ ಕೈವಲ್ಯಮಯಿ ಮಾತಾಜೀ ತಮ್ಮ ಅನುಭವಾಮೃತವನ್ನು ಓದುಗರಿಗೆ ಉಣಬಡಿಸಲಿದ್ದಾರೆ.

ಇಂಗ್ಲಿಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ ಮಾತಾಜೀ, ಶ್ರೀರಾಮಕೃಷ್ಣ- ವಿವೇಕಾನಂದರ ಆಧ್ಯಾತ್ಮಿಕ ಚಿಂತನೆಗಳಿಂದ ಆಕರ್ಷಿತರಾಗಿ ವೈರಾಗ್ಯ ಜೀವನದೆಡೆಗೆ ಆಕರ್ಷಿತರಾದರು.

ವೇದಾಂತ ಸಾಹಿತ್ಯ, ತತ್ವಶಾಸ್ತ್ರ, ಶ್ರೀರಾಮಕೃಷ್ಣ, ವಿವೇಕಾನಂದ ಮತ್ತು ಶ್ರೀಮಾತೆ ಶಾರದಾ ದೇವಿಯವರ ಚಿಂತನೆಗಳನ್ನು ಆಳವಾಗಿ ಅಧ್ಯಯನ ಮಾಡಿದವರು.

2003ರಲ್ಲಿ ಕೃಪಾಮಯಿ ಶಾರದಾಶ್ರಮವನ್ನು ವಿಜಯಪುರದಲ್ಲಿ ಸ್ಥಾಪಿಸುವ ಮೂಲಕ ಸಾಮಾಜಿಕ, ಶೈಕ್ಷಣಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುನರುತ್ಥಾನ ಸಾಧಿಸುವ ಪರಿಕಲ್ಪನೆಯನ್ನು ಹೊಂದಿದ್ದಾರೆ.

ಯುವತಿಯರಿಗೆ ವ್ಯಕ್ತಿತ್ವ ನಿರ್ಮಾಣ ಶಿಬಿರಗಳು, ಕಾರ್ಯಾಗಾರಗಳು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಮಹಿಳೆಯರಿಗಾಗಿ ಮಹಿಳಾ ಸಮಾವೇಶ ಮತ್ತು ಮಾತೃ ಸಮಾವೇಶ, ‘ಜೀವಂತ ದುರ್ಗಾಪೂಜೆ’ ಎಂಬ ಶೀರ್ಷಿಕೆಯಡಿಯಲ್ಲಿ ನಿರಂತರವಾಗಿ ಸಾವಿರಾರು ಬಡ ಮಹಿಳೆಯರಿಗೆ ವಸ್ತ್ರ ಧಾನ್ಯ ಹಾಗೂ ವಿವಿಧ ಸಾಮಗ್ರಿಗಳನ್ನು ನೀಡಿ ಸತ್ಕರಿಸುತ್ತಾ ಬಂದಿದ್ದಾರೆ.

ಕುಷ್ಠರೋಗಿಗಳ ಕಾಲೊನಿಗಳಲ್ಲಿ, ಅನಾಥಾಶ್ರಮಗಳಲ್ಲಿ, ನಿರಾಶ್ರಿತರ ಕೇಂದ್ರಗಳಲ್ಲಿ ಅವಶ್ಯಕ ವಸ್ತುಗಳ ವಿತರಣೆ ಮತ್ತು ಅವರ ಮಾನಸಿಕ ಆರೋಗ್ಯ ಸುಧಾರಣೆಗಾಗಿ ಸತ್ಸಂಗವನ್ನು ಆಯೋಜಿಸಿ, ಸ್ವಾಮಿ ವಿವೇಕಾನಂದರ ‘ದೀನ ದೇವೋಭವ’, ‘ದರಿದ್ರ ದೇವೋಭವ’ ಹಾಗೂ ‘ರೋಗಿ ದೇವೋಭವ’ ಎಂಬ ವಾಣಿಗಳನ್ನು ಪಾಲಿಸಿ ಅನುಷ್ಠಾನಕ್ಕೆ ತಂದಿದ್ದಾರೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಮೇಧಾವಿಯನ್ನಾಗಿಸುವ ಮಾಂತ್ರಿಕ ‘ಗುರು’

**ಮಹಾನ್** ದಡ್ಡ ಎಂದು ಯಾರನ್ನು ಪರಿಗಣಿಸಬೇಡಿ. ಏಕೆಂದರೆ ಮಹಾನ್ ಬುದ್ಧಿಯನ್ನು ಕರುಣಿಸುವ, ಮೌಢ್ಯವನ್ನು ತೊಳೆದು ಮೇಧಾವಿಯನ್ನಾಗಿಸುವ ಶಕ್ತಿ ‘ಗುರು’ ಎಂಬ ಮಾಂತ್ರಿಕನದು. ಎಲ್ಲ ರಂಗಗಳಲ್ಲಿ ಗುರುವಿನ ಮಾರ್ಗದರ್ಶನ ಅವಶ್ಯಕ.

ಹೀಗಿರುವಾಗ ಆಧ್ಯಾತ್ಮಿಕ ಸಾಧಕನಿಗಂತೂ ಗುರುವೇ ಸರ್ವಸ್ವ. ಗುರುಕೃಪೆಯಿಂದ ಅಜ್ಞಾನಿ ಜ್ಞಾನಿಯಾಗುವನು ಎಂಬುದಕ್ಕೆ ತೋಟಕಾಚಾರ್ಯರ ಜೀವನವೇ ನಿದರ್ಶನ.

ಆದಿ ಶಂಕರರ ನೇರ ಶಿಷ್ಯರುಗಳೆಂದರೆ ಪದ್ಮಪಾದ, ಹಸ್ತಾಮಲಕ, ಸುರೇಶ್ವರಾಚಾರ್ಯ ಹಾಗೂ ತೋಟಕಾಚಾರ್ಯ. ಅವರಲ್ಲಿ ತೋಟಕಾಚಾರ್ಯ ಓದುವುದರಲ್ಲಿ ಸ್ವಲ್ಪ ಹಿಂದೆ. ಆದರೆಗುರು ನಿಷ್ಠೆ ಹೆಚ್ಚು. ಒಮ್ಮೆ ಆಚಾರ್ಯರು ಪಾಠ ಮಾಡಲು ಪ್ರಾರಂಭಿಸಿದಾಗ ಇನ್ನೂ ತೋಟಕ ಬಂದಿರಲಿಲ್ಲ. ಅವನು ಬಂದ ಮೇಲೆ ಪ್ರಾರಂಭ ಮಾಡೋಣವೆಂದಾಗ ಉಳಿದ ಶಿಷ್ಯರು ನಕ್ಕರು. ಅವನಿಗಾಗಿ ಕಾಯುವ ಸಮಯ ವ್ಯರ್ಥ ಎಂದರು. ಇದನ್ನು ಗಮನಿಸಿದ ಶಂಕರರು ಮನದಲ್ಲಿ ತೋಟಕನನ್ನು ಮಹಾಜ್ಞಾನಿ ಆಗಲೆಂದು ಸಂಕಲ್ಪಿಸಿ ಆಶೀರ್ವದಿಸಿದರು.

ಕೆಲವು ನಿಮಿಷಗಳ ನಂತರ ತೋಟಕಾಚಾರ್ಯರು ಬರುವಾಗಲೇ ಗುರುಗಳ ಮೇಲೆ ಸ್ತೋತ್ರವನ್ನು ರಚಿಸುತ್ತಾ ಬಂದರು. ತಮ್ಮ ಗುರುವನ್ನು ಸ್ತುತಿಸುವ ‘ತೋಟಕಶತಕ’ವನ್ನು ಸಂಸ್ಕೃತದಲ್ಲಿ ರಚಿಸಿ ಪ್ರಖ್ಯಾತರಾದರು. ಶಂಕರರ ಉಪನಿಷತ್ ಭಾಷ್ಯಕ್ಕೆ ಟೀಕೆಗಳನ್ನು ಬರೆದು, ಅನೇಕ ಗ್ರಂಥಗಳನ್ನು ರಚಿಸಿ ಸಂಸ್ಕೃತ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಗುರುವಿನ ಸೇವೆಯನ್ನು ಪರಿಶುದ್ಧ ಮನಸ್ಸಿನಿಂದ ಮಾಡುವವರಿಗೆ ಎಂದಿಗೂ ಉತ್ತಮ ಭವಿಷ್ಯವಿದೆ ಎಂಬುದನ್ನು ತೋರಿಸಿದರು. •

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ‘ಗುರು’ ಎನಿದರ ಅರ್ಥ?

ಸಾವಿರಾರು ಸೂರ್ಯಚಂದ್ರರು ಹುಟ್ಟಿಬಂದರೂ ಹೃದಯದ ಒಳಗಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಇದು ಕೇವಲ ಗುರುವಿನ ಅನುಗ್ರಹದಿಂದ ಮಾತ್ರ ತೊಡೆದು ಹಾಕುತ್ತದೆ

‘ಗು’ ಎಂದರೆ ಅಂಧಕಾರ, ‘ರು’ ಎಂದರೆ ನಾಶಪಡಿಸುವವನು. ಅಂದರೆ, ಅಂಧಕಾರವನ್ನು ನಾಶಪಡಿಸುವವನು ಎಂದು. ಉಪನಿಷತ್ ಪ್ರಕಾರ ‘ಗುರು’ ಎಂದರೆ ಲೌಕಿಕ ಅಂಧಕಾರವನ್ನು ಆಧ್ಯಾತ್ಮಿಕ ಬೆಳಕಿನಿಂದ ತೊಲಗಿಸುವ ವ್ಯಕ್ತಿ ಎಂದು ಹೇಳಲಾಗಿದೆ. ‘ಗುರು’ ಶಬ್ದದ ಮತ್ತೊಂದು ಅರ್ಥವನ್ನು ಗುರು ಗೀತಾದಲ್ಲಿ ‘ಗು’ ಅನ್ನು ‘ಗುಣಗಳನ್ನು ಮೀರಿ’ ಮತ್ತು ‘ರು’ ಅನ್ನು ‘ಆಕಾರ ರಹಿತ’ ಅಂದರೆ, ಗುಣಗಳನ್ನು ಅತಿಶಯಿಸುವ ಪ್ರವೃತ್ತಿಯನ್ನು ಅನುಗ್ರಹಿಸುವವನೇ ಗುರು ಎಂಬುದಾಗಿ ಹೇಳಲಾಗಿದೆ. ಶ್ರೀ ರಾಮಕೃಷ್ಣರ ಪರಮಹಂಸರ ಕೃಪೆಯಿಂದ ಕುರಿ ಕಾಯುವ ಅನಕ್ಷರಸ್ಥ ಹುಡುಗ ‘ಲಾಟು’ ಉನ್ನತಮಟ್ಟದ ಆಧ್ಯಾತ್ಮಿಕ ಸಾಧಕ ಸ್ವಾಮಿ ಅದ್ಭುತಾನಂದರಾದರು.

‘ನಾನು ಕುಡಿದ ಸಾರಾಯಿ ಬಾಟಲಿಗಳನ್ನು ಪೇರಿಸಿದರೆ ಗೌರಿಶಂಕರ ಶಿಖರವನ್ನು ಮೀರಿಸುತ್ತಿತ್ತು’ ಎಂದು ಹೇಳುತ್ತಿದ್ದ ಗಿರೀಶ್ಚಂದ್ರಘೋಷ್ ಮುಂದೆ ಪರಮ ಸಂತನಾದ.

ತನ್ನ ಗುರುವಿನ ಮೇಲಿನ ಶ್ರದ್ಧಾಭಕ್ತಿಯಿಂದ ಏಕಲವ್ಯ ಬಿಲ್ಲು ವಿದ್ಯೆಯಲ್ಲಿ ಪರಿಣಿತನಾದ, ಕನಕದಾಸರು ಗುರುಗಳು ಕೊಟ್ಟ ‘ಕೋಣ ಮಂತ್ರ’ವನ್ನು ಜಪಿಸಿ ದಿವ್ಯ ಕೋಣನ ದರ್ಶನ ಪಡೆದರು. ಗುರುವಾದವನು ಶಿಷ್ಯನಲ್ಲಿ ಎಂತಹ ಪರಿವರ್ತನೆಯನ್ನು ಮಾಡಬಲ್ಲ ಎಂಬುದಕ್ಕೆ ಇವರೆಲ್ಲರೂ ನಮ್ಮ ಮುಂದೆ ನಿದರ್ಶನವಾಗಿ ನಿಂತಿದ್ದಾರೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ,
ವಿಜಯಪುರ

# ನಿನಗೆ ನೀನೇ ಗುರು

**ಗುರುಪೂರ್ಣಿಮಾ;** ಆಷಾಢ ಮಾಸದ ಹುಣ್ಣಿಮೆ. ವೇದಗಳನ್ನು ಸಂಗ್ರಹಿಸಿ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಜಗತ್ತಿಗೆ ನೀಡಿದ ಮೂಲಗುರು ಬ್ರಹ್ಮರ್ಷಿ ವ್ಯಾಸರ ಜನ್ಮದಿನ. ಶಿವನು ಸಪ್ತರ್ಷಿಗಳಿಗೆ ಯೋಗ ವಿದ್ಯೆ ಧಾರೆಯೆರೆದ ದಿನ, ಬುದ್ಧ ತನ್ನ ಪ್ರಥಮ ಧರ್ಮೋಪದೇಶ ನೀಡಿದ ಶುಭದಿನ.

ಬಸವಣ್ಣನ ವಚನದಂತೆ, ‘ಶಿವಪಥವರಿವೊಡೆ ಗುರುಪಥವೇ ಮೊದಲು’. ರಾಮಕೃಷ್ಣ ಪರಮಹಂಸರು ಹೇಳುವಂತೆ ‘ನಿನ್ನ ಅಂತರಾತ್ಮವೇ ನಿಜವಾದ ಗುರು’. ಗುರುವಿನ ಕೃಪೆಗೆ ಪಾತ್ರರಾಗಲೆಂದೇ ಆಧ್ಯಾತ್ಮಿಕ ಸಾಧನೆ, ಅಂತರಿಕ ಹೋರಾಟಗಳು ನಡೆಯುತ್ತಿರುವುದು. ಗುರುವಿನ ನಿಜ ಸ್ವರೂಪವನ್ನು ಶಂಕರಾಚಾರ್ಯರು ‘ವಿವೇಕ ಚೂಡಾಮಣಿ’ಯಲ್ಲಿ ಹೀಗೆ ವಿವರಿಸಿದ್ದಾರೆ.

**ಜಾತಿ-ನೀತಿ-ಕುಲ-ಗೋತ್ರ-ದೂರಗಂ**
**ನಾಮ-ರೂಪ-ಗುಣ-ದೋಷ ವರ್ಜಿತಂ|**
**ದೇಶ-ಕಾಲ-ವಿಷಯಾತಿವರ್ತಿ ಯದ್**
**ಬ್ರಹ್ಮ ತತ್ವಮಸಿ ಭಾವ ಯಾತ್ಮನಿ||**

ನಾಮ, ರೂಪ, ಗುಣ, ದೋಷಗಳಿಂದ ಮುಕ್ತವಾಗಿರುವ ಜಾತಿ, ನೀತಿ, ಕುಲ, ಗೋತ್ರಗಳಿಂದ ಹೊರತಾಗಿರುವ, ದೇಶ, ಕಾಲ, ಇಂದ್ರಿಯಗಳಿಗೂ ಅತೀತವಾಗಿರುವ ‘ಅದು’ ನೀನೇ ಆಗಿರುವೆ. ಆ ‘ನಿನ್ನನ್ನು’ ಕುರಿತು ಧ್ಯಾನಿಸು. ಆ ‘ನೀನೇ’ ಗುರು. ಇದನ್ನೇ ರಾಷ್ಟ್ರಕವಿ ಕುವೆಂಪು ಅವರು ‘ಅಂತರತಮ ನೀ ಗುರು ಹೇ ಆತ್ಮ ತಮೋಹಾರಿ’ ಎಂದು ವರ್ಣಿಸಿದ್ದಾರೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಉತ್ಕೃಷ್ಟ ಸಾಧನೆಗೆ ಬೇಕು ಖಚಿತ ಗುರಿ

ಪ್ರತಿಯೊಬ್ಬ ಮನುಷ್ಯ ತನ್ನ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸ್ಪಷ್ಟವಾದ, ಖಚಿತವಾದ ಗುರಿ ಬಹಳ ಮುಖ್ಯ. ಅನೇಕ ಮಹತ್ವಾಕಾಂಕ್ಷೆಗಳು ವ್ಯಕ್ತಿಯಲ್ಲಿ ಇರಬಹುದಾದರೂ ಅವೆಲ್ಲವೂ ಗುರಿಯಾಗಲಾರವು. ಅವುಗಳಲ್ಲಿ ಅತ್ಯಂತ ಮಹತ್ವದ್ದು ಮಾತ್ರ ಗುರಿಯ ಪಟ್ಟಕ್ಕೆ ಅರ್ಹತೆ ಪಡೆಯುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ, ಒಬ್ಬ ನೀರಿಗಾಗಿ ಒಂದೆಡೆ ಬಾವಿ ತೋಡತೊಡಗಿದ. ಅಲ್ಲಿಗೆ ಬಂದವರೊಬ್ಬರ ಸಲಹೆಯ ಮೇರೆಗೆ ಆ ಜಾಗವನ್ನು ಬಿಟ್ಟು ಬೇರೆ ಜಾಗದಲ್ಲಿ ತೋಡತೊಡಗಿದ. ಮತ್ಯಾರೋ ಹೇಳಿದರೆಂದು ಆ ಜಾಗವನ್ನು ಬಿಟ್ಟು ಇನ್ನೊಂದು ಕಡೆ ತೋಡತೊಡಗಿದ. ಹೀಗೆ ಅದೆಷ್ಟೇ ಶ್ರಮಿಸಿದರೂ ನೀರಿನ ಒರತೆ ಚಿಮ್ಮಲೇ ಇಲ್ಲ. ಅಲ್ಲಿ, ಇಲ್ಲಿ ಅಷ್ಟಿಷ್ಟು ತೋಡುವ ಬದಲು ಅವನು ಒಂದೆಡೆಯೇ ಎಲ್ಲ ಶ್ರಮ ಹಾಕಿ ಆಳ ಆಳಕ್ಕೆ ತೋಡಿದ್ದಲ್ಲಿ ನೀರು ಬಂದೇ ಬರುತ್ತಿತ್ತಲ್ಲವೇ? ಹಾಗಾಗಿ ಮೊದಲೇ ಚೆನ್ನಾಗಿ ಯೋಚಿಸಿ ಸ್ಪಷ್ಟ ಗುರಿಯೊಂದನ್ನು ನಿರ್ಧರಿಸಿ, ಅದನ್ನು ಸಾಧಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಅಂತಃಶಕ್ತಿಯನ್ನು ಬಡಿದೆಬ್ಬಿಸಿ, ಧೈರ್ಯೋತ್ಸಾಹಗಳನ್ನು ಧಾರೆ ಎರೆದು, ಹೊಸ ಸಾಧ್ಯತೆಗಳ ಲೋಕದ ಬಾಗಿಲು ತೆರೆಯಿಸುವುದೇ ಗುರಿ.

ಇದನ್ನೇ ಸ್ವಾಮಿ ವಿವೇಕಾನಂದರು, 'ಒಂದು ಯೋಜನೆಯನ್ನು ತೆಗೆದುಕೊಳ್ಳಿ. ನಿಮ್ಮ ಸರ್ವಸ್ವವನ್ನೂ ಅದಕ್ಕೆ ಧಾರೆಯೆರೆದರೆ ಅದ್ಭುತಗಳು ಸೃಷ್ಟಿಯಾಗುತ್ತವೆ' ಎಂದಿರುವುದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಅಜ್ಞಾನದ ಅದ್ಭುತಶಕ್ತಿ ಮಾಯೆ!

ಎಷ್ಟೋ ಬಾರಿ ನಾವು ಬಯಸಿದ್ದು ಸಿಕ್ಕಿದ ಮೇಲೆ ನಮಗದು ನಿಜವಾಗಿಯೂ ಬೇಕಾಗಿರಲಿಲ್ಲ ಎಂಬ ಭಾವನೆ ಬರುತ್ತಿರುತ್ತದೆ. ಅದರ ಜಾಗದಲ್ಲಿ ಇನ್ನೊಂದು ಆಸೆ ಮೂಡಿರುತ್ತದೆ. ಅನೇಕ ಜನರು ತಮ್ಮ ಬೇಡಿಕೆಯ ನಿಜವಾದ ಸ್ವರೂಪ ಏನೆಂದು ತಿಳಿಯದೆ ಅದನ್ನು ಪ್ರಾಪಂಚಿಕ ವಸ್ತುವಿನ ಕಡೆಗೆ ತಿರುಗಿಸುತ್ತಾರೆ. ಆದರೆ, ನಮಗೆ ತೃಪ್ತಿ ದೊರೆಯುವುದು ಯಾವುದು ಶಾಶ್ವತವೋ, ಬದಲಾಗದ್ದೋ ಅದರಿಂದ ಮಾತ್ರ.

ಸಾಮಾನ್ಯವಾಗಿ ನಮಗೆ ಕಷ್ಟ ಬಂದಾಗ ಅದರೊಂದಿಗೆ ಹೊಂದಿಕೊಂಡು ನಮ್ಮ ಕಾಮನೆಗಳಿಗೆ ಅಂಟಿ ಕೊಳ್ಳುತ್ತೇವೆಯೇ ಹೊರತು, ನಮ್ಮ ದಾರಿ ಬದಲಿಸಿ ಸತ್ಯ, ಆನಂದಗಳ ಕಡೆಗೆ ನಮ್ಮ ಮನಸ್ಸನ್ನು ತಿರುಗಿಸುವುದಿಲ್ಲ. ನಾವು ಎಷ್ಟೊಂದು ಬದ್ಧರಾಗಿದ್ದೇವೆ ಎಂದರೆ ಎಲ್ಲಕ್ಕಿಂತ ಹೆಚ್ಚಾಗಿ ದೇಹ ಸುಖಕ್ಕೆ ಮಹತ್ವ ನೀಡುತ್ತೇವೆ. ಎಷ್ಟೇ ಹೊಡೆತ ಬಿದ್ದರೂ ನಾವು ಅದಕ್ಕೇ ಹತಾಶರಾಗಿ ಅಂಟಿಕೊಳ್ಳುತ್ತೇವೆ.

ಪ್ರಾಪಂಚಿಕ ಸಂಬಂಧಗಳಲ್ಲಿ ಪ್ರೀತಿ, ವಾತ್ಸಲ್ಯಗಳಲ್ಲಿ ಇರುವ ಸುಖ ತಾತ್ಕಾಲಿಕವಾದದ್ದು. ಅದೇ ನಿಜವಾದ ಸುಖವಲ್ಲ. ನಿಜವಾದ ಸುಖ ಆತ್ಮದ ಆಂತರಿಕ ಸ್ವರೂಪ. ನಮ್ಮ ಸ್ವರೂಪವನ್ನು, ಆತ್ಮವನ್ನು ತಿಳಿಯುವುದರಿಂದ ಮಾತ್ರ ನಿಜವಾದ ಧನ್ಯತೆ ಪಡೆಯಲು ಸಾಧ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ನಾವು ಕುರಿಗಳಂತಾಗಬಾರದು

ಆಧುನಿಕ ಜಗತ್ತಿನಲ್ಲಿ ಅನೇಕರಿಗೆ ದೇವರ ಅಸ್ತಿತ್ವವನ್ನು ಅಲ್ಲಗಳೆಯುವುದು ಒಂದು ಫ್ಯಾಷನ್ ಆಗಿದೆ. ಅಂಥ ವ್ಯಕ್ತಿಗಳ ಮಾನಸಿಕ ಸ್ಥಿತಿಯಿನ್ನೂ ಪರಿಪಕ್ವವಾಗಿಲ್ಲ, ಆಳವಾಗಿ ಚಿಂತಿಸಿಲ್ಲ ಎಂದು ಅರಿವಾಗುತ್ತದೆ.

ನನಗೊಂದು ಕಥೆ ನೆನಪಿಗೆ ಬರುತ್ತಿದೆ. ಉಪಾಧ್ಯಾಯರೊಬ್ಬರು ಮಕ್ಕಳಿಗೆ ಅಂಕಗಣಿತ ಬೋಧಿಸುತ್ತಿದ್ದರು. ಅವರೊಂದು ಲೆಕ್ಕವನ್ನು ಬಿಡಿಸಲು ಹೇಳಿದರು. ‘ನನ್ನ ಹತ್ತಿರ 12 ಕುರಿಗಳಿವೆ. ಅವುಗಳಲ್ಲಿ ಆರು ಬೇಲಿ ಹಾರಿಹೋದವು, ಉಳಿದಿದ್ದೆಷ್ಟು?’, ಅನೇಕ ಮಕ್ಕಳು ‘ಆರು’ ಎಂದರು. ಆದರೆ, ರೈತನ ಮಗನೊಬ್ಬ ಮೆತ್ತಗೆ ಹೇಳಿದ, ‘ಒಂದೂ ಉಳಿಯುವುದಿಲ್ಲ’ ಎಂದು. ಉಪಾಧ್ಯಾಯರು, ಅದು ಹೇಗೆಂದು ಆ ಹುಡುಗನನ್ನು ಪ್ರಶ್ನಿಸಿದಾಗ ಅವನೆಂದ, ‘ಸಾರ್, ನಿಮಗೆ ಗಣಿತ ಗೊತ್ತಿರಬಹುದು. ಆದರೆ, ಕುರಿಗಳ ವಿಚಾರ ನನಗೆ ಗೊತ್ತು.’ ಅಂದರೆ, ನಾವು ಕುರಿಗಳಂತೆ ಇನ್ನೊಬ್ಬರನ್ನು ಅನುಸರಿಸಬಾರದು.

ಈ ‘ಜಡ’ವಾದ ಭಾರತದಲ್ಲಿ ಪುರಾತನ ಕಾಲದಿಂದಲೂ ಇದೆ. ಇಂತಹವರಿಗೆ ಚಾರ್ವಾಕರು ಎಂದು ಹೇಳಲಾಗುತ್ತದೆ. ಇವರ ಪ್ರಕಾರ ದೇವರು, ಆತ್ಮ, ಅಮೃತತ್ವ ಇವೆಲ್ಲ ಸುಳ್ಳು. ಜೀವನದ ಮುಖ್ಯ ಉದ್ದೇಶ ಇಂದ್ರಿಯ ಸುಖ. ಆದ್ದರಿಂದಲೇ ನಮ್ಮಲ್ಲಿ ಅನೇಕರು ಧರ್ಮ-ಧರ್ಮ ಎಂದು ಹೇಳುತ್ತಾರೆ ಅಷ್ಟೇ. ಆದರೆ, ನಿಜವಾಗಿಯೂ ಅವರು ಅನುಸರಿಸುವುದು ಜಡವಾದಿಯ ಜೀವನವನ್ನೇ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಪವಾಡ ಮಾಡಬಲ್ಲದು ‘ಆತ್ಮಶಕ್ತಿ’

**‘ಉದ್ಧರೇದಾತ್ಮನಾತ್ಮಾನಂ’** ಅಂದರೆ, ‘ತನ್ನನ್ನು ತಾನೇ ಉದ್ಧರಿಸಿ ಕೊಳ್ಳಬೇಕು’ ಎಂಬ ಭಗವದ್ಗೀತೆ ಮಾತು. ವ್ಯಕ್ತಿಯೊಬ್ಬ ತನ್ನ ಶ್ರೇಯಸ್ಸಿನ ಶಿಲ್ಪಿ ತಾನೇ ಆಗಬಲ್ಲ. ಅದಕ್ಕೆ ಬೇಕಾದ ಅದ್ಭುತ ಶಕ್ತಿ, ಸಾಮರ್ಥ್ಯ ವ್ಯಕ್ತಿಯ ಅಂತರ್ಯದಲ್ಲಿದೆ. ಅದನ್ನು ವ್ಯಕ್ತಗೊಳಿಸುವ ಪ್ರಯತ್ನ ಮಾತ್ರ ವ್ಯಕ್ತಿಯಿಂದ ಆಗಬೇಕಷ್ಟೇ.

ಎಲ್ಲ ಕಡೆ ಚದುರಿರುವ ಬೆಳಕನ್ನು ಕಾಗದದ ಚೂರಿನ ಮೇಲೆ ಹಾಯಿಸಿದರೆ ಏನೂ ಆಗದು. ಅದೇ ಬೆಳಕನ್ನು ಪೀನ ಮಸೂರದ ಮೂಲಕ ಹಾಯಿಸಿದರೆ ಆ ಬೆಳಕು ಸಂಧಿಸುವ ಏಕ ಬಿಂದುವಿನಲ್ಲಿ ಕಾಗದದ ಚೂರನ್ನು ಇಟ್ಟರೆ ಅದು ಹೊತ್ತಿಕೊಳ್ಳುತ್ತದೆ. ಸಾಮಾನ್ಯ ಬೆಳಕಿನಲ್ಲಿ ಇಲ್ಲದ ಸಾಮರ್ಥ್ಯಕ್ಕೆ ಕಾರಣ ಅದನ್ನು ಒಂದೇ ಬಿಂದುವಿನಲ್ಲಿ ಹಾಯಿಸಿದ್ದು ಎಂದಲ್ಲವೇ?

ಸಾಧನೆ ಯಶಸ್ವಿಯಾಗಲು ನಿರ್ದಿಷ್ಟ ಗುರಿ, ಸತತ ಪ್ರಯತ್ನ, ಬಿಡದ ಛಲ, ಸಾಧಿಸುವ ಕೆಚ್ಚಿರಬೇಕು. ಈ ಗುರಿಯ ನಿರ್ಧಾರಕ್ಕೆ ಜ್ಞಾನಶಕ್ತಿ, ಸತತ ಪ್ರಯತ್ನಕ್ಕೆ ಕ್ರಿಯಾಶಕ್ತಿ, ಸಾಧಿಸುವ ಕೆಚ್ಚಿಗೆ ಇಚ್ಛಾಶಕ್ತಿ ಬೇಕು. ಈ ಮೂರೂ ಶಕ್ತಿಗಳ ಸಂಗಮವೇ ಆತ್ಮಶಕ್ತಿ. ರಮಣ ಮಹರ್ಷಿ ಹೇಳಿದಂತೆ ‘ಆತ್ಮಶಕ್ತಿಗೆ ಸಾಧಿಸಲು ಕಷ್ಟವಾದ ಕೆಲಸವೇ ಈ ಜಗತ್ತಿನಲ್ಲಿ ಇಲ್ಲ’.ಪವಾಡವನ್ನೇ ಮಾಡಬಲ್ಲದು ‘ಆತ್ಮಶಕ್ತಿ’.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸೋಲು ಗೆಲುವಿನ ಮೆಟ್ಟಿಲಾಗಿಸಿ

**‘ಅಸ್ಥಿರಂ ಜೀವಿತಂ ಲೋಕೇ**
**ಅಸ್ಥಿರೇ ಧನ ಯವ್ವನೇ**
**ಅಸ್ಥಿರಃ ಪುತ್ರ ಧಾರಾಶ್ಚ ಧರ್ಮಕೀರ್ತಿ ದ್ವಯಂ ಸ್ಥಿರಂ**

ನಮ್ಮ ಜೀವಿತ ಸ್ಥಿರವಲ್ಲ: ಧನ, ಯೌವನವೂ ಸ್ಥಿರವಲ್ಲ: ಹಾಗಾದರೆ ಸ್ಥಿರವಾದದ್ದು ಯಾವುದು ಅಂದರೆ ಧರ್ಮಕೀರ್ತಿಗಳು ಮಾತ್ರ. ಶರೀರಗಳು ಕ್ಷೀಣಿಸುವಂತಹವು. ಸಂಪತ್ತು ಶಾಶ್ವತವಲ್ಲ. ಮೃತ್ಯು ಯಾವಾಗಲೂ ಸಮೀಪದಲ್ಲೇ ಹೊಂಚಿಕುಳಿತಿರುತ್ತದೆ.ಇದ್ದಷ್ಟುದಿನಧರ್ಮಕಾರ್ಯಗಳನ್ನುಮಾಡಬೇಕು. ಪ್ರಪಂಚಕ್ಕೆ ಅಂಟಿಕೊಳ್ಳುವುದಕ್ಕಿಂತ ಭಗವಂತನಿಗೆ ಅಂಟಿಕೊಂಡರೆ ಶಕ್ತಿ ಲಭಿಸುವುದು.

‘ನಮಗೆ ಅಳಲು ಸಮಯವಿಲ್ಲ’ ಎಂದು ವಿವೇಕಾನಂದರು ಹೇಳುತ್ತಿದ್ದರು. ನಾವು ಕ್ರಿಯಾಶೀಲರಾಗಬೇಕು. ಅದೇ ನಿಜವಾದ ಪರಾಕ್ರಮ.

ನಮಗೆ ಸಮತೋಲನ ಬೇಕು, ಆಂತರಿಕ ಸಮನ್ವಯ ಬೇಕು, ನಮ್ಮ ಬಗ್ಗೆ, ಪ್ರಪಂಚದ ಬಗ್ಗೆ ನಮ್ಮ ದೃಷ್ಟಿಕೋನ ಬದಲಾಗಬೇಕು. ಜೀವನದ ಕಷ್ಟಗಳು ನಿಜವಾಗಿಯೂ ನಮಗೆ ಸಹಾಯಮಾಡುತ್ತವೆ. ಸೋಲನ್ನೇ ವಿಜಯವನ್ನಾಗಿ ಪರಿವರ್ತಿಸಲು ಪ್ರಯತ್ನಿಸಿ.

ಜೀವನದ ತಪ್ಪು ದೃಷ್ಟಿಕೋನದಿಂದ ಮಾನಸಿಕ ದುಗುಡ ಉಂಟಾಗುತ್ತದೆ. ಸರಿಯಾದ ಮಾನಸಿಕ ದೃಷ್ಟಿ, ಬೌದ್ಧಿಕ ದೃಷ್ಟಿಯಿಂದ ಜೀವನದ ವಾಸ್ತವತೆಗಳನ್ನು ಎದುರಿಸಿ. ಯಾವುದರಿಂದಲೂ ವಿಚಲಿತರಾಗದಿರಲು ಕಲಿಯಿರಿ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಹಸಿದಾಗ ಬೇಕು ಆಹಾರ...

ವಿದ್ಯೆ ಕಲಿಸಿದ ಗುರುಗಳನ್ನು ಅರಮನೆಗೆ ಬರುವಂತೆ ರಾಜ ಆಮಂತ್ರಿಸಿದ. ಇಲ್ಲವೆನ್ನಲಾಗದೆ ಗುರುಗಳು ಆಹ್ವಾನ ಸ್ವೀಕರಿಸಿ ಅರಮನೆಗೆ ಬಂದರು. ರಾಜ, ತನ್ನ ವಶದಲ್ಲಿದ್ದ ಭವ್ಯ ಮಹಲು, ಅಪಾರ ಸಂಪತ್ತು, ಆಲಂಕಾರಿಕ ವಸ್ತುಗಳು, ಚಿನ್ನಾಭರಣ, ವಜ್ರವನ್ನು ಗುರುಗಳಿಗೆ ತೋರಿಸಿ 'ಹೇಗಿದೆ ಗುರುಗಳೇ?' ಎಂದು ಹೆಮ್ಮೆಯಿಂದ ಕೇಳಿದ. ಗುರುಗಳು ನಿರ್ಲಿಪ್ತ ಭಾವದಲ್ಲಿ, 'ಇದೇನು ಮಹಾ? ನಮ್ಮ ಮನೆಯ ಸಮೀಪದ ಹಾಲುಮಾರುವವಳ ಮನೆಯಲ್ಲಿ ಇದಕ್ಕಿಂತಲೂ ಬೆಲೆಬಾಳುವ ರತ್ನವಿದೆ' ಎಂದುಬಿಟ್ಟರು!

ಕುತೂಹಲಗೊಂಡ ರಾಜ, 'ಹೌದೇ? ಹಾಗಿದ್ದಲ್ಲಿ ಅದನ್ನೊಮ್ಮೆ ನೋಡಲೇಬೇಕು' ಎಂದ. ಇಬ್ಬರೂ ಹಾಲು ಮಾರುವಾಕೆಯ ಮನೆಗೆ ಬಂದರು. ಆಕೆಯ ಅಡುಗೆಮನೆಗೆ ರಾಜನನ್ನು ಒಯ್ದು ಗುರುಗಳು,'ನೋಡಲ್ಲಿ, ನಾನು ಹೇಳಿದ ಬೆಲೆಬಾಳುವ ರತ್ನ ಅದೇ...'ಎಂದು ಬೀಸುವ ಕಲ್ಲು ತೋರಿಸಿದರು.ಕುಹಕದ ನಗೆ ಬೀರಿದ ರಾಜ, 'ಗುರುಗಳೇ, ಇದೆಂಥಾ ರತ್ನ? ಸಾಧಾರಣ ಬೀಸುವ ಕಲ್ಲು' ಎಂದಾಗ ಗುರುಗಳು, 'ನಿನ್ನ ಲೆಕ್ಕದಲ್ಲಿ ಅದು ಸಾಧಾರಣವೇ ಇರಬಹುದು; ಆದರೆ, ಅದರಲ್ಲಿ ರಾಗಿ ಬೀಸಿ, ಹಿಟ್ಟಿನಿಂದ ರೊಟ್ಟಿ ಮಾಡಿ ಲಕ್ಷಾಂತರ ಜನರ ಹಸಿವು ಇಂಗಿಸಿ ಸಂತೃಪ್ತರಾಗುತ್ತಾರೆ.

ನಿನ್ನ ಬಳಿ ಇರುವ ವಜ್ರ,ವೈಢೂರ್ಯಗಳಿಂದ ಹೊಟ್ಟೆ ತುಂಬಿಸಲು ಸಾಧ್ಯವೇ? ಹಸಿದ ಹೊಟ್ಟೆ ಆ ಕ್ಷಣಕ್ಕೆ ಬೇಡುವುದು ಹಿಡಿ ಆಹಾರವನ್ನೇ ವಿನಾ, ಬಂಗಾರ-ವಜ್ರ-ವೈಢೂರ್ಯವನ್ನಲ್ಲ' ಎಂದರು. ಸತ್ಯದ ಅರಿವಾದ ರಾಜ ಗುರುಗಳ ಪಾದಗಳಿಗೆರಗಿದ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸಂಸ್ಕಾರವಿಲ್ಲದವರ ಬಾಳು ವ್ಯರ್ಥ

ಭಾರತವು ಸಂಸ್ಕೃತಿ, ಸಂಸ್ಕಾರ ಪ್ರಧಾನವಾದ ದೇಶ. ಮನುಷ್ಯತ್ವದಿಂದ ದೈವತ್ವಕ್ಕೆ ತಲುಪಬೇಕಿದ್ದರೆ ಪ್ರತಿ ಆತ್ಮಕ್ಕೆ ಸಹಾಯವಾಗುವ ಆಂತರಿಕ ಸಾಧನವೇ ಸಂಸ್ಕಾರ. ಯಾವುದೇ ವಸ್ತು ಅಪೇಕ್ಷಿತವಾದ ಮಟ್ಟಕ್ಕೆ ಮುಟ್ಟಬೇಕಿದ್ದರೆ ಸಂಸ್ಕಾರದ ಹಿನ್ನೆಲೆ ಅವಶ್ಯ.

ಸಂಸ್ಕಾರ ಸಂಪನ್ನತೆಯಿಂದ ವ್ಯಕ್ತಿತ್ವಕ್ಕೆ ವಿಶಿಷ್ಟ ಮೆರುಗು ಬರುತ್ತದೆ. ಸಂಸ್ಕಾರ ಇಲ್ಲದಿದ್ದರೆ ಮನುಷ್ಯನ ಜೀವನ ಸಂಪತ್ತಿನಿಂದ ತುಂಬಿದ್ದರೂ ಸುಂದರವಾಗಿರುವುದಿಲ್ಲ. ಗಂಧವಿಲ್ಲದ ಹೂವಿನಂತೆ ಸಂಸ್ಕಾರವಿಲ್ಲದವರ ಬಾಳು ವ್ಯರ್ಥವಾಗುತ್ತದೆ.

ಕಾಳಿದಾಸ ಮಹಾಕವಿ ಸಂಸ್ಕಾರ ಸಂಪನ್ನತೆಯನ್ನು ಈ ರೀತಿ ಆರಾಧಿಸಿದ್ದಾನೆ. ರತ್ನ-ಬಂಗಾರ ಸಂಯೋಗ ಸುಂದರವಾದದ್ದೇನೋ ನಿಜ. ಆದರೆ, ಶುದ್ಧ ಬಂಗಾರದ ಸಂಗಡ ಸೇರಬೇಕಿದ್ದರೆ ಅದೇ ಆಗ ಗಣಿಯಿಂದ ತೆಗೆದ ಹದ ಮಾಡದ ರತ್ನದಿಂದ ಸಾಧ್ಯವಿಲ್ಲ. ಆ ರತ್ನಕ್ಕೆ ಸಾಣೆಹಿಡಿದು, ಅದರ ಮಲಿನತೆಯನ್ನೆಲ್ಲ ತೆಗೆದು, ಅಪೇಕ್ಷಿತ ಆಕಾರ ಕೊಟ್ಟಾಗ ಅದು ಬೆಳಗುತ್ತದೆ, ಶುದ್ಧವಾಗುತ್ತದೆ. ಸಂಸ್ಕಾರ ಪಡೆದ ಆ ರತ್ನ ಶುದ್ಧ ಬಂಗಾರದ ಸಂಗಡ ಸೇರಲು ಅರ್ಹವಾಗುತ್ತದೆ.

ಸಂಸ್ಕಾರಗಳು ಅಂದರೆ, ಶುಚಿತ್ವ, ಶುದ್ಧಿ ಇಲ್ಲದೇ ಇದ್ದಾಗ ಜೀವನ ಅಸಂಸ್ಕೃತವಾಗುತ್ತದೆ. 'ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಯತೇ' ಎನ್ನುವ ಸೂಕ್ತಿಯೂ ಇದೇ ಅರ್ಥವನ್ನು ಕೊಡುತ್ತದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಕೈ ಕೆಸರಾದರೆ ಬಾಯಿ ಮೊಸರು

**ಜೀ**ವನದಲ್ಲಿ ಯಶಸ್ಸಿನ ದಾರಿ ಹೂಗಳಿಂದ ಆವೃತವಾಗಿರುವುದಿಲ್ಲ. ಮಹತ್ತರವಾದುದನ್ನು ಸಾಧಿಸಬೇಕಿದ್ದರೆ ಮಹಾ ಪ್ರಯತ್ನ ಮೊದಲು, ನಂತರ ದೈವಾನುಗ್ರಹ ಬೇಕಾಗುತ್ತದೆ.

ಆದರೆ ಬರಲಿರುವ ಕಷ್ಟಗಳನ್ನು ಊಹಿಸಿಯೇ ಅನೇಕರು ಕಾರ್ಯಾರಂಭದಿಂದ ವಿಮುಖರಾಗುತ್ತಾರೆ. ಅಂಥವರಿಂದ ಏನನ್ನೂ ಸಾಧಿಸಲಿಕ್ಕೆ ಆಗುವುದಿಲ್ಲ. ಮನುಷ್ಯರಲ್ಲಿ ಮೂರು ವಿಧ. ಅಧಮರು ವಿಘ್ನಗಳ ಹೆದರಿಕೆಯಿಂದ ಕೆಲಸವನ್ನೇ ಪ್ರಾರಂಭಿಸುವುದಿಲ್ಲ. ಇನ್ನು ಕೆಲವರು ಕೆಲಸ ಪ್ರಾರಂಭಿಸುತ್ತಾರೆ. ಆದರೆ, ತೊಂದರೆಗಳು ಬಂದರೆ ಕೆಲಸವನ್ನು ಮಧ್ಯದಲ್ಲಿಯೇ ಕೈ ಬಿಡುತ್ತಾರೆ. ಇವರು ಮಧ್ಯಮರು. ಆದರೆ, ಬಾರಿಬಾರಿಗೂ ವಿಘ್ನಗಳು ಬಂದೆರಗಿದರೂ ಸಹ ಉತ್ತಮರು ಕೈಗೊಂಡ ಕೆಲಸವನ್ನು ನಿಲ್ಲಿಸುವುದಿಲ್ಲ.

ಪರಮೇಶ್ವರನನ್ನೇ ಪತಿಯನ್ನಾಗಿ ಪಡೆಯಲು ಪಾರ್ವತಿ ಪಟ್ಟ ಶ್ರಮವೆಷ್ಟು? ಕೊನೆಗೂ ಪಾರ್ವತಿಯ ನಿಷ್ಠೆಗೆ ಮೆಚ್ಚಿ ಈಶ್ವರನು ತನ್ನ ನಿಜರೂಪದಿಂದ ಅವಳೆದುರು ನಿಂತಾಗ, ಪಾರ್ವತಿಗೆ ಆದ ಆನಂದಕ್ಕೆ ಎಣೆಯುಂಟೇ?

ಕೈಗೊಂಡ ಕೆಲಸದಲ್ಲಿ ಇಚ್ಛಿತ ಫಲ ಸಿಕ್ಕಾಗ ಪೂರ್ವದಲ್ಲಿ ಅನುಭವಿಸಿದ ಕಷ್ಟಗಳೇ ಸುಖಕ್ಕೆ ಕಾರಣವಾಗುತ್ತವೆ. ಕೈಕೆಸರಾದರೆ ಮಾತ್ರ ಬಾಯಿಗೆ ಮೊಸರವಲ್ಲವೇ? ಪರಿಶ್ರಮದಿಂದ ಬಯಸಿದ ಫಲವನ್ನು ಪಡೆದ ಮನುಷ್ಯನಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳು ದೊರಕುವುದಲ್ಲದೆ ದೈವಾನುಗ್ರಹ ಪ್ರಾಪ್ತವಾಗುತ್ತದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ದೇವಿಯ ಆರಾಧನೆಯೇ ಶರನ್ನವರಾತ್ರಿ

**ಶರನ್ನವರಾತ್ರಿ** ಎಂದರೆ ದೇವಿಯ ಆರಾಧನೆ. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತಳು. ಮಹಾವಿದ್ಯೆಯೂ, ಮಹಾ ಮೋಹಳೂ ಆಗಿರುತ್ತಾಳೆ. ಇವಳೇ ಸರ್ವಕ್ಕೂ ಕಾರಣಳಾಗಿ ಗುಣತ್ರಯವನ್ನು ಕಾರ್ಯರೂಪಕ್ಕೆ ತಂದಿರುತ್ತಾಳೆ. ಬುದ್ಧಿಯ ವೃತ್ತಿಗಳೆಲ್ಲ ದೇವಿಯ ರೂಪಗಳೇ. ನಾನಾ ಆಯುಧಗಳನ್ನು ಧರಿಸಿ ಭಯಂಕರಳಾಗಿ ಕಂಡುಬಂದರೂ ಜಗನ್ಮಾತೆ ಸೌಮ್ಯರೂಪಳು, ಅತಿ ಸುಂದರಿಯೂ ಆಗಿದ್ದಾಳೆ. ದುರ್ಗಮವಾದ ಭವಸಾಗರವನ್ನು ದಾಟಿಸುವ ನೌಕೆಯು ಈ ದುರ್ಗಾದೇವಿ.

ದೇವಿಯು ಭಕ್ತ ಜನರಲ್ಲಿ ಪ್ರಸನ್ನಳಾದರೆ ಅವರು ಯಶಸ್ಸಿಗೆ ಭಾಜನರಾಗುತ್ತಾರೆ. ಪುರುಷಾರ್ಥಗಳು ಸಿದ್ಧಿಸುತ್ತವೆ. ಕಷ್ಟದಲ್ಲಿ ಅವಳನ್ನು ಸ್ಮರಿಸಿಕೊಂಡರೆ ಭೀತಿಯನ್ನು ನಿವಾರಿಸುತ್ತಾಳೆ. ಇವಳಿಗಿಂತ ದಯಾ ಹೃದಯವುಳ್ಳವರು ಮತ್ತಾರೂ ಇಲ್ಲ. ಹೃದಯದಲ್ಲಿ ಅನುಕಂಪ, ಸಮರದಲ್ಲಿ ನಿಷ್ಠುರತೆ ಇವೆರಡರ ಸಂಗಮ ದೇವಿಯಲ್ಲಿ ಹೊರತು ಇನ್ನೆಲ್ಲಿಯೂ ಕಂಡು ಬರುವುದಿಲ್ಲ. ಜಗದಂಬಿಕೆಯನ್ನು ಯಾರು ಭಕ್ತಿಯಿಂದ ಸ್ತುತಿಸುತ್ತಾರೆಯೋ ಅವರ ಸಮೃದ್ಧಿಗೆ ಅವಳು ಕಾರಣಳಾಗುತ್ತಾಳೆ.

ಅವಳ ಮಾಯಾ ರೂಪದಿಂದ ವಿಶ್ವವು ಮೋಹವನ್ನು ಹೊಂದಿದ್ದರೂ ಅವಳು ಪ್ರಸನ್ನಳಾದರೆ ಭಕ್ತಿ-ಮುಕ್ತಿಯನ್ನೂ ಅನುಗ್ರಹಿಸುತ್ತಾಳೆ. ಅವಳನ್ನು ಆಶ್ರಯಿಸಿದವರಿಗೆ ವಿಪತ್ತಿಲ್ಲ. ಅಷ್ಟೇ ಅಲ್ಲ, ಅವರೂ ಕೂಡ ಇತರರಿಗೆ ಆಶ್ರಯದಾತರಾಗುತ್ತಾರೆ.

ಪ್ರಜಾವಾಣಿ



# ವಚನಾಮೃತ

ಮಾತಾ ಕೈವಲ್ಯಮಯಿ
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಜೀವನ ಬಡವಾಗದಿರಲಿ

**ದೇವರು** ಅನುಗ್ರಹಿಸಿದ ಆಯುಷ್ಯದಲ್ಲಿ ಸುಂದರವಾಗಿ ಬದುಕುವುದೇ ಭಗವಂತನ ಪೂಜೆ. ನಾವೆಲ್ಲ ಹೇಗೆ ಬದುಕಬೇಕು ಎಂಬುದನ್ನು ಸಂತರು ನಮಗೆ ಕಲಿಸಿಕೊಟ್ಟಿದ್ದಾರೆ. ಸಾಧನೆ ಮಾಡಿ ಸಿದ್ಧಿ ಪಡೆಯುವುದೇ ಸಾರ್ಥಕ ಜೀವನದ ಸಂಕೇತ. ಸುತ್ತಲಿನ ಜಗತ್ತು ಸುಂದರಗೊಳಿಸಬೇಕು. ಬದುಕು ಶ್ರೀಮಂತಗೊಳಿಸಲು ಸಂಪತ್ತು ಬೇಕಿಲ್ಲ. ಜ್ಞಾನ ಸಾಕು. ಒಳ್ಳೆಯದನ್ನು ಕಲಿಯಬೇಕು.

ಬದುಕಿನಲ್ಲಿ ಹಕ್ಕಿಯಂತೆ ಹಾರಬೇಕು, ವೃಕ್ಷದಂತೆ ಬೆಳೆಯಬೇಕು ಹಾಗೂ ರೈತನಂತೆ ದುಡಿಯಬೇಕು. ಜಗತ್ತಿನಲ್ಲಿ ಕ್ರಿಯಾತ್ಮಕ ಜೀವನ ನಡೆಸಬೇಕು. ಸುಂದರ ಜೀವನಕ್ಕೆ ಒಂದು ಮಾರ್ಗ ಹುಡುಕಬೇಕು. ಅರಿತು ನಡೆದರೆ ಆ ಮಾರ್ಗ ಸಿಗುತ್ತದೆ. ಮೊದಲು ನಮ್ಮನ್ನು ನಾವು ಅರಿಯಬೇಕು. ಯಾವುದಕ್ಕಾಗಿ ಬಂದಿದ್ದೇವೆ ಎಂಬುದನ್ನು ಮರೆಯಬಾರದು.

ಕಣ್ಣುಗಳು ಗಾತ್ರದಲ್ಲಿ ಚಿಕ್ಕದಿದ್ದರೂ ಇಡೀ ಜಗತ್ತನ್ನೆ ನೋಡಬಹುದು, ಬಲಿಷ್ಠವಾದ ಕೈಗಳಿಂದ ಅದ್ಭುತ ಕಾರ್ಯ ಮಾಡಬಹುದು. ಇಷ್ಟೆಲ್ಲ ಪಡೆದ ಮನುಷ್ಯ ಬಡವನಾಗಲು ಹೇಗೆ ಸಾಧ್ಯ.

ಸಂತರು, ಋಷಿ ಮುನಿಗಳು ಪರಮ ಶಾಂತಿ ಪಡೆಯಲು ಹೊಸ ಮಾರ್ಗ ಹುಡುಕಿ ಕೊಟ್ಟಿದ್ದಾರೆ. ಆ ಮಾರ್ಗದಲ್ಲಿ ನಾವು ಸಾಗಿದರೆ ಶಾಂತಿ ಸಿಗುವುದು ಖಚಿತ. ಜೀವನ ಯಾವತ್ತು ಬಡವಾಗಬಾರದು. ಶ್ರೀಮಂತ ಬದುಕು ನಮ್ಮದಾಗಬೇಕು.

ಪ್ರಜಾವಾಣಿ



# ವಚನಾಮೃತ


**ಮಾತಾ ಕೈವಲ್ಯಮಯಿ**

ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ


## ಜೀವನವೊಂದು ಬಿಸಿಲ್ಗುದುರೆಯ ಸ್ವರೂಪ

ಸ್ವಾಮಿ ವಿವೇಕಾನಂದರು ರಾಜಸ್ಥಾನದ ಮರುಭೂಮಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ನೆತ್ತಿಯ ಮೇಲೆ ಸೂರ್ಯ ಉರಿ ಕೆಂಡದ ಮಳೆಗರೆಯುತ್ತಿದ್ದ. ನೆಲವೋ ಕಾದ ಕಾವಲಿ. ಜತೆಗೆ ಆಗಾಗ ರಭಸದಿಂದ ಬೀಸುವ ಬಿಸಿಗಾಳಿ. ಸ್ವಾಮೀಜಿಯ ಕಂಠ ಒಣಗಿ ಹೋಗಿದೆ. ಸ್ವಲ್ಪ ವಿಶ್ರಮಿಸಿ ಕೊಳ್ಳೋಣವೆಂದರೆ ಒಂದೇ ಒಂದು ಮರವೂ ಇಲ್ಲ. ದೃಷ್ಟಿ ಸಾಗುವಷ್ಟು ದೂರವೂ ಮರಳು.

ಮತ್ತಷ್ಟು ನಡೆದಮೇಲೆ ದೂರದಲ್ಲೊಂದು ಸರೋವರ ಕಂಡಿತು. ವಿಶ್ರಮಿಸಿಕೊಳ್ಳಲು ಮರದ ನೆರಳು ಇತ್ತು. ಸ್ವಾಮೀಜಿಗೆ ಹೋದ ಜೀವ ಬಂದಂತಾಯಿತು. ಸರೋವರದ ದಿಕ್ಕಿನಲ್ಲಿ ಬೇಗ ಬೇಗ ಹೆಜ್ಜೆ ಹಾಕಿದರು. ಸರೋವರದ ತಿಳಿನೀರು ಥಳಥಳನೆ ಹೊಳೆಯುತ್ತಿತ್ತು. ಆದರೆ, ಆ ಸ್ಥಳ ಅವರು ಮೊದಲು ಭಾವಿಸಿದಷ್ಟು ಹತ್ತಿರವೇನೂ ಇರಲಿಲ್ಲ. ಹೋದ ಹೋದಂತೆ ಅದು ಅಷ್ಟು ದೂರದಲ್ಲಿದೆ ಎಂಬುದು ಮನವರಿಕೆಯಾಯಿತು. ಮತ್ತಷ್ಟು ದೂರ ನಡೆದರು. ಆದರೆ, ನೀರಿನ ಸೂಚನೆಯೇ ಇಲ್ಲ.

ಸ್ವಾಮೀಜಿ ಆಯಾಸದಿಂದ ಮರಳ ಮೇಲೆ ಕುಳಿತು ಆಲೋಚಿಸಿದರು. ಆಗ ಅವರ ಬುದ್ಧಿಗೆ ಸತ್ಯ ಗೋಚರಿಸಿತು. ಕಂಡಿದ್ದು ಸರೋವರವಲ್ಲ;ಮರೀಚಿಕೆ ಅಥವಾ ಬಿಸಿಲ್ಗುದುರೆ. ಆಗ, ತಿಳಿದು, ತಿಳಿದು, ಬಿಸಿಲುಗುದುರೆಯ ಮೋಸಕ್ಕೆ ಬಲಿಯಾದೆನಲ್ಲ ಎಂದು ಅವರಿಗೆ ನಾಚಿಕೆಯಾದಂತಾಯಿತು. ತಕ್ಷಣವೇ ಮತ್ತೊಂದು ಆಲೋಚನೆ ಮೂಡಿತು. ಈ ಜೀವನವೂ ಹೀಗೆ ಅಲ್ಲವೇ. ಇದೊಂದು ಮಾಯೆ. ಜಗತ್ತಿನಲ್ಲಿ ಸುಖವನ್ನು ಅರಸಿಕೊಂಡು ಹೊರಟ ಮನುಷ್ಯರನ್ನು ಮಾಯೆ ಮೋಸಗೊಳಿಸುವುದೂ ಹೀಗೆಯೇ ಅಲ್ಲವೇ?

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಕಷ್ಟದಲ್ಲಿ ನಮ್ಮೊಂದಿಗೆ ದೇವರು ಇರುತ್ತಾನೆಯೇ?

**ಭಕ್ತನೊಬ್ಬ** ಅದೊಂದು ದಿನ ಭಗವಂತನಲ್ಲಿ, 'ನಾನು ನಿನ್ನನ್ನು ಅತ್ಯಂತ ಭಕ್ತಿಯಿಂದ ಆರಾಧಿಸುತ್ತೇನೆ. ಆದರೂ ಇದುವರೆಗೂ ನನಗೆ ನಿನ್ನ ಅನುಭೂತಿ ಆಗಿಲ್ಲ. ನೀನು ಇದ್ದೀಯ ಎಂಬುದು ನನ್ನ ಅನುಭವಕ್ಕೆ ಬರುವಂತೆ ಮಾಡು' ಎಂದು ಬೇಡಿಕೊಂಡ.

ಆಗ ಪರಮಾತ್ಮ 'ಸರಿ, ಕಡಲ ಕಿನಾರೆಯ ಮರಳಿನಲ್ಲಿ ನಡೆದಾಗ ನಿನಗೆ ನಾಲ್ಕು ಹೆಜ್ಜೆಗಳು ಕಾಣಿಸುತ್ತವೆ. ಎರಡು ಹೆಜ್ಜೆ ಗುರುತು ನನ್ನವು, ಉಳಿದೆರಡು ನಿನ್ನವೆಂದು ತಿಳಿ' ಎಂದು ಹೇಳಿದ. ಮರುದಿನವೇ ಭಕ್ತ ಸಮುದ್ರ ತೀರದ ಮರಳಿನಲ್ಲಿ ನಡೆದು ಹೋದ. ಇವನ ಎರಡು ಹೆಜ್ಜೆ ಗುರುತುಗಳೊಡನೆ ಮತ್ತೆರಡು ಹೆಜ್ಜೆ ಗುರುತುಗಳು ಕಾಣಸಿಕ್ಕವು. ಭಕ್ತ ಸಂತಸಗೊಂಡ.

ಒಂದು ಬಾರಿ ಭಕ್ತನಿಗೆ ವ್ಯವಹಾರದಲ್ಲಿ ನಷ್ಟವಾಯಿತು. ನೆಂಟರಿಷ್ಟರೇ ದೂರ ಸರಿಯತೊಡಗಿದರು. ಸಮುದ್ರದ ತಟದಲ್ಲಿ ಎರಡು ಹೆಜ್ಜೆ ಗುರುತುಗಳು ಮಾತ್ರ ಕಾಣಸಿಕ್ಕುತ್ತಿದ್ದವು. ಇವನ ವ್ಯಾವಹಾರಿಕ ಬದುಕಿನಲ್ಲಿ ಸುಧಾರಣೆ ಕಂಡುಬಂದಾಗ ದೂರ ಹೋಗಿದ್ದವರೆಲ್ಲರೂ ಮತ್ತೆ ಹತ್ತಿರ ಬರತೊಡಗಿದರು. ಮರಳಿನ ಮೇಲೆ ಮತ್ತೆರಡು ಹೆಜ್ಜೆಗಳು ಮತ್ತೆ ಕಾಣಿಸಿಕೊಳ್ಳತೊಡಗಿದವು. ಭಕ್ತನಿಗೆ ದೇವರು ತನ್ನನ್ನು ಬಿಟ್ಟು ಹೋದ ಸಂದೇಹ ಬಂತು. ಆಗ ಪರಮಾತ್ಮ, 'ನಿನ್ನ ಕಷ್ಟಕಾಲದಲ್ಲಿ ನಾನು ನಿನ್ನನ್ನು ಮಡಿಲಲ್ಲಿ ಇಟ್ಟುಕೊಂಡು ಸಾಗುತ್ತಿದ್ದೆ. ಆಗ ಕಾಣುತ್ತಿದ್ದ ಹೆಜ್ಜೆ ಗುರುತು ನನ್ನವು. ಯಾವಾಗ ನೀನು ಸ್ವ-ಸಮರ್ಥ ಎಂದು ನನಗೆ ಎನ್ನಿಸಿತೋ ಆಗ ನಾನು ನಿನ್ನನ್ನು ಕೆಳಕ್ಕೆ ಇಳಿಸಿದೆ. ಹಾಗಾಗಿ ನಿನ್ನ ಹೆಜ್ಜೆಗುರುತುಗಳು ಈಗ ಕಾಣಿಸುತ್ತಿವೆ' ಎಂದು ಹೇಳಿದ.

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಕಾಮಾಂಧರಿಗೆ ಜಗತ್ತು ಕಾಣದು!

**'ಕಾಮಾತುರಾಣಾಂ ನ ಭಯಂ, ನ ಲಜ್ಜಾ'** ಎನ್ನುವ ಉಕ್ತಿಯುಂಟು. ಕಾಮಾತುರರಿಗೆ ಹೆದರಿಕೆ, ಮಾನ-ಮರ್ಯಾದೆ, ಲೋಕಾಪವಾದ ಇವುಗಳ ಪರಿವೆಯೇ ಇರುವುದಿಲ್ಲ. ಅವರಿಗೆ ಕಾಮವೊಂದೇ ಪುರುಷಾರ್ಥ. ಮನುಷ್ಯನಿಗೆ ಸಂಪತ್ತಿನ ಹುಚ್ಚು, ಅಧಿಕಾರದ ಹುಚ್ಚು, ಪ್ರತಿಷ್ಠೆಯ ಹುಚ್ಚು ಮೊದಲಾದ ಅನೇಕ ರೀತಿಯ ಸ್ವಯಂಕೃತ ಪ್ರಾರಬ್ಧಗಳಿಂದ ಉಂಟಾಗುವ ಹುಚ್ಚು ಹಿಡಿಯುತ್ತದೆ. ಇವೆಲ್ಲವುಗಳಿಗಿಂತಲೂ ಭೀಕರವಾದದ್ದು 'ಕಾಮ'ದ ಹುಚ್ಚು.

ನಿಜವಾದ ಹುಚ್ಚನಿಗೆ ಜಗತ್ತು ಅರ್ಥವಾಗದೇ ಇದ್ದರೂ ಜಗತ್ತು ಕಾಣುತ್ತದೆ. ಆದರೆ, ಕಾಮಾಂಧರಿಗೆ ಜಗತ್ತು ಕಾಣುವುದಿಲ್ಲ. ಮಹಾಕವಿ ಕಾಳಿದಾಸ ತನ್ನ ಕೃತಿಗಳಲ್ಲಿ ಇವರ ರೀತಿನೀತಿಗಳನ್ನು ವಸ್ತುನಿಷ್ಠವಾಗಿ ಚಿತ್ರಿಸಿದ್ದಾನೆ. ಕಾಮ ಪರವಶನಾದವನು ಎಲ್ಲವೂ ತನಗೆ ಸಂಬಂಧಿಸಿದ್ದು ಎಂದೇ ಭಾವಿಸುತ್ತಾನೆ. ಅಷ್ಟೇ ಅಲ್ಲ, ಜಡ ಮತ್ತು ಚೇತನಗಳಲ್ಲಿ ಅಂತರವೇ ತಿಳಿಯುವುದಿಲ್ಲ ಎಂದು ಕಾಮದ ಉದ್ರಿಕಾವಸ್ಥೆಯನ್ನು ಸೂಚಿಸುತ್ತಾನೆ. ಪ್ರೇಮ ಕುರುಡು ಎಂದು ಷೇಕ್ಸ್‌ಪಿಯರ್ ಅಭಿಪ್ರಾಯ ಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

ಶೂರ್ಪನಖಿಯನ್ನು ದೃಷ್ಟಾಂತವಾಗಿಟ್ಟು ಕವಿ ಕಾಳಿದಾಸ ಹೇಳಿದ ಮಾತು, 'ಉದ್ರಿಕ್ತ ಮನ್ಮಥನಿಗೆ ಕಾಲ ಜ್ಞಾನದ ಪರಿವೆ ಇರುವುದಿಲ್ಲ'. ಪ್ರೀತಿಯೂ ಕಾಲ, ಸಮಯದ ಚೌಕಟ್ಟಿನಲ್ಲಿ ಇದ್ದಾಗ ಮಾತ್ರ ಶೋಭಿಸುತ್ತದೆ. ಇಂದಿನ ಸಮಾಜದಲ್ಲಿ ನಡೆಯುವ ಅಹಿತಕರ ದೃಶ್ಯಗಳು ಮತ್ತು ಸನ್ನಿವೇಶಗಳನ್ನು ನೋಡಿದರೆ ಈ ಮಾತು ಸತ್ಯವೆಂದು ಅನಿಸುವುದಿಲ್ಲವೇ?

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಬಾಹ್ಯರೂಪಕ್ಕಿಂತ ಆತ್ಮಸೌಂದರ್ಯವೇ ಶ್ರೇಷ್ಠ

**ಎ**ಲ್ಲರ ಅಂತರ್ಯದಲ್ಲೂ ಪರಮಾತ್ಮನ ಅಂಶವಾದ ಆತ್ಮವಿದೆ. ಆ ಆತ್ಮವು ಸತ್ -ಚಿತ್ - ಆನಂದ ಸ್ವರೂಪದ್ದು. ಅದು ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿಗಳನ್ನೇ ಪ್ರತಿನಿಧಿಸುವುದರಿಂದ ಆತ್ಮದಲ್ಲಿ ಆ ಎಲ್ಲ ಶಕ್ತಿಗಳೂ ಸಮಾಹಿತಗೊಂಡಿವೆ. ಅವುಗಳಿಂದಲೇ ವ್ಯಕ್ತಿಯ ಶಕ್ತಿ-ಸಾಮರ್ಥ್ಯ ನಿರ್ಧರಿತವಾಗುತ್ತದೆ. ಆದರೆ, ಈ ಶಕ್ತಿಗಳ ತೀವ್ರತೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ಇರುವುದರಿಂದ ಅವರ ಸಾಮರ್ಥ್ಯದಲ್ಲೂ ವ್ಯತ್ಯಾಸ ಇರುತ್ತದೆ.

ಹೇಗೆ ಗಿಡದ ಹಿರಿಮೆಯ ನಿಷ್ಕರ್ಷೆ ಅದು ನೀಡುವ ಫಲ-ಪುಷ್ಪಗಳಿಂದಲೇ ಹೊರತು ಅದರ ಬಾಹ್ಯ ಸೊಂಪುತನದಿಂದ ಅಲ್ಲವೋ ಹಾಗೆಯೇ, ವ್ಯಕ್ತಿಯ ಹಿರಿಮೆಯ ನಿಷ್ಕರ್ಷೆಯೂ ಆತನ ಶಕ್ತಿ- ಸಾಮರ್ಥ್ಯದಿಂದಲೇ ಹೊರತು ಅವನ ಬಾಹ್ಯಸೌಂದರ್ಯದಿಂದ ಅಲ್ಲ. ವ್ಯಕ್ತಿಯ ಶಕ್ತಿ- ಸಾಮರ್ಥ್ಯವು ಅಂತರ್ಯದ ಶಕ್ತಿಯನ್ನು ಅವಲಂಬಿಸಿದೆಯೇ ಹೊರತು ಆಕಾರ -ಅಲಂಕಾರ, ಬಣ್ಣ -ಬೆಡಗುಗಳನ್ನಲ್ಲ.

ಆತ್ಮ ದೃಷ್ಟಿ ಇದ್ದಲ್ಲಿ ಬಾಹ್ಯಸೌಂದರ್ಯ ಗೌಣವಾಗಿ, ಅಂತಃಶಕ್ತಿ ಅಥವಾ ಶಕ್ತಿ–ಸಾಮರ್ಥ್ಯ ಪ್ರಧಾನವಾಗುತ್ತದೆ. ಆಗ ದೇಹದ ಅಂತಃಸತ್ವ ವರ್ಧನೆಯು ಮಹತ್ವದ್ದೆನಿಸುತ್ತದೆ.

'ದೇಹವು ಮೂಳೆ -ಮಾಂಸದ ತಡಿಕೆ' ಎಂಬ ಸತ್ಯ ದರ್ಶನವಾಗಿ, ನಶ್ವರವಾದ ಚರ್ಮದ ಬಣ್ಣ, ರೂಪ-ಲಾವಣ್ಯಗಳ ಮೋಹಕತೆಗೆ ಮರುಳಾಗುವುದು ಅರ್ಥಹೀನವೆನಿಸುತ್ತದೆ. ಹಾಗಾಗಿ, ಆತ್ಮದೃಷ್ಟಿ ಅರಿತ ವ್ಯಕ್ತಿ ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ಮೋಹ-ಮಾಯೆಗೆಂದೂ ಬೀಳಲಾರ. ಆತ ಬೆಲೆ ಕೊಡುವುದು ವ್ಯಕ್ತಿಯ ಒಳಗಿನ ಸತ್ವ-ಸಾಮರ್ಥ್ಯಕ್ಕೇ ಹೊರತು ಹೊರಗಿನ ಬೆಡಗು ಬಿನ್ನಾಣಕ್ಕಲ್ಲ. ಆತ ಬಯಸುವುದು ಶಾಶ್ವತ ಸುಖ ಕೊಡುವುದನ್ನೇ ಹೊರತು ಕ್ಷಣಿಕ ಸುಖ ಕೊಡುವಂಥದ್ದಲ್ಲ.

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಹಂಬಲದ ಮಹಿಮೆ ಅಪಾರ

ತೀವ್ರ ಹಂಬಲ, ತೀವ್ರ ಅಭೀಪ್ಸೆಗಳೇ ಗುರಿ ಸಾಧಿಸಲು ಯೋಗ್ಯವಾದ ವಾತಾವರಣದೆಡೆಗೆ ನಮ್ಮನ್ನು ಸೆಳೆಯುವುವು! ಆಧ್ಯಾತ್ಮಿಕ ಜಗತ್ತಿನಲ್ಲೂ ತೀವ್ರ ಹಂಬಲ, ತೀವ್ರ ವ್ಯಾಕುಲತೆ ಇತ್ತು ಎಂದಾದರೆ ದೇವರನ್ನು ಪಡೆಯಬಹುದು.

'ತೀವ್ರ ವ್ಯಾಕುಲತೆ ಇತ್ತು ಎಂದರೆ ಅರುಣೋದಯವಾದ ಹಾಗೆ. ಇನ್ನು ಸೂರ್ಯೋದಯಕ್ಕೆ ತಡವಿಲ್ಲ' ಎಂದು ಭಗವಾನ್ ಶ್ರೀರಾಮಕೃಷ್ಣರು ಹೇಳಿದ್ದಾರೆ.

'ಸತ್ಯದ ಮಹಾಸಾಗರದಲ್ಲಿ ಮನುಷ್ಯನು ಏನನ್ನು ಬಯಸುತ್ತಾನೋ ಅದನ್ನು ಪಡೆಯುತ್ತಾನೆ. ದೇವರಿಗಾಗಿ ಕಾತರಿಸಿದ ಅಸಿಸ್‌ನ ಸಂತ ಫ್ರಾನ್ಸಿಸ್ ದೈವ ಸಾಕ್ಷಾತ್ಕಾರ ಪಡೆದ. ಸೃಷ್ಟಿಯ ಹಿನ್ನೆಲೆಯ ನಿಯಮಗಳನ್ನು ಹುಡುಕಾಡಿದ ಐನ್‌ಸ್ಟಿನ್ ವಿಶ್ವವ್ಯಾಪಕ ನಿಯಮಗಳನ್ನು ಕಂಡುಹಿಡಿದ.

'ದೇಶ ಕಾಲಾತೀತನಾಗಿ ಪ್ರಜ್ಞೆಯ ಅನಿರ್ವಚನೀಯ ರಾಜ್ಯದಲ್ಲಿ ವಿಜೃಂಭಿಸುವ ದೇವರೂ, ಪ್ರೀತಿಯ ವ್ಯಾಕುಲ ಮೊರೆಗೆ ಮಾತ್ರ ಲಭ್ಯನು' ಎಂಬುದು ನೊಬೆಲ್ ಪಾರಿತೋಷಕ ವಿಜೇತ ವಿಜ್ಞಾನಿ ಡಾ. ಅಲೆಕ್ಸಿಸ್ ಕೆರೆಲ್ ಹೇಳಿದ ಮಾತು!

ನೋಡಿದಿರಾ ಈ ಹಂಬಲದ ಮಹಿಮೆ!

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸಾಮಾಜಿಕ ಮೌಲ್ಯ ಪಾಲನೆ ಅಗತ್ಯ

**ಸತ್ಯಪ್ರಿಯತೆ,** ನ್ಯಾಯ ಪರತೆ, ಪರೋಪಕಾರ ಬುದ್ಧಿ, ಆತ್ಮಸಂಯಮ ಈ ಗುಣಗಳನ್ನು ಎಲ್ಲ ಧರ್ಮ ಬೋಧಕರೂ ಕೊಂಡಾಡುತ್ತಾರೆ. ಎಲ್ಲ ಧರ್ಮಗ್ರಂಥಗಳೂ ಬೋಧಿಸುತ್ತವೆ. ಧರ್ಮಗಳೇ ಏಕೆ? ಕೌಟುಂಬಿಕ, ಸಾಂಘಿಕ, ಸಾಮಾಜಿಕ ಹಿತ ಚಿಂತನೆ ಮಾಡುವ ಯಾವನೂ, ಬುದ್ಧಿ ಎಂಬ ವಿವೇಚನಾಶಕ್ತಿ ಇರುವವನೂ ಈ ಗುಣಗಳನ್ನು ಮೂಢನಂಬಿಕೆ ಎನ್ನಲಾರ. ಯಾವ ವಿಚಾರವಾದಿ ನಾಸ್ತಿಕನೂ, ವೈಜ್ಞಾನಿಕ ಮನೋವೃತ್ತಿಯವನೂ ಮೇಲಿನ ಸದ್ಗುಣಗಳನ್ನು ವಿರೋಧಿಸಲಾರ.

ವ್ಯಕ್ತಿಯ ಅಭ್ಯುದಯ, ಸಮಾಜದ ಕಲ್ಯಾಣ ಎಂಬ ಎರಡು ಫಲಗಳನ್ನು ನೀಡುವ, ಅನುಷ್ಠಾನ ಯೋಗ್ಯವಾದ ಮುಖ್ಯ ನಿಯಮಗಳು ಯೋಗಶಾಸ್ತ್ರದಲ್ಲಿ ಯಮ, ನಿಯಮಗಳೆಂದು ಕರೆಯಲಾಗುವ ಈ ಸದ್ಗುಣಗಳು ಅಥವಾ ಮೌಲ್ಯಗಳು. ತಾನು ಚೆನ್ನಾಗಿ ಬದುಕಿ ಇತರರನ್ನು ಚೆನ್ನಾಗಿ ಬದುಕಗೊಡುವ, ಇತರರ ಸ್ವಾತಂತ್ರ್ಯ ಹಾಗೂ ಬೆಳವಣಿಗೆಗೆ ಮಾರಕವಾಗದಂತೆ ನಡೆದುಕೊಳ್ಳುವ ಸಂಸ್ಕಾರ ಈ ಗುಣಗಳ ಬೆಳವಣಿಗೆಯಿಂದ ಸಾಧ್ಯವಾಗುವುದು. ಆದ್ದರಿಂದ ಈ ಗುಣಗಳನ್ನು ಸಾಮಾಜಿಕ ಮೌಲ್ಯಗಳು ಎನ್ನಬಹುದು.

ಮನಸ್ಸು, ಮಾತು, ಕೃತಿಗಳಿಂದ ಯಾರಿಗೂ ಕೇಡನ್ನು ಬಯಸದೇ ಎಲ್ಲರೆಡೆಗೂ ಶುಭ ಚಿಂತನೆಯನ್ನು ಹರಿಯಬಿಡುವ ಮನೋವೃತ್ತಿಯೇ ಅಹಿಂಸೆ. ಅಂತೆಯೇ ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಪರರ ವಸ್ತುಗಳನ್ನು ಬಯಸದೇ ಇರುವ ಗುಣಗಳೂ ಮುಖ್ಯ. ವ್ಯಕ್ತಿಗಳ ಸಾಂಘಿಕ ಜೀವನದ ಸುವ್ಯವಸ್ಥೆಗೆ ಇವುಗಳ ಪಾಲನೆ ಅತ್ಯಗತ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸತ್ಕಾರ್ಯದ ಪ್ರೇರಕ ಶಕ್ತಿ ದೃಢವಿಶ್ವಾಸ

ನಮ್ಮ ಬದುಕು ಎಷ್ಟೇ ನಿರಾಶಾದಾಯಕವಾದರೂ ಅದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲಿದೆ. ನಮ್ಮ ಅಂತರ್ಯದಲ್ಲೇ ಇದೆ. ಪ್ರತಿಯೊಬ್ಬ ಮನುಷ್ಯನ ಮನಸ್ಸಿನ ಆಳದಲ್ಲಿ ಸಾವಿಲ್ಲದ, ನೋವಿಲ್ಲದ ದೈವೀಶಕ್ತಿ ಇದೆ. ಮಾರ್ಗದರ್ಶನ, ಶಕ್ತಿ, ಸಹಾಯ, ಸ್ಫೂರ್ತಿ ಶಾಂತಿ ಇವೇ ಮೊದಲಾದ ಬದುಕನ್ನು ಬೆಳಗುವ ಅಂಶಗಳು ನಮ್ಮಲ್ಲಿವೆ.

ಇಂಥ ಅಪಾರ ಶಕ್ತಿಯನ್ನು ಒಳಗಡೆ ಇರಿಸಿಕೊಂಡು ಗುಲಾಮರಂತೆ ವರ್ತಿಸಲು ಕಾರಣವೇನು? ಒಂದು ಅಜ್ಞಾನ, ಇನ್ನೊಂದು ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ.

ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ, ಒಳಗಿನ ಆ ಅಪಾರವಾದ ಶಕ್ತಿಯನ್ನು ಪರಿಮಿತಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಒಂದು ಆತ್ಮವಿಶ್ವಾಸದ ಮತ್ತು ರಚನಾತ್ಮಕ ಯೋಚನೆಯು ನಮ್ಮ ಅಭ್ಯುದಯ ಅಭಿವೃದ್ಧಿಗೆ ನೆರವಾಗುತ್ತದೆ.

‘ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನೀವೇ ಎಂಬುದನ್ನು ಮರೆಯಬೇಡಿ. ಎಲ್ಲ ಹೊಣೆಯನ್ನು ಹೊರಲು ಸಿದ್ಧರಾಗಿ, ಮಿಂಚಿಹೋದ ಕಾರ್ಯವನ್ನು ಕುರಿತು ಚಿಂತಿಸುತ್ತಾ ವ್ಯರ್ಥ ಕಾಲಹರಣ ಮಾಡಬೇಡಿ. ಅನಂತ ಭವಿಷ್ಯ ನಿಮ್ಮ ಮುಂದೆ ಇದೆ’ ಈ ಸಂಗತಿಯನ್ನು ಸದಾ ನೆನಪಿನಲ್ಲಿಡಬೇಕು. ❖

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಭಗವಂತನ ಪಾದಕ್ಕೆ ಶರಣಾಗಿ

**ಕಾರಣವಿಲ್ಲದೆ** ಕಷ್ಟ ಬರುವುದಿಲ್ಲ. ಭಗವಂತ ಯಾವತ್ತಿಗೂ ಜೀವಿಗಳನ್ನು ಕಷ್ಟದ ಕೊಠಡಿಯಲ್ಲಿ ನೂಕಿ ತಮಾಷೆ ನೋಡುವುದಿಲ್ಲ. ಯಾವ ಜೀವಿ ಸಹಾಯಕ್ಕಾಗಿ ಹಾತೊರೆಯುವುದೋ ಆ ಜೀವಿಗೆ ಆ ಸಂದರ್ಭಕ್ಕೆ ತಕ್ಕಂತೆ ಎಲ್ಲ ರೀತಿಯಿಂದ ಸಹಾಯ ಮಾಡುತ್ತಾನೆ. ಹಾಗಾಗಿ ಭಗವಂತನಲ್ಲಿ ದೃಢ ನಂಬಿಕೆ, ಶ್ರದ್ಧೆ ಇಡಬೇಕು. ಬದುಕಿನ ಸಂಕಟದಿಂದ ಪಾರಾಗುವ ಬಗೆ ಹೇಗೆ? ಎಂಬ ಅನೇಕರ ಪ್ರಶ್ನೆಗೆ ಉತ್ತರ ಇದು.

ಕಾಲಚಕ್ರದ ಉರುಳಾಟದಲ್ಲಿ ದುಃಖ, ಸಂತಸ, ಸಹಜ. ಕಷ್ಟ ಪರಂಪರೆಯೇ ಬಂದರೂ ಧೃತಿಗೆಡಬಾರದು. ಹಿಂದೆ ಆಗಿದ್ದನ್ನು ಚಿಂತಿಸಬಾರದು. ಭಗವಂತ ಯಾರನ್ನೂ ಎಂದೂ ಎಂಥ ಸಂದರ್ಭದಲ್ಲಿಯೂ ಕೈಬಿಡುವುದಿಲ್ಲವೆಂಬ ನಿತ್ಯ ಸತ್ಯವನ್ನು ಮರೆಯಬಾರದು. 'ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ' ಎಂಬ ದಾಸವಾಣಿ ಸತ್ಯಸ್ಯ ಸತ್ಯ.

ನಮ್ಮ ಎಲ್ಲ ದುಃಖ, ದುಮ್ಮಾನಗಳಿಗೂ ಕಾರಣ ಉಂಟು. ಅಂತೆಯೇ ಸತ್ಕರ್ಮ ಮಾಡಿದ್ದಕ್ಕೆ ಖಂಡಿತ ಫಲವುಂಟು. ದೇವರು, ಕರ್ಮ ನಿಯಮದಂತೆ ಕೆಲಸ ಮಾಡಲು ಪ್ರೇರಣೆ ಮಾಡುತ್ತಾನೆ. ಜೀವನದಲ್ಲಿ ಬರುವ ನೋವನ್ನು ಭಗವಂತನ ಕಡೆ ಮುಂದುವರಿಯಲು ಕೊಟ್ಟ ವರವೆಂದು ಭಾವಿಸಿ ಮುಂದುವರಿಯಬೇಕು. ಬೆಂಕಿಯಲ್ಲಿ ಬೆಂದ ಬಾಳು ಹಸನಾಗುವುದು-ಪುಟಕ್ಕಿಟ್ಟ ಚಿನ್ನದಂತಾಗುವುದು. ಉಜ್ವಲ ಭವಿಷ್ಯಕ್ಕಾಗಿ ಭಯ ಬಿಟ್ಟು ಸಹನೆಯಿಂದ ಕಾಯಬೇಕು. ಎಲ್ಲ ದುಃಖ, ಸಂಕಟಗಳಿಗೂ ಶಾಶ್ವತ ಪರಿಹಾರ ಒಂದೇ ಒಂದು;ಭಗವಂತನ ಪಾದದಲ್ಲಿ ಶರಣಾಗುವುದು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸರಳತೆ ಜನ್ಮ ಜನ್ಮಗಳ ಪುಣ್ಯದ ಫಲ

**ಸರಳತೆಯ** ಗುಣ ಅಷ್ಟು ಸರಳವಾಗಿ ದಕ್ಕುವಂತಹುದಲ್ಲ. ಅನೇಕ ಜನ್ಮಗಳ ಪುಣ್ಯದ ಫಲವಾಗಿ ಒಬ್ಬ ವ್ಯಕ್ತಿಯು ಸರಳವಾಗಿ ಹುಟ್ಟುತ್ತಾನೆ. ಸರಳತೆ ಅತ್ಯಂತ ಸ್ವಾಭಾವಿಕವಾದರೂ ಸ್ವಾಭಾವಿಕ ಸ್ಥಿತಿಯಲ್ಲಿರುವುದು ಅತ್ಯಂತ ಸುಲಭವಾದರೂ ಅಸ್ವಾಭಾವಿಕವಾಗಿರುವುದೇ ಜನರ ಸ್ವಭಾವವಾಗಿರುತ್ತದೆ. ಇದಕ್ಕೆ ಸಾಮಾಜಿಕ ಸನ್ನಿವೇಶಗಳೂ ಬಹುಮಟ್ಟಿಗೆ ಕಾರಣಗಳಾಗಿರುತ್ತವೆ.

ಬಾಹ್ಯ ಸರಳತೆಯು ಆಂತರಿಕ ಸರಳತೆಯನ್ನು ಅವಲಂಬಿಸಿರುತ್ತದೆ. ಅಂತರಿಕ ಸರಳತೆಯನ್ನು ಕೆಡಿಸುವ ಶಕ್ತಿ ಯಾವುದೆಂದರೆ ರಾಗದ್ವೇಷಗಳಿಂದ ಉಕ್ಕುವ ಬಲವಾದ ಭಾವೋದ್ವೇಗಗಳು. ಇಂತಹ ಭಾವೋದ್ವೇಗಗಳ ಒತ್ತಡಕ್ಕೆ ಒಳಗಾದಾಗ ಆಲೋಚನೆಗಳು ವಕ್ರವಾಗುತ್ತವೆ. ಹಾಗೆಯೇ ಭಾವೋದ್ವೇಗಗಳ ಪ್ರಭಾವದಿಂದಾಗಿ ನಮ್ಮ ಆಲೋಚನೆಗಳು ವಿಕೃತಗೊಳ್ಳುತ್ತವೆ. ವಸ್ತುನಿಷ್ಠವಾಗಿ ಆಲೋಚಿಸುವ ಸಾಮರ್ಥ್ಯವನ್ನು ನಾವು ಕಳೆದುಕೊಳ್ಳುತ್ತೇವೆ.

ನಮ್ಮ ಆಲೋಚನೆ ನೇರವೂ, ಸರಳವೂ ಆಗಿದ್ದರೆ, ನಮ್ಮಲ್ಲಿ ಯಥಾರ್ಥ ದೃಷ್ಟಿಯಿದ್ದರೆ, ವ್ಯಕ್ತಿ ಮತ್ತು ಘಟನೆಗಳು ದೋಷಯುಕ್ತವಾಗಿ ಕಾಣುವುದಿಲ್ಲ, ವಾಸ್ತವವಾಗಿ ಕಾಣುತ್ತವೆ.

ಶ್ರೀಮಾತೆ ಶಾರದಾದೇವಿಯವರ ಮನಸ್ಸು ಸರಳವಾಗಿದ್ದುದರಿಂದ ಅವರು ದೋಷ ದರ್ಶಿಗಳಾಗಿರಲಿಲ್ಲ. ಒಬ್ಬ ಕಳ್ಳನನ್ನು ಸಹಾನುಭೂತಿಯಿಂದ ಪುತ್ರನನ್ನಾಗಿ ಸ್ವೀಕರಿಸಿದರು. ಅವರ ಮನಸ್ಸು ಭಾವೋದ್ವೇಗಗಳಿಂದ ವಿಕೃತಗೊಂಡಿರಲಿಲ್ಲ. ವ್ಯಕ್ತಿಯನ್ನು ವ್ಯಕ್ತಿಯಾಗಿ ಕಂಡರು, ವ್ಯಕ್ತಿಯಾಗಿ ಪ್ರೀತಿಸಿದರು. ಆದ್ದರಿಂದ ಅವರ ಪ್ರೀತಿಯು ಎಲ್ಲರಿಗೂ ಸಮಾನವಾಗಿ ಹರಿಯಿತು.

ಜನರು ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವುದಕ್ಕೆ ಮುಖ್ಯ ಕಾರಣ ಅವರು ಸರಳತೆಯಿಂದ ದೂರವಾಗಿರುವುದು, ತೋರ್ಪಡಿಕೆಯ ನಡವಳಿಕೆಗಳಿಗೆ ಒತ್ತನ್ನು ನೀಡಿ ನಮ್ಮ ಸ್ವಾಭಾವಿಕತೆಯಿಂದ ದೂರವಾಗುತ್ತಿರುವುದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಎಲ್ಲರಲ್ಲೂ ತಾಯಿಯನ್ನು ಕಾಣಿ

ಈ ದೇಶದಲ್ಲಿ ಜಗದ ಆದಿ ಕಾರಣ ಅಥವಾ ದೇವರನ್ನು ವಿವಿಧ ಭಾವಗಳಿಂದ ಸಮೀಪಿಸಬಹುದು ಎಂಬುದನ್ನು ಸ್ವಾನುಭವದಿಂದ ಕಂಡುಕೊಂಡ ಈ ಸತ್ಯವನ್ನು ಸಂತರು ಬೋಧಿಸಿದ್ದರು.

ಈ ಯುಗದಲ್ಲಿ ರಾಮಕೃಷ್ಣರು ತಮ್ಮ ಬದುಕಿನಲ್ಲಿ ಅದನ್ನು ಸಾಧಿಸಿ, ದಿವ್ಯ ಅನುಭೂತಿಯನ್ನು ಪಡೆದುಕೊಂಡಿದ್ದರು. ಶಿಷ್ಯರಿಗೂ ಮಾರ್ಗದರ್ಶನ ಮಾಡಿ, ಆ ವಿಚಾರದ ಸತ್ಯತೆ ಸಾರಿದರು.

‘ದೇವರನ್ನು ತಂದೆ ಎನ್ನುವ ಭಾವದಿಂದ ಪೂಜಿಸಬಹುದು. ತಾಯಿ ಎನ್ನುವ ಭಾವದಿಂದ ಪ್ರಾರ್ಥಿಸಿ ಸಮೀಪಿಸಬಹುದು. ಭಗವಂತನನ್ನು ತಾಯಿ ಎಂದು ಸಂಬೋಧಿಸಿದರೆ ಬಹುಬೇಗ ಹೃದಯದಲ್ಲಿ ಭಕ್ತಿ ಉಂಟಾಗಿ ಬಿಡುತ್ತದೆ’ ಎಂದರು ರಾಮಕೃಷ್ಣರು. ಸಖನೆಂದು ನಂಬಿ ಆಧ್ಯಾತ್ಮಿಕವಾಗಿ ಮುನ್ನಡೆಯಬಹುದು. ದಾಸ್ಯಭಾವದಿಂದ ಸಾಧನೆ ಮಾಡಬಹುದು. ಭಗವಂತನ ಸಾನ್ನಿಧ್ಯ ಸಾಧನೆಗೆ ಯುಗದ ವಿಶಿಷ್ಟ ಆದರ್ಶ ಮಾತೃ ಭಾವದ ಸಾಧನೆ ಎಂದರು.

ಜಗದಾದಿ ಕಾರಣವನ್ನು 'ಅಮ್ಮಾ' ಎಂದು ಕರೆಯುವುದು, ಎಲ್ಲರಲ್ಲೂ ಮಾತೆಯನ್ನೇ ಕಾಣುವುದು ಈ ಅನುಷ್ಠಾನದ ಗುರಿ. ಈ ವಿಧಾನ ಅಥವಾ ಭಾವ ದೃಢವಾದರೆ ಮನುಷ್ಯ ತನ್ನ ಎಲ್ಲ ಪರಿಮಿತಿಗಳಿಂದ ಪಾರಾಗಿ ಪರಮಾರ್ಥವನ್ನು ಸುಲಭವಾಗಿ ಪಡೆಯಬಲ್ಲ ಎಂಬುದನ್ನು ಪರಮಹಂಸರು ಸಾಧಿಸಿ, ಬೋಧಿಸಿ ತೋರಿಸಿದರು. ಇಂತಹ ಪರಮಹಂಸ ರಾಮಕೃಷ್ಣರು ಭಕ್ತರ ಬೇಡಿಕೆಗಳನ್ನೆಲ್ಲ ಈಡೇರಿಸಿದ ಶುಭದಿನ ಇಂದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಮನಸ್ಸಿನ ಶಕ್ತಿ ಅಗಾಧ

ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು. ಹಾಗೆಯೇ ಗುಣಪಡಿಸಲೂ ಬಲ್ಲದು. ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ ಉತ್ಸಾಹಯುತ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಮ್ಮಲ್ಲಿ ಸಂತೋಷ, ತೃಪ್ತಿ, ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ.

ಹಾಗೆಯೇ, ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ-ಅಸೂಯೆ ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡುಕನ್ನು ಉಂಟುಮಾಡಿ ರೋಗಕ್ಕೆ ಕಾರಣವಾಗುತ್ತವೆ.

ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢನಿಶ್ಚಯ ಇವೇ ಮೊದಲಾದ ಭಾವಗಳು ಶರೀರದ ಸುಸ್ಥಿತಿಗೆ ಆರೋಗ್ಯವರ್ಧಕ ಟಾನಿಕ್‌ಗಿಂತಲೂ ಹೆಚ್ಚಿನ ಸಹಾಯಮಾಡುತ್ತವೆ! ಮನಸ್ಸೇ ದೇಹವನ್ನು ತನ್ನ ಉದ್ದೇಶ ಸಾಧನೆಗಾಗಿ ನಿರ್ಮಿಸಿಕೊಳ್ಳುತ್ತದೆ.

ಮನುಷ್ಯನ ಬಂಧನಕ್ಕೂ, ಮೋಕ್ಷಕ್ಕೂ ಮನಸ್ಸೇ ಕಾರಣ. ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು.

ಮನಸ್ಸೆಂದರೆ ಅಸಂಖ್ಯ ಯೋಚನೆ, ಭಾವನೆ, ಕಲ್ಪನೆ, ಸಂಕಲ್ಪಗಳಿಂದ ಅಥವಾ ಇಚ್ಛಾ-ಕ್ರಿಯಾ-ಜ್ಞಾನಾತ್ಮಕ ಯೋಚನೆಗಳಿಂದ ಕೂಡಿದೆ. ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಜಟಿಲವೂ, ಅತ್ಯಂತ ಸೂಕ್ಷ್ಮವೂ, ಸಂಕೀರ್ಣವೂ ಆದ ಒಂದು ವಿಶಿಷ್ಟ ಶಕ್ತಿ. ಈ ಶಕ್ತಿಯ ಉಪಯೋಗದಿಂದಲೇ ನಮ್ಮ ಭವಿಷ್ಯವನ್ನು ನಾವು ನಿರ್ಮಿಸಿಕೊಳ್ಳಬೇಕು.



# ವಚನಾಮೃತ

**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಬಾಂಧವ್ಯ ವೃದ್ಧಿಯ ಸೂತ್ರಗಳು

ಮನುಷ್ಯರನ್ನು ಅವರ ಚಾರಿತ್ರ್ಯ, ವೈಶಿಷ್ಟ್ಯಗಳಿಗೆ ಅನುಗುಣವಾಗಿ, ಅವರನ್ನು ಬಾಹ್ಯವಾಗಿ ನಿಯಂತ್ರಿಸಲು ಉಪಯೋಗಿಸುವ ಉಪಾಯಗಳು ನಾಲ್ಕು. ಅವು ಸಾಮ,ದಾನ,ಭೇದ ಹಾಗೂ ದಂಡ.

ವಿಶ್ವಾಸದಿಂದ ಹೇಳುವ ಬುದ್ಧಿಮಾತುಗಳು 'ಸಾಮ'. ಎಲ್ಲೋ ಕೆಲವರು ಈ ಉಪಾಯಕ್ಕೆ ಒಲಿಯುವರು. ಬಹುಮಾನದ ಭರವಸೆ ನೀಡಿ, ಹೇಳುವ ಮಾತು ಹಲವರಿಗೆ ಆಪ್ಯಾಯಮಾನವೆನಿಸೀತು. ಅದುವೇ 'ದಾನ'. ಮೂರನೆಯದು 'ಭೇದ'. ಪೈಪೋಟಿಯ ಭಾವನೆಯನ್ನು ಉಂಟು ಮಾಡಿ ಕೆಲಸ ಮಾಡಿಸುವುದು. ಕೊನೆಯದೇ 'ದಂಡ'. ಭಯದಿಂದ ಎಚ್ಚರಿಕೆ ಕೊಟ್ಟು ಕೆಲಸ ಮಾಡಿಸುವುದು.

ಕೌಟುಂಬಿಕ ಜೀವನದಲ್ಲಾಗಲಿ, ಸಾಂಘಿಕ ಹಾಗೂ ಸಾಮಾಜಿಕ ಜೀವನದಲ್ಲಾಗಲಿ, ವ್ಯಕ್ತಿ-ವ್ಯಕ್ತಿಗಳೊಳಗಿನ ಮಧುರ ಬಾಂಧವ್ಯದ ಮೂಲ ಸೂತ್ರ ಯಾವುದು? ಲೋಕದ ವ್ಯವಹಾರಗಳಲ್ಲಿ, ಆಸೆಗಳನ್ನು ತೃಪ್ತಿ ಪಡಿಸಿಕೊಳ್ಳುವ ಆತುರದಲ್ಲಿ, ಮನುಷ್ಯ ತಾನು ಮಾಡುತ್ತಿರುವುದು ಧರ್ಮವೇ? ಎಂದು ಯೋಚಿಸುತ್ತ ಮುಂದೆ ಹೆಜ್ಜೆ ಇಡಬೇಕು.

ಸ್ವಾರ್ಥ ತ್ಯಾಗ, ಅಹಂಕಾರವನ್ನು ಮರೆತು ತನ್ನ ಪಾಲಿನ ಕರ್ತವ್ಯವನ್ನು ಪ್ರೀತಿಯಿಂದ ಮಾಡುವ ಸ್ಥೈರ್ಯದೊಂದಿಗೆ ಭಗವಂತನಲ್ಲಿ ಶ್ರದ್ಧೆ ಇಡಬೇಕು. ತನಗೆ ದೇವರಲ್ಲಿ ನಂಬಿಕೆ ಇದೆ ಅಥವಾ ಇಲ್ಲ ಎಂದರೂ ಸ್ವಾರ್ಥ, ಒಣಜಂಬ, ಅಹಂಕಾರವನ್ನು ದೂರಮಾಡಿ, ತಾಳ್ಮೆಯಿಂದ ತನ್ನ ಕರ್ತವ್ಯಪಾಲನೆ ಮಾಡಿ ವಿಶ್ವನಿಯಾಮಕನನ್ನು ಸಂತುಷ್ಟಿಗೊಳಿಸಬೇಕೆನ್ನುವ ವ್ಯಕ್ತಿ ಶಾಂತಚಿತ್ತನಾಗಿರಬಲ್ಲ. ಆ ಮೂಲಕ ಮಧುರ ಬಾಂಧವ್ಯವನ್ನೂ ವೃದ್ಧಿಸಿಕೊಳ್ಳಬಲ್ಲ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಛಲವೇ ಸಾಧನೆಯ ಚಾಲನ ಶಕ್ತಿ

**ಯಾವುದೇ** ಕ್ಷೇತ್ರದಲ್ಲಿ ಅತ್ಯುನ್ನತ ಸಿದ್ಧಿಯನ್ನು ಪಡೆದವರನ್ನು ಕಂಡಾಗ ಅವರಂತೆ ನಾವಾಗಲು ಸಾಧ್ಯವೇ ಇಲ್ಲ. ಅದೊಂದು ದೈವದತ್ತವಾದ ವರ ಎಂದು ನಾವು ತಿಳಿಯುವುದುಂಟು. ಅವರು ಆ ಮಟ್ಟವನ್ನು ಮುಟ್ಟುವುದಕ್ಕೆ ಮೊದಲು ವರ್ಷಗಳ ಕಾಲ ಅಭ್ಯಾಸ ಮಾಡಿದ್ದಾರೆ ಎಂಬುದನ್ನು ನಾವು ಮರೆಯುತ್ತೇವೆ. ಬಿಡದ ಛಲವೇ ಸಾಧನೆಯ ಚಲನಶಕ್ತಿ.

ಒಮ್ಮೆಲೇ ಎಲ್ಲರನ್ನೂ ಚಕಿತಗೊಳಿಸುವಂಥ ಅದ್ಭುತವನ್ನು ಸಾಧಿಸುವ ಆತುರ ನಮ್ಮನ್ನು ಎಷ್ಟೋ ವೇಳೆ ಕಂಗೆಡಿಸುತ್ತದೆ. ಹತಾಶರನ್ನಾಗಿ ಮಾಡುತ್ತದೆ. ಸಾವಿರ ಮೈಲಿ ಯಾತ್ರೆ ಒಂದು ಹೆಜ್ಜೆಯಿಂದ ಪ್ರಾರಂಭವಾಗುತ್ತದೆ. ಎಲ್ಲ ದೊಡ್ಡ ಕೆಲಸಗಳೂ ಸಣ್ಣ ಕೆಲಸಗಳ ಮೊತ್ತ. ಸಣ್ಣ ಕೆಲಸವನ್ನು ಪೂರ್ಣ ಮನಸ್ಸು ಕೊಟ್ಟು ಚೆನ್ನಾಗಿ ಮಾಡಲು ಸಮರ್ಥರಾದರೆ ದೊಡ್ಡ ಕೆಲಸವೂ ಚೆನ್ನಾಗಿಯೇ ಯಶಸ್ವಿಯಾಗುವುದು.

ಕೆಲವರಿಗೆ ಸಣ್ಣಪುಟ್ಟ ಕೆಲಸಗಳೆಂದರೆ ಬೇಸರ, ಕಿರಿಕಿರಿ. ಅಂತ ಕೆಲಸಗಳನ್ನವರು ಚಿಲ್ಲರೆ ವಿಷಯಗಳೆಂದು ತಿಳಿಯುತ್ತಾರೆ. ಅದನ್ನು ಮಾಡುವುದು ತಮಗೆ ಅಗೌರವವೆಂದೇ ತಿಳಿಯುತ್ತಾರೆ.

ದೊಡ್ಡ ಮನುಷ್ಯನು ಚಿಲ್ಲರೆ ವಿಷಯಗಳಲ್ಲೂ ದೊಡ್ಡತನದಿಂದ ನಡೆದುಕೊಳ್ಳುತ್ತಾರೆ. ಸಣ್ಣಪುಟ್ಟ ವಿಷಯಗಳನ್ನು ಆತ ನಿರ್ಲಕ್ಷಿಸುವುದಿಲ್ಲ. ಹೆಜ್ಜೆ ಹೆಜ್ಜೆ ಸರಿಯಾದರೆ ಮಾತ್ರ ದಾರಿ ಸಲೀಸು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಭಕ್ತಿಗೆ ಇದೆ ಅಗಾಧ ಶಕ್ತಿ

**ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ |**
**ತ್ವಾ ಮನುಸ್ಮರತ: ಸಾ ಮೇ ಹೃದಯನ್ಮಾಪಸರ್ಪತು||**

'ಅವಿವೇಕಿಗಳಿಗೆ ಕ್ಷಣಭಂಗುರವಾದ ಇಂದ್ರಿಯ ವಿಷಯಗಳ ಮೇಲೆ ಎಂತಹ ಅಚಲ ಪ್ರೀತಿ ಇರುವುದೊ ಅಂತಹ ಪ್ರೀತಿಯು ನಿನ್ನನ್ನು ಸ್ಮರಿಸುವ ನನ್ನ ಹೃದಯದಿಂದ ಎಂದಿಗೂ ದೂರವಾಗದಿರಲಿ'. ಭಕ್ತಿಯೋಗದ ವಿಚಾರವಾಗಿ ಕೊಟ್ಟಿರುವ ಅತ್ಯುತ್ತಮವಾದ ವಿವರಣೆ ಇದು. ಉತ್ತಮವಾದುದೇನನ್ನೂ ತಿಳಿಯದವರಿಗೆ, ವಿಷಯ ವಸ್ತುಗಳು, ದ್ರವ್ಯ, ಬಟ್ಟೆ, ಹೆಂಡತಿ, ಮಕ್ಕಳು, ಸ್ನೇಹಿತರು, ಆಸ್ತಿ ಮುಂತಾದವುಗಳ ಮೇಲೆ ಇರುವ ಪ್ರೀತಿ ಎಷ್ಟು ಪ್ರಬಲವಾದುದು ಎಂಬುದನ್ನು ನಾವು ನೋಡುತ್ತೇವೆ.

ಇಂತಹ ವಸ್ತುಗಳನ್ನು ಅವರು ಎಷ್ಟು ವಿಶ್ವಾಸದಿಂದ ಅಪ್ಪಿಕೊಂಡಿರುತ್ತಾರೆ! ಆದ ಕಾರಣವೇ ಮೇಲಿನ ಪ್ರಾರ್ಥನೆಯಲ್ಲಿ ಭಕ್ತನು 'ನಿನ್ನ ಮೇಲೆ ಮಾತ್ರ ನನಗೆ ಆಸಕ್ತಿ ಇರಲಿ, ನಿನ್ನನ್ನು ಮಾತ್ರ ನಾನು ನೆಚ್ಚಿಕೊಂಡಿರುವೆನು' ಎನ್ನುತ್ತಾನೆ. ಈ ಪ್ರೀತಿಯನ್ನೇ ನಾವು ಭಗವಂತನಿಗೆ ಅರ್ಪಿಸುವಾಗ ಭಕ್ತಿ ಯಾಗುವುದು. ನಮ್ಮಲ್ಲಿರುವ ಯಾವ ಸ್ವಭಾವವೂ ನಿಷ್ಪ್ರಯೋಜನ ಅಲ್ಲ. ಅದರ ಮೂಲಕ ನಾವು ಸ್ವಾಭಾವಿಕವಾಗಿ ಮೋಕ್ಷವನ್ನು ಪಡೆಯಬೇಕು ಎಂದು ಅದು ಬೋಧಿಸುತ್ತದೆ.

ಭಕ್ತಿಯು ನಮ್ಮ ಸ್ವಭಾವವನ್ನು ನಾಶಪಡಿಸುವುದಿಲ್ಲ. ಅದು ಪ್ರಕೃತಿಗೆ ವಿರೋಧವಾಗಿ ಹೋಗುವುದಿಲ್ಲ. ಆದರೆ ಅದಕ್ಕಿಂತಲೂ ಮತ್ತಷ್ಟು ಉತ್ತಮವಾದ, ಪ್ರಬಲವಾದ ದಾರಿಯನ್ನು ತೋರುವುದು. ಇಂದ್ರಿಯಕ್ಕೆ ಸಂಬಂಧಪಟ್ಟ ವಿಷಯವನ್ನು ನಾವು ಎಷ್ಟು ಸ್ವಾಭಾವಿಕವಾಗಿ ಪ್ರೀತಿಸುತ್ತೇವೆ! ಏಕೆಂದರೆ ಅವು ನಮಗೆ ಅಷ್ಟು ನಿಜವಾಗಿವೆ.

ಇಂದ್ರಿಯಾ ತೀತವಾದ ಯಾವುದಾದರೊಂದು ವಿಷಯವನ್ನು ಸತ್ಯವಾಗಿ ನೋಡಿದರೆ ಆಗ ಅದರಲ್ಲಿ ಪ್ರಬಲವಾದ ಆಸಕ್ತಿ ಉಂಟಾಗುವುದು. ಯಾವ ಪ್ರೀತಿಯನ್ನು ಮೊದಲು ವಿಷಯ ವಸ್ತುಗಳ ಮೇಲೆ ತೋರಿದ್ದೆವೋ ಅದೇ ಪ್ರೀತಿಯನ್ನು ದೇವರಿಗೆ ಕೊಟ್ಟರೆ ಅದು ಭಕ್ತಿ ಎನಿಸುವುದು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಅಜ್ಞಾನವೇ ಸಕಲ ದುಃಖಗಳ ಮೂಲ

**ಈ ಜಗತ್ತು** ನಿಗೂಢ ಶಕ್ತಿಯಿಂದ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕಷ್ಟವಿಲ್ಲ. ಆದರೆ, ಆ ಕಡೆಗೆ ನಾವು ಗಮನ ಹರಿಯಗೊಡುವುದಿಲ್ಲ. ಹುಟ್ಟಿನ ಮೊದಲು ಏನು ಎಂಬುದು ನಮಗೆ ತಿಳಿಯದು! ಸಾವಿನ ಆಚೆ ಏನು ಎಂಬುದೂ ನಮಗೆ ತಿಳಿಯದು! ಜೀವಿ ಅನುಭವಿಸುವ ಸುಖದುಃಖಗಳ ಕಾರಣ, ಅರ್ಥವೂ ತಿಳಿಯದು!

ಈ ಜಗತ್ತಿನಲ್ಲಿ ಪ್ರತಿಯೊಂದು ಜೀವಿ ಯಾವುದೋ ಒಂದು ಸೂಕ್ಷ್ಮಾತಿಸೂಕ್ಷ್ಮ ನಿಯಮವನ್ನು ಅನುಸರಿಸಿ ಬಂದು ಹೋಗುತ್ತಾನೆ ಎಂಬ ವಿಚಾರವೂ ತಿಳಿಯದು! ಹುಟ್ಟು-ಸಾವುಗಳ ಮಧ್ಯದ ಅಂತರವೇ ಸರ್ವಸ್ವವೆಂದು ತಿಳಿದುಕೊಂಡವರು ನಾವು! ಜೀವನದಲ್ಲಿ ಬಂದೊದಗುವ ಸಂಕೀರ್ಣ ಸಮಸ್ಯೆಗಳನ್ನು ನಮ್ಮ ಸಾಮಾನ್ಯ ಅರಿವಿನಿಂದ ಪರಿಹರಿಸಲು ಸಾಧ್ಯವೇ?

ಅರಿವಿನ ಪರಿಧಿ ವಿಶಾಲವಾದಂತೆ, ಆಳವಾದಂತೆ, ಅನಿವಾರ್ಯ ಅಪರಿಹಾರ್ಯಗಳನ್ನು ಎದುರಿಸುವ ವಿಧಾನ ನಮಗೆ ಸ್ವಾಭಾವಿಕವಾಗಿ ತಿಳಿಯುತ್ತದೆ. ಅಜ್ಞಾನವೇ ಸಕಲ ದುಃಖಗಳ ಮೂಲ. ಅದು ಕಳೆದಂತೆ ಮನಸ್ಸಿನ ಕೊಳೆ ದೂರವಾಗಿ ಸ್ಥೈರ್ಯ ವೃದ್ಧಿಯಾಗುತ್ತದೆ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಬೇಕು ಸತ್ಪುರುಷರ ಸಹವಾಸ

‘ಸತ್ಪುರುಷರ ಸಹವಾಸದಿಂದ ನನ್ನ ಮಹಿಮೆ ಎಂಬ ಸಂಪತ್ತಿನ ಕಥೆಗಳು, ಹೃದಯಕ್ಕೂ ಕಿವಿಗಳಿಗೂ ರಸಾಯನದಂತೆ ತುಂಬಾ ರುಚಿಕರವಾಗುತ್ತವೆ. ಅವುಗಳನ್ನು ಸೇವಿಸುವುದರಿಂದ ಮೋಕ್ಷ ಮಾರ್ಗದಲ್ಲಿ ಶ್ರದ್ಧೆ, ಪ್ರೀತಿ, ಭಕ್ತಿಗಳು ಅನುಕ್ರಮವಾಗಿ ಶೀಘ್ರವಾಗಿ ಉಂಟಾಗುತ್ತವೆ’ ಎಂದು ಸಾಧು ಸಂಗದ ಮಹತ್ವವನ್ನು ಭಾಗವತದಲ್ಲಿ ಹೀಗೆ ಹೇಳಲಾಗಿದೆ.

ಸತ್ಪುರುಷರ ಸಂಗದಿಂದ ಭಕ್ತಿಯುಂಟಾಗುತ್ತದೆ. ಭಗವಂತನ ಮೇಲೆ ಪ್ರೀತಿಯುಂಟಾಗುತ್ತದೆ. ಸಾಧು ಪುರುಷರ ಸಹವಾಸವನ್ನು ಮಾಡುತ್ತಾ ಮಾಡುತ್ತಾ ಭಗವಂತನಿಗಾಗಿ ಪ್ರಾಣವು ವ್ಯಾಕುಲವಾಗುತ್ತದೆ.

ಸದ್ವಿಚಾರಗಳನ್ನು ಕೇಳುತ್ತಾ ವಸ್ತುಗಳ ವಾಸನೆಯು ಸ್ವಲ್ಪಸ್ವಲ್ಪವೇ ಕಡಿಮೆಯಾಗುತ್ತದೆ. ಮದಿರೆಯ ಪಾನದಿಂದುಂಟಾದ ಅಮಲನ್ನು ಕಡಿಮೆ ಮಾಡಲು ಅಕ್ಕಿ ತೊಳೆದ ನೀರನ್ನು ಸ್ವಲ್ಪ ಸ್ವಲ್ಪವೇ ಕುಡಿಸಬೇಕಾಗುತ್ತದೆ. ಹಾಗೆಯೇ ಸಂಸಾರದ ಮದದಿಂದ ಯಾರಿಗೆ ಅಮಲೇರಿದೆಯೋ ಅವರ ಅಮಲನ್ನು ನಾಶಮಾಡಲು ಇರುವ ಏಕಮಾತ್ರ ಉಪಾಯವೆಂದರೆ ಸಾಧುಸಂಗ.

ಯಾರ ಮನಸ್ಸು- ಪ್ರಾಣ ಪರಮಾತ್ಮದಲ್ಲಿ ಲೀನವಾಗಿ ಹೋಗಿರುವವರೆ ಸಾಧು. ಕಾಮ, ಕಾಂಚನ, ಸಂಬಂಧವನ್ನು ಯಾವ ರೀತಿಯಲ್ಲಿಯೂ ಮಾಡರು. ಸ್ತ್ರೀಯರನ್ನು ಮಾತೆಯಂತೆ ಕಾಣುವರು. ಉತ್ತಮ ಸಾಧುವು ಧನ, ಯಶಸ್ಸು ಯಾವುದನ್ನೂ ಬಯಸನು. ಸದಾ ಭಗವಚ್ಚಿಂತನೆ ಮಾಡುವನು. ಎಲ್ಲ ಜೀವಿಗಳಲ್ಲೂ ದೇವರಿರುವನೆಂದರಿತು ಅವರ ಸೇವೆ ಮಾಡುವನು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**

ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸದಾ ಗುರಿಯ ಕಡೆ ಚಿತ್ತವಿಡಿ

**ಭರ್ತೃಹರಿಯ ನೀತಿಶತಕ ಹೀಗೆ ಹೇಳುತ್ತದೆ.**

**'ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ**
**ಯೋ ನ ದದಾತಿ ನಾ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ'**

ಐಶ್ವರ್ಯಕ್ಕೆ ಮೂರುದಾರಿಗಳಿವೆ. ಒಂದು ದಾನ ಕೊಡುವುದು, ಭೋಗಿಸುವುದು, ನಾಶವಾಗುವುದು. ಯಾರು ತನ್ನ ಐಶ್ವರ್ಯವನ್ನು ದಾನ ಕೊಡದೆ ತಾನು ಭೋಗಿಸಲು ಇಚ್ಛಿಸುತ್ತಾನೋ ಅವನ ಐಶ್ವರ್ಯಕ್ಕೆ ಮೂರನೆಯ ಗತಿಯೇ ಆಗುತ್ತದೆ.

ಹಣದಿಂದ ಆಗುವ ಮೂರು ಅನರ್ಥಗಳು ಹೀಗಿವೆ. ಕಳವು, ಹಿಂಸೆ, ಜಂಭ, ಸುಳ್ಳು, ಕಾಮ, ಕ್ರೋಧ, ಮದ, ವೈರ, ಅವಿಶ್ವಾಸ, ಪೈಪೋಟಿ, ದುಷ್ಟ ವ್ಯಸನಗಳು. ಆದ್ದರಿಂದ ಸಾಧಕರಿಗೆ ಧನಿಕರ ಚರಿತ್ರೆಯಾಗಲಿ, ಧನ ಚರಿತ್ರವಾಗಲೀ ಕೇಳಲು ಯೋಗ್ಯವಲ್ಲ. ಸಾಧಕರು ಹಳೆಯ ವೈರಿಗಳ ವಿಷಯವನ್ನು ಸ್ಮರಣೆಗೆ ತರುವಂತಹ ಯಾವುದನ್ನೂ ನೋಡಬಾರದು, ಕೇಳಬಾರದು, ಓದಬಾರದು. ಇಲ್ಲದಿದ್ದರೆ ಹಿಂದಿನ ವೈರ ಭಾವವು ತಲೆಯೆತ್ತಿ ಅನಾಹುತವನ್ನು ಉಂಟುಮಾಡಬಹುದು.

ಪ್ರಾರಂಭಿಕ ಸಾಧಕನು ಚಿಕ್ಕ ಸಸಿ ಇದ್ದಂತೆ. ಈ ಸಸಿಯು ಬೆಳೆದು ಹೆಮ್ಮರವಾಗುವವರೆಗೂ ಅದಕ್ಕೆ ಮುಳ್ಳು ಬೇಲಿಯ ರಕ್ಷಣೆ ಬೇಕು. ಇಲ್ಲದಿದ್ದರೆ ಪಶುಗಳು ಅದನ್ನು ತಿಂದು ಹಾಕಬಹುದು. ನಾಶಪಡಿಸಬಹುದು. ಆದರೆ, ಅದು ಮರವಾದ ಮೇಲೆ ಬೇಲಿಯೂ ಬೇಕಿಲ್ಲ ಎಂಬುದಷ್ಟೇ ಅಲ್ಲ; ಆನೆಯನ್ನು ಅದಕ್ಕೆ ಕಟ್ಟಿ ಹಾಕಿದರೂ ತೊಂದರೆ ಇಲ್ಲ. ಆದುದರಿಂದಲೇ ಸಾಧಕರಿಗಾಗಿ ಇಷ್ಟೊಂದು ನಿಯಮಗಳನ್ನು ಹಾಕಿರುವುದು. ಈ ನಾಲ್ಕು ಶ್ರವಣ ದೋಷ ತಟ್ಟದಿರಬೇಕಾದರೆ ಸಾಧಕ ಸದಾ ಗುರಿಯ ಕಡೆ ತನ್ನ ಚಿತ್ತವಿಡಬೇಕು. ಅದೇ ಇದಕ್ಕೆ ರಾಮಬಾಣ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಜೀವನಕ್ಕೆ ಬೇಕಿರುವುದು ನೈತಿಕ ಶಿಕ್ಷಣ

**ಶಾಲೆ**, ಕಾಲೇಜುಗಳಲ್ಲಿ ಮಾತ್ರ ಶಿಕ್ಷಣವನ್ನು ಪಡೆಯುತ್ತೇವೆ ಎಂಬ ಭಾವನೆಯನ್ನು ಅಥವಾ ತಪ್ಪುಕಲ್ಪನೆಯನ್ನು ಹೊಡೆದು ಹಾಕೋಣ. ನಾವು ನಿಜಕ್ಕೂ ಶಾಲಾ, ಕಾಲೇಜುಗಳಿಂದ ಮಾತ್ರವೇ ಶಿಕ್ಷಣವನ್ನು ಪಡೆಯುತ್ತೇವೆಯೇ? ಕೆಲವರು ಪಡೆಯುತ್ತಾರೆ. ಆದರೆ, ಹೆಚ್ಚಿನಾಂಶ ಜನರು ಪಡೆಯುವುದಿಲ್ಲ. ಎಂಬ ಅಭಿಪ್ರಾಯ ಸಾಮಾನ್ಯವಾಗಿ ಒಮ್ಮತದ್ದಾಗಿರುತ್ತದೆ. ಶಾಲಾ, ಕಾಲೇಜುಗಳಲ್ಲಿ ನಾವು ಸಾಕಷ್ಟು ಮಾಹಿತಿ ಪಡೆಯುತ್ತೇವೆ. ಶಿಕ್ಷಕರಾಗಲು ನಮಗೂ ಮಾಹಿತಿ ಬೇಕು. ಆದರೆ, ಶಿಕ್ಷಣದ ನಿಜವಾದ ಅರ್ಥ ಕೇವಲ ಇಷ್ಟೇ ಅಲ್ಲ.

ಬೌದ್ಧಿಕ ಶಿಕ್ಷಣ ನಮ್ಮ ಮೆದುಳಿನ ಮೇಲೆ ಪ್ರಭಾವ ಬೀರುತ್ತದೆ. ಮೌಲ್ಯಾಧಾರಿತ ಶಿಕ್ಷಣ ನಮ್ಮ ಹೃದಯವನ್ನು ತಟ್ಟುತ್ತದೆ. ಹೃದಯವನ್ನು ತರಬೇತಿಗೊಳಿಸದ ಶಿಕ್ಷಣ ಅಪಾಯಕಾರಿ. ನಮ್ಮ ಕಚೇರಿ ಹಾಗೂ ಸಮಾಜದಲ್ಲಿ ನೀತಿ ಬಲ ಅಥವಾ ಸಂಪನ್ನಶೀಲತೆಯನ್ನು ಬೆಳೆಸಬೇಕೆಂದು ಬಯಸಿದರೆ, ನಾವು ಕನಿಷ್ಠ ಮಟ್ಟದ ನೀತಿ ಹಾಗೂ ತತ್ವ ನಡವಳಿಕೆಯ ಸಾಕ್ಷರತೆಯನ್ನು ಸಾಧಿಸಲೇಬೇಕು. ಪ್ರಾಮಾಣಿಕತೆ, ಅನುಕಂಪ, ಧೈರ್ಯ, ದೃಢತೆ ಮತ್ತು ಜವಾಬ್ದಾರಿ ಬಿಂಬಿಸುವ ಶಿಕ್ಷಣ ಅತ್ಯಗತ್ಯ.

‘ವಿಶ್ವವಿದ್ಯಾಲಯಗಳು ಕುಶಲಮತಿಗಳಾದ ಅಸಂಸ್ಕೃತರನ್ನು, ಒರಟರನ್ನು ತಯಾರಿಸುವ ಸಂಸ್ಥೆಗಳಾಗಿ ರೂಪಗೊಳ್ಳುತ್ತಿವೆ. ಏಕೆಂದರೆ ನಮ್ಮ ಯುವಕರು ತೀವ್ರವಾಗಿ ಅರಸುತ್ತಿರುವ ಮೌಲ್ಯಗಳಿಗೆ ವಿಶ್ವವಿದ್ಯಾಲಯಗಳು ರೂಪುರೇಷೆಗಳನ್ನು ಹಾಕಿಕೊಡುತ್ತಿಲ್ಲ’ ಎಂಬುದು ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಅಧ್ಯಕ್ಷ ಸ್ಟೀವನ್ ಮುಲ್ಲರ್ ಅಭಿಪ್ರಾಯ. ನಮಗೆ ಹೆಚ್ಚಿನ ಅಕಾಡೆಮಿಕ್ ಶಿಕ್ಷಣ ಬೇಕಿಲ್ಲ. ನಮಗೆ ಬೇಕಿರುವುದು ಮೌಲ್ಯಾಧಾರಿತ ಶಿಕ್ಷಣ. ಅತ್ಯುತ್ತಮವಾದ ಅಕಾಡೆಮಿಕ್ ಶಿಕ್ಷಣ ಹೊಂದಿ ನೈತಿಕವಾಗಿ ದಿವಾಳಿ ಆದವರಿಗಿಂತ ನೈತಿಕ ಶಿಕ್ಷಣ ಪಡೆದವರು ಜೀವನದಲ್ಲಿ ಯಶಸ್ವಿಯಾಗಲು ಹೆಚ್ಚು ಸಮರ್ಥರಿರುತ್ತಾರೆ ಎಂಬುದು ತಿಳಿದವರ ಅಭಿಪ್ರಾಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸ್ವಾರ್ಥವೇ ಪಾಪ, ನಿಸ್ವಾರ್ಥವೇ ಪುಣ್ಯ

ಈ ಪ್ರಪಂಚದಲ್ಲಿ ನಾವು ನಮ್ಮ ಪಾಡಿಗೆ ನಿಷ್ಠೆಯಿಂದ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ ಅಂದುಕೊಂಡು ಮುಂದುವರಿಯುತ್ತಿದ್ದಾಗಲೇ, ಪ್ರಕೃತಿಯು ಮೋರೆ,ಮುಸುಡಿಯನ್ನು ನೋಡದೆ ನಮಗೆ ಪೆಟ್ಟುಗಳನ್ನು ಕೊಟ್ಟು, ಈ ಪ್ರಪಂಚದಲ್ಲಿ ನಮ್ಮ ಸ್ಥಾನ ಏನು? ಎಂಬುದನ್ನು ನಾವು ಮರಳಿ ಕಂಡುಕೊಳ್ಳುವಂತೆ ಮಾಡುತ್ತದೆ.

ಯಾವ ಪದವಿಗೆ ಅವನು ಅನರ್ಹನೋ ಆ ಪದವಿಯನ್ನು ಆತ ದೀರ್ಘಕಾಲ ತೃಪ್ತಿಕರವಾಗಿ ಅಲಂಕರಿಸಲಾರ. ಹೀಗಾಗಿ ಪ್ರಕೃತಿಯೇ ಪಾಠ ಕಲಿಸುವುದರಿಂದ ಅದರ ವಿರುದ್ಧ ಗೊಣಗುಟ್ಟುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ತಳಮಟ್ಟದ ಕೆಲಸ ಮಾಡುವುದರಿಂದ ವ್ಯಕ್ತಿಯೇನೂ ಕೀಳಾಗುವುದಿಲ್ಲ. ವ್ಯಕ್ತಿ ಮಾಡುವ ಕೆಲಸದಿಂದಷ್ಟೇ ಅವನ ಯೋಗ್ಯತೆಯನ್ನು ನಿರ್ಣಯಿಸದೆ, ಅದನ್ನು ಆತ ನಿಭಾಯಿಸುವ ರೀತಿ, ನಿಷ್ಠೆ, ಕಾಯಕ ಶ್ರದ್ಧೆಯನ್ನು ನೋಡಿ ನಿರ್ಣಯಿಸಬೇಕು.

ನಾಲ್ಕು ಮಾತುಗಳಲ್ಲಿ ಕರ್ತವ್ಯದ ತತ್ವವನ್ನು ಹೇಳುವುದಾದರೆ ಸ್ವಾರ್ಥವೇ ಪಾಪ, ಅದನ್ನು ಯಾವಾಗಲೂ ತ್ಯಜಿಸಬೇಕು. ಏಕೆಂದರೆ, ಅದು ಕೀಳು ಆಸೆಗಳಿಗೂ, ಬಗೆಬಗೆಯ ಪಾಪ ಕರ್ಮಗಳಿಗೂ ಕಾರಣವಾಗುತ್ತದೆ.

‘ನಿಸ್ವಾರ್ಥತೆಯೇ ಪುಣ್ಯ’. ಅದು ಸರ್ವದಾ ಆಚರಣೀಯವಾದುದು. ಏಕೆಂದರೆ, ಅದು ಪ್ರೇಮ, ಆತ್ಮನಿಗ್ರಹವನ್ನು ವೃದ್ಧಿಸಿ, ಮನುಷ್ಯನನ್ನು ಉದ್ಧಾರದ ಮಾರ್ಗದಲ್ಲಿ ಕರೆದೊಯ್ಯುತ್ತದೆ. ಹೀಗಾಗಿ ನಾವು ನಿಸ್ವಾರ್ಥದಿಂದ ಕೆಲಸ ಮಾಡುತ್ತ ಸಾಗೋಣ.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಕಾಮ, ಕ್ರೋಧ, ಲೋಭ... ನರಕಕ್ಕೆ ದಾರಿ

**ನರಕ** ಎನ್ನುವುದು ಯಾವುದೋ ಒಂದು ವಿಶಿಷ್ಟ ಸ್ಥಳ ಎಂದಲ್ಲ, ಅದೊಂದು ವಿಶಿಷ್ಟ ಮಾನಸಿಕ ಸ್ಥಿತಿ. ಮಾನಸಿಕ ಸ್ಥಿತಿ ಸ್ವರ್ಗೀಯವಾಗಿರಬಹುದು ಅಥವಾ ನರಕಸದೃಶವಾಗಿರಬಹುದು. ನರಕಸದೃಶ ಜೀವನಕ್ಕೆ ಮೂರು ಮಹಾದ್ವಾರಗಳೆಂದರೆ ಕಾಮ, ಕ್ರೋಧ ಮತ್ತು ಲೋಭ.

ಈ ಮೂರು ಬಾಗಿಲುಗಳಲ್ಲಿ ಒಂದರ ಮೂಲಕ ನರಕಸದೃಶ ಸ್ಥಿತಿ ತಂದುಕೊಳ್ಳುತ್ತಾರೆ. ನರಕಸದೃಶ ಬದುಕಿಗೆ ಮೊದಲನೆಯ ಹೆಬ್ಬಾಗಿಲೇ ಕಾಮ, ಅನಂತರ ಬರುವುದು ಕ್ರೋಧ ಅಥವಾ ಸಿಟ್ಟು. ಕ್ರೋಧವೆಂಬುದು ಒಬ್ಬನನ್ನು ಸಂಪೂರ್ಣ ಹುಚ್ಚನನ್ನಾಗಿಸಿ ಯಾವ ಕೇಡನ್ನಾದರೂ ಮಾಡಬಹುದು. ಕೊನೆಯಿಲ್ಲದ ದುರಾಸೆಗೆ ಲೋಭವೆನ್ನುವರು. ಹಣ ಸಂಪಾದಿಸಿ ತನಗಾಗಿ ಖರ್ಚು ಮಾಡುವುದು ಲೋಭವಲ್ಲ. ಇದು ಸಹಜ, ಸಾಮಾನ್ಯ. ಹೆಚ್ಚು ಹೆಚ್ಚು ಒಟ್ಟು ಹಾಕಿಕೊಳ್ಳಬೇಕೆಂಬ ತಡೆಯಲಾರದ ಆಸೆಯು ನಮ್ಮನ್ನು ದುರ್ಮಾರ್ಗಗಳಿಗೆ ಕೊಂಡೊಯ್ಯುತ್ತದೆ.

ಯಾವುದೇ ಸಂವೇದನೆಯಾಗಲೀ, ಭಾವನೆಯಾಗಲೀ ನಮ್ಮ ನಿಯಂತ್ರಣವನ್ನು ಮೀರಿದರೆ ಅವು ನಮ್ಮನ್ನೇ ನಾಶ ಮಾಡುತ್ತವೆ. ಅವು ಪ್ರಚಂಡ ಶಕ್ತಿಯ ಮೂಲಗಳು. ನೆನಪಿನಲ್ಲಿಡಿ, ಬುದ್ಧಿಗಿರುವುದು ಸ್ವಲ್ಪವೇ ಶಕ್ತಿ. ಆದರೆ, ಭಾವನೆಗಳು, ಸಂವೇದನೆಗಳು ಪ್ರಚಂಡ ಶಕ್ತಿಯ ಆಗರಗಳು. ಬುದ್ಧಿ ಇವುಗಳನ್ನು ನಿಯಂತ್ರಿಸುವುದು ಜ್ಞಾನಶಕ್ತಿ ಮತ್ತು ವಿವೇಚನೆಯ ಶಕ್ತಿಯಿಂದ ಮಾತ್ರ. ಸಮಾಜದಲ್ಲಿ ಎಲ್ಲ ನೈತಿಕ ಅಭಿವೃದ್ಧಿ ಈ ಕಾಮ, ಕ್ರೋಧ, ಲೋಭಗಳನ್ನು ಶಿಸ್ತುಬದ್ಧ ಗೊಳಿಸುವುದರಿಂದಲೇ ಆಗುವುದು. ಅಂತಹ ಶಿಸ್ತು ಇಲ್ಲದಿದ್ದಲ್ಲಿ ಸಮಾಜಕ್ಕೆ ಸಮಾಜವೇ ಅನೈತಿಕವಾಗುವುದು. ಅನೇಕ ಚಕ್ರಾಧಿಪತ್ಯಗಳು ಉರುಳಿರುವುದು ಈ ಮೂರು ಕೇಡಿನ ಬಲದಿಂದಲೇ ಎನ್ನುವುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ‘ಸುಖ’ ಮನುಷ್ಯನ ಆಂತರಿಕ ಸ್ಥಿತಿ...

**ಸಾ**ಮಾನ್ಯವಾಗಿ ಜನರು ಭಾವಿಸುತ್ತಾರೆ, ತಮಗೆ ಯಾವ ತೊಂದರೆ ತಾಪತ್ರಯಗಳೂ ಇಲ್ಲದಿದ್ದರೆ ಸುಖವಾಗಿರುತ್ತೇವೆ ಎಂದು. ಇದು ಸಮುದ್ರದಲ್ಲಿ ಅಲೆಗಳು ಶಾಂತವಾದ ಮೇಲೆ ಸಮುದ್ರ ಸ್ನಾನ ಮಾಡುತ್ತೇನೆ ಎಂದು ಭಾವಿಸಿದಂತೆ!

ತಾಪತ್ರಯಗಳನ್ನು ನಿವಾರಿಸುವುದರಲ್ಲಿ ಇಡೀ ಜೀವನ ಕಳೆದು ಹೋಗುತ್ತದೆ. ಅನುಭವಿಸುವುದಕ್ಕೆ ಸಮಯವೇ ಇರುವುದಿಲ್ಲ. ಈ ಮನೋಭಾವಕ್ಕೆ ಕಾರಣ ಕಷ್ಟಗಳ ಅಭಾವವೇ ಸುಖ ಎಂಬ ತಪ್ಪು ಕಲ್ಪನೆ. ಕಷ್ಟಗಳು ಏನೂ ಇಲ್ಲದಿದ್ದರೂ ನಾವು ಸುಖವಾಗಿರುವುದಿಲ್ಲ. ಒಬ್ಬ ಬೌದ್ಧ ಸನ್ಯಾಸಿ ಹೇಳುತ್ತಾರೆ, ನಾವು ಹಲ್ಲು ನೋವಿನಿಂದ ನರಳುತ್ತಿರುವಾಗ ಹಲ್ಲು ನೋವು ಇಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತೆ ಎಂದು ಭಾವಿಸುತ್ತೇವೆ. ಆದರೆ, ಹಲ್ಲು ನೋವು ಇಲ್ಲದಿರುವಾಗಲೂ ನಾವೇನೂ ಸುಖವಾಗಿರುವುದಿಲ್ಲ. ಆದ್ದರಿಂದ ಸುಖ ನಮ್ಮ ಮನೋಭಾವವನ್ನು ಅವಲಂಬಿಸಿರುತ್ತದೆ. ನಾವು ಸುಖವಾಗಿರಬೇಕೆಂದು ಬಯಸಿದರೆ ಕಷ್ಟಗಳ ನಡುವೆಯೂ ಸುಖವಾಗಿರಬಹುದು. ಅವು ಕೇವಲ ಬಾಹ್ಯ ಘಟನೆಗಳು ಅಷ್ಟೇ. ಆದರೆ, ಸುಖ ಆಂತರಿಕ ಸ್ಥಿತಿ. ನಾವು ಆಂತರಿಕ ಸ್ಥಿತಿಯಲ್ಲಿ ಸ್ಥಿರವಾಗಿ ನಿಂತಾಗ ಬಾಹ್ಯ ಘಟನೆಗಳಾವವೂ ನಮ್ಮನ್ನು ವಿಚಲಿತಗೊಳಿಸಲಾರವು. ಇದೇ ನಿಜವಾದ ಸುಖದ ಸ್ಥಿತಿ.

ಸೇತುವೆ ಕೆಳಗೆ ಹರಿಯುವ ನೀರಿನಂತೆ ಆ ಕಷ್ಟಗಳು ಕೂಡ ಬಂದು ಮಾಯವಾಗಿ ಬಿಡುತ್ತವೆ. ಹಾಗಾಗಿ ನಾವು ಸೇತುವೆಯಂತೆ ದೃಢವಾಗಿರಬೇಕು. ಎಂತಹ ಕಷ್ಟ ವಿಪತ್ತುಗಳ ಮಹಾಪೂರವೇ ಬಂದರೂ ಕೊಚ್ಚಿಕೊಂಡು ಹೋಗದಂತಿರಬೇಕು. ಇದು ನಮ್ಮ ಆಂತರಿಕ ಸ್ಥಿರತೆಯನ್ನು ಅವಲಂಬಿಸಿರುತ್ತದೆ. ಸೇತುವೆಯು ಭೂಮಿಯ ಆಳದಲ್ಲಿ ಗಟ್ಟಿಯಾಗಿ ನಿಂತಿರುವಂತೆ ನಾವು ವ್ಯಕ್ತಿತ್ವದ ಆಳದಲ್ಲಿ ನಮ್ಮ ಸ್ಥಿರತೆಯನ್ನು ಪಡೆಯಬೇಕು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ನೈತಿಕತೆಯ ತಳಹದಿಯೇ ಆಂತರಿಕ ಪ್ರೇರಣೆ

**ನಾವು** ಪಡೆದ ವಿದ್ಯೆ ಸಾರ್ಥಕವಾಗಬೇಕಾದರೆ ನಮ್ಮ ಜೀವನವು ನೈತಿಕ ಪರಿಪೂರ್ಣತೆ ಪಡೆದಿರಬೇಕು. ಇಲ್ಲದಿದ್ದರೆ ಅನೈತಿಕ ಮಾರ್ಗದಲ್ಲಿ ನಮ್ಮ ಜ್ಞಾನವನ್ನು ಬೆಳೆಸುತ್ತೇವೆ. ವಿದ್ಯೆ ಒಂದು ಆಯುಧವಿದ್ದಂತೆ, ಅದನ್ನು ವಿನಾಶಕ್ಕಾಗಿಯೂ ಉಪಯೋಗಿಸಬಹುದು, ರಕ್ಷಣೆಗಾಗಿಯೂ, ರಚನಾತ್ಮಕವಾಗಿಯೂ ಉಪಯೋಗಿಸಬಹುದು.

ಸ್ವಾಮಿ ವಿವೇಕಾನಂದರು ಹೇಳುವಂತೆ, ಜ್ಞಾನವು ಒಂದು ಶಕ್ತಿ. ಇದನ್ನು ಒಳ್ಳೆಯ ರೀತಿಯಲ್ಲಾಗಲಿ, ಕೆಟ್ಟ ರೀತಿಯಲ್ಲಾಗಲಿ ಉಪಯೋಗಿಸಬಹುದು. ಇದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ವ್ಯಕ್ತಿಯಲ್ಲಿ ನೈತಿಕ ಪರಿವರ್ತನೆ ಉಂಟಾಗಬೇಕು. ನಾನು ನೀತಿವಂತನಾಗಿರಬೇಕು, ನಾನು ಸ್ವತಂತ್ರವಾಗಬೇಕು ಎಂಬ ಆಂತರಿಕ ತುಡಿತವೇ ನೈತಿಕತೆಯ ತಳಹದಿ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ.

ಯಾವುದೇ ಬಾಹ್ಯ ಒತ್ತಡದಿಂದಲ್ಲದೆ ಆಂತರಿಕ ಪ್ರೇರಣೆಯಿಂದಲೇ ನೀತಿವಂತನಾಗಿರಬೇಕಾದರೆ ಅವನು ತನ್ನ ಬಗೆಗಿನ ಕಲ್ಪನೆಯನ್ನು ಬದಲಾಯಿಸಬೇಕು. ತನ್ನ ಬಗ್ಗೆ ಉದಾತ್ತ ಕಲ್ಪನೆ ಇದ್ದರೆ ಜೀವನವೂ ಉದಾತ್ತವಾಗುತ್ತದೆ. ಆಗ ನೈತಿಕತೆಯು ಸ್ವಾಭಾವಿಕವಾಗಿ ನಮ್ಮ ಜೀವನದೊಂದಿಗೆ ಒಂದಾಗಿಬಿಡುತ್ತದೆ.

ನಮ್ಮ ನಿಜವಾದ ಆಧ್ಯಾತ್ಮಿಕ ಸ್ವರೂಪವನ್ನು ಅರಿತಾಗ ಮೋಕ್ಷ ಪ್ರಾಪ್ತಿ ಉಂಟಾಗುತ್ತದೆ. ಸೂರ್ಯ, ಚಂದ್ರರು ತಮ್ಮ ಮಾರ್ಗವನ್ನು ಅನುಸರಿಸುವಂತೆ ನಾವು ಒಳ್ಳೆಯ ಮಾರ್ಗವನ್ನು ಅನುಸರಿಸೋಣ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಕೆಲಸವೇ ಪರಮ ಔಷಧ

ಜೀವನವನ್ನು ಕ್ರಿಯೆಯಿಂದ ಬೇರ್ಪಡಿಸಲಾಗುವುದಿಲ್ಲ. ಜೀವಿಸುವುದೆಂದರೆ ಕೆಲಸ ಮಾಡುವುದೆಂರ್ಥ. ಸಮರ್ಪಣ ಕೆಲಸ ನಿಂತು ಹೋದರೆ ಅದೇ ನಮ್ಮ ಪಾಲಿಗೆ ಸಾವು. ದೇಹದ ಮತ್ತು ಮನಸ್ಸಿನ ಆರೋಗ್ಯಕ್ಕೆ ಕ್ರಿಯೆ ಅವಶ್ಯಕ. ನಮ್ಮ ಮೆದುಳನ್ನು ಹೆಚ್ಚು ಹೆಚ್ಚು ಕ್ರಿಯೆಯಲ್ಲಿ ತೊಡಗಿಸಿದಷ್ಟೂ ಅದರ ಸಾಮರ್ಥ್ಯ ಅಧಿಕವಾಗುತ್ತಾ ಹೋಗುತ್ತದೆ. ನಮ್ಮ ಆಂತರಿಕ ಪ್ರತಿಭೆ ಸಾಮರ್ಥ್ಯಗಳು ವ್ಯಕ್ತವಾಗುವುದೇ ಕೆಲಸದ ಮೂಲಕ.

ಸಂಸ್ಕೃತ ಭಾಷೆಯಲ್ಲಿ ಒಂದು ಹೇಳಿಕೆ ಇದೆ. 'ಯಃ ಕ್ರಿಯಾ ವಾನ್ ಸ ಪಂಡಿತ', 'ಯಾರು ಕ್ರಿಯಾಶೀಲರನೋ ಅವನೇ ಜ್ಞಾನಿ' ಎಂದು.

ನಮ್ಮಲ್ಲಿ ಎರಡು ಸ್ವಭಾವಗಳಿವೆ. ಪ್ರವೃತ್ತಿ ಮತ್ತು ನಿವೃತ್ತಿ. ಮೊದಲನೆಯದು ಹೊರಗೆ ಹೋಗಿ ಕೆಲಸದಲ್ಲಿ ನಿರತವಾಗುವ ಸ್ವಭಾವ. ಎರಡನೆಯದು ತನ್ನ ಪಾಡಿಗೆ ತಾನಿರುವ ಸ್ವಭಾವ. ಮೊದಲನೆಯದು ಪ್ರಕೃತಿಗೆ ಸಂಬಂಧಿಸಿದ್ದು. ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಮನಸ್ಸಿನ ಅಲೆದಾಟ ಎಷ್ಟೋ ಕಡಿಮೆಯಾಗುತ್ತದೆ.

ಪ್ರಸಿದ್ಧ ಜೀವಶಾಸ್ತ್ರ ವಿಜ್ಞಾನಿ ಅಲೆಕ್ಸಿಸ್ ಕ್ಯಾರೆಲ್ ಹೇಳುತ್ತಾನೆ. ಚಿಂತೆ, ದುಃಖ, ದುಗುಡ ಮುಂತಾದವುಗಳನ್ನು ಮರೆಯಲು ಜನರು ಕುಡಿತ ಮತ್ತು ಡ್ರಗ್ ಸೇವನೆಗಳಲ್ಲಿ ತೊಡಗುತ್ತಾರೆ.ಇದರಿಂದ ಅವರ ಸಮಸ್ಯೆಗಳೇನೂ ಪರಿಹಾರವಾಗುವುದಿಲ್ಲ. ಒಂದು ಸಮಸ್ಯೆ ಜೊತೆಗೆ ಮತ್ತೊಂದು ಸೇರಿಕೊಳ್ಳುತ್ತದೆ ಅಷ್ಟೇ. ಇದರ ಬದಲು ಅವರು ಆರೋಗ್ಯಕರ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ಸಮಸ್ಯೆಗಳು ಕರಗಿ ಹೋಗುತ್ತವೆ. ಎಷ್ಟೋ ಮಾನಸಿಕ ಸಮಸ್ಯೆಗಳಿಗೆ ಕೆಲಸವೇ ಪರಮ ಔಷಧವಾಗಿದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**

ಅಧ್ಯಕ್ಷೆ, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಮನಃಶಾಂತಿ ಬೇಕಿದ್ದರೆ ಪರದೋಷ ಕಾಣಬೇಡಿ

**ಪರರ** ದೋಷವನ್ನು ನೋಡದಿರುವುದಕ್ಕೂ ಮನಃಶಾಂತಿಗೂ ಇರುವ ಸಂಬಂಧವನ್ನು ತಿಳಿದುಕೊಳ್ಳಬೇಕಾದರೆ, ನಾವು ಮೊದಲು ನಾವು ಈ ದೋಷ ಎಂದರೇನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಈ ಆರು ಗುಣಗಳು ನಮ್ಮ ಮನಸ್ಸಿನಲ್ಲಿ ಅವಿತುಕೊಂಡು ದರೋಡೆ ಮಾಡುತ್ತಲೇ ಇರುತ್ತವೆ.

ನಿತ್ಯ ಜೀವನದಲ್ಲಿ ನಾವು ದೋಷಪೂರ್ಣವಾಗಿ ನಡೆದುಕೊಳ್ಳಲು ಕಾರಣ ಈ ಗುಣಗಳೇ. ನಮ್ಮ ನಮ್ಮ ಮನಸ್ಸಿನ ದೋಷಗಳಿಂದಾಗಿ ಅದಾಗಲೇ ನಮ್ಮ ಮನಸ್ಸಿನ ಶಾಂತಿ ಕದಡಿ ಹೋಗಿರುವಾಗ ಇನ್ನು ನಮ್ಮ ಸುತ್ತಮುತ್ತ ಇರುವ ಇತರ ಜನರ ದೋಷಗಳನ್ನೆಲ್ಲ ನೋಡುತ್ತ ಹೋದರೆ ಮನಸ್ಸು ಅಶಾಂತಿಯ ಸಂತೆಕಟ್ಟೆಯಾಗಲಿದೆ.

ಶಾರದಾ ದೇವಿ ಅವರು ಹೇಳುತ್ತಾರೆ, 'ಸದಾ ಇತರರ ದೋಷಗಳನ್ನು ನೋಡುತ್ತಾ ನೋಡುತ್ತಾ ಮನಸ್ಸು ಮಲಿನವಾಗಿ ಬಿಡುತ್ತದೆ' ಎಂದು. ಒಳ್ಳೆಯ ಮತ್ತು ಕೆಟ್ಟ ಕೆಲಸಗಳಲ್ಲಿ ಯಾರ್‍ಯಾರು ಪಾಲ್ಗೊಳ್ಳುತ್ತಾರೋ ಅವರಿಗೆ ಅವುಗಳ ಫಲವಾದ ಪಾಪ ಪುಣ್ಯಗಳಲ್ಲಿ ಪಾಲು ಲಭಿಸುತ್ತದೆ. ಒಳ್ಳೆಯ ಮಾತು ಸತ್ಸಂಸ್ಕಾರವನ್ನುಂಟು ಮಾಡಿದರೆ, ಕೆಟ್ಟ ಮಾತು ದುಷ್ಟ ಸಂಸ್ಕಾರವನ್ನುಂಟು ಮಾಡುತ್ತದೆ. ಸತ್ಸಂಸ್ಕಾರದಿಂದ ಮನಃಶಾಂತಿ ಲಭಿಸಿದರೆ, ದುಷ್ಟ ಸಂಸ್ಕಾರದಿಂದ ಅಶಾಂತಿ ಉಂಟಾಗುತ್ತದೆ.

ನಮ್ಮ ದೃಷ್ಟಿ ಯಾವಾಗಲೂ ಹೊರಮುಖವಾಗಿರುವುದರಿಂದ ಪರದೋಷಗಳೇ ಕಾಣುತ್ತವೆ. ನಮ್ಮ ದೃಷ್ಟಿಯನ್ನು ಒಳಮುಖವಾಗಿ ಹರಿಸಿದಾಗ ನಮ್ಮ ನಮ್ಮ ದೋಷಗಳೇ ನಮಗೆ ಪೆಡಂಭೂತದಂತೆ ಕಾಣಿಸುತ್ತವೆ. ಆಗ ಔಚಿತ್ಯ-ಅನೌಚಿತ್ಯ, ಗುಣ-ದೋಷ ಇವುಗಳನ್ನು ನಾವೇ ಕಂಡುಕೊಳ್ಳಬಹುದು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಜೀವನಕ್ಕಿರಲಿ ಸೈರಣೆ

ಬೀಜ ಚಿಕ್ಕದಾದರೂ ಬೃಹತ್ ಮರವಾಗಿ ಬೆಳೆಯುವ ಸಾಮರ್ಥ್ಯ ಅದರಲ್ಲಿ ಅಡಗಿದೆ. ನಾಮ ಅಥವಾ ಮಂತ್ರವನ್ನು ಲಯಬದ್ಧವಾಗಿ ಉಚ್ಚರಿಸಿದರೆ ಅದು ಮನಸ್ಸಿನಲ್ಲಿ ಸಕಾರಾತ್ಮಕ ಸ್ಪಂದನವನ್ನು ಸೃಷ್ಟಿಸುತ್ತದೆ. ಕ್ರಮೇಣ ಇಡೀ ಮನಸ್ಸ ಭಗವದ್ಭಾವದಿಂದ ತುಂಬುತ್ತದೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ನಾಮಜಪಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಿದ್ದರು.

ನಾವು ತಾಳ್ಮೆಯಿಂದ ದೀರ್ಘಕಾಲ ನಾಮೋಚ್ಚಾರಣೆ ಮಾಡುತ್ತಾ ಹೋಗಬೇಕು. ಬೇಗನೇ ಪರಿಣಾಮವನ್ನು ನಿರೀಕ್ಷಿಸಬಾರದು. ಪ್ರತಿದಿನವೂ ನಡೆಯುವ ಜಪದಿಂದಲೇ ತಪದ ಮೆಟ್ಟಿಲು ಹತ್ತುತ್ತ ಹೋಗುತ್ತೇವೆ. ಒಂದೆರಡು ದಿನಗಳಲ್ಲಿಯೇ ಪರಿಣಾಮ ನಿರೀಕ್ಷಿಸಿದರೆ ಜಪವೆಂಬುದು ಚಮತ್ಕಾರವಲ್ಲ. ಪರಿಣಾಮವಾಗಲಿಲ್ಲವೆಂದು ನಿರಾಸೆ ಹುಟ್ಟಿದರೆ, ಸಾಧನೆಯ ಹಾದಿ ಮೊಟಕಾಗುತ್ತದೆ.

ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ತಾಳ್ಮೆ ಅತ್ಯಂತ ಮುಖ್ಯ. ತಾಳ್ಮೆ ಇಲ್ಲದವರು ಒಂದಾದ ಮೇಲೆ ಒಂದರಂತೆ ಸಾಧನ ವಿಧಾನಗಳನ್ನು ಬದಲಾಯಿಸುತ್ತಾ ಹೋಗುತ್ತಾರೆ. ಕೊನೆಗೆ ಯಾವುದರಿಂದಲೂ ಪ್ರಯೋಜನವಾಗದೆ ನಿರಾಸೆಗೆ ಒಳಗಾಗುತ್ತಾರೆ.

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ದೇವರೊಡನೆ ಮಾತು ನೈಜ ಪ್ರಾರ್ಥನೆ

ಪ್ರಾರ್ಥನೆ ಎಂದರೆ ಒಂದರ್ಥದಲ್ಲಿ ದೇವರೊಡನೆ ಮಾತನಾಡುವುದು. ಮಾತು ಇತರರೊಡನೆ ಸಂಬಂಧವನ್ನು ಬೆಳೆಸಿಕೊಳ್ಳುವ ವಿಧಾನ. ದೇವರ ಬಗ್ಗೆ ಮಾತನಾಡುವುದಕ್ಕಿಂತ ದೇವರೊಡನೆ ಮಾತನಾಡುವುದು ಒಳ್ಳೆಯದು ಎಂಬುದು ಸಂತರ ಅಭಿಪ್ರಾಯ.

ಹೀಗೆ ದೇವರೊಡನೆ ಮಾತನಾಡುತ್ತ ಅವನೊಡನೆ ನಿಕಟ ಸಂಬಂಧ ಉಂಟಾಗುವುದು. ಅವನು ನಮ್ಮವನೆಂಬ ಭಾವದಿಂದ ನಮ್ಮ ಅಂತರಂಗವನ್ನು ತೆರೆದು ಅವನ ಮುಂದಿಡಬಹುದು. ಹೃದಯದ ವೇದನೆಯನ್ನು ತೋಡಿಕೊಳ್ಳಬಹುದು, ನಮ್ಮೆಲ್ಲ ದೋಷಗಳನ್ನೂ ತೆರೆದಿರಿಸಬಹುದು. ಈ ರೀತಿ ಮುಕ್ತವಾಗಿ ನಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸುತ್ತ ಸಾಗಿದಂತೆ ನಮ್ಮ ದೋಷಗಳು ನಮಗೇ ಸ್ಪಷ್ಟವಾಗಿ ಕಾಣತೊಡಗುತ್ತವೆ. ಈ ರೀತಿಯ ಕಳಕಳಿಯ ಪ್ರಾರ್ಥನೆ ನಮ್ಮ ಅಂತರಂಗವನ್ನು ಕಲಕಿ ಅಲ್ಲಿರುವ ಕೊಳಕನ್ನೆಲ್ಲ ಹೊರಹಾಕುತ್ತದೆ.

ಕಾಣದ ದೇವರೊಡನೆ ಮಾತನಾಡುವುದು ಹೇಗೆ? ಎಂಬ ಪ್ರಶ್ನೆ ಏಳಬಹುದು. ಆದರೆ, ನಾವು ಯಾವಾಗಲೂ ಮನಸ್ಸಿನಲ್ಲಿ ಇತರರೊಡನೆ ಮಾತನಾಡುವ ಮಾದರಿಯಲ್ಲಿಯೇ ನಮ್ಮ ಇಷ್ಟ ದೇವತೆಯೊಡನೆ ಮಾತನಾಡಬಹುದು. ಆಗ ನಮ್ಮ ಹೃದಯಾಂತರಾಳದಲ್ಲಿ ಉಂಟಾಗುವ ದಿವ್ಯ ಸ್ಪಂದನ, ಸ್ಫುರಿಸುವ ದಿವ್ಯ ಭಾವನೆಗಳೇ ಅತ್ಯುತ್ತಮ ಪ್ರಾರ್ಥನೆಯಾಗುತ್ತವೆ. ಅವೇ ಭಗವಂತನು ನಮ್ಮ ಪ್ರಾರ್ಥನೆಗೆ ನೀಡುವ ಉತ್ತರವೂ ಕೂಡ. 'ಭಗವಂತನೆಡೆಗೆ ಕಳಿಸಿದ ಕೃತಜ್ಞತಾಪೂರ್ಣವಾದ ಒಂದು ಆಲೋಚನೆಯೇ ಅತ್ಯಂತ ಪರಿಪೂರ್ಣವಾದ ಪ್ರಾರ್ಥನೆ' ಎಂಬುದು ಅನುಭವಿಗಳ ಮಾತು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷೆ, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಹಣದಿಂದ ಹಾಸಿಗೆ ಸಿಗುತ್ತದೆ, ನಿದ್ರೆ ಸಿಗುವುದಿಲ್ಲ!

ಹಣದಿಂದ ಹಾಸಿಗೆ ಸಿಗುತ್ತದೆ, ನಿದ್ರೆ ಸಿಗುವುದಿಲ್ಲ. ಹಣದಿಂದ ಆಹಾರ ಪದಾರ್ಥಗಳು ಸಿಗುತ್ತವೆ, ಬಾಯಿ ರುಚಿ ಸಿಕ್ಕುವುದಿಲ್ಲ. ಹಣದಿಂದ ಔಷಧ ದೊರೆಯುತ್ತದೆ, ಆರೋಗ್ಯ ಸಿಗದು. ಹಣದಿಂದ ಗ್ರಂಥಗಳನ್ನು ಖರೀದಿಸಬಹುದು. ಜ್ಞಾನ ದೊರೆಯದು. ಹಣದಿಂದ ಕಟ್ಟಡ ಕಟ್ಟಬಹುದು, ಮನೆಯಾಗದು. ಐಶ್ವರ್ಯ ಎಂಬುದು ಉಪ್ಪು ನೀರಿನಂತೆ ಕುಡಿದಷ್ಟೂ ಬಾಯಾರಿಕೆ ಜಾಸ್ತಿಯಾಗುತ್ತದೆ. ಆದರೂ ವ್ಯಾಮೋಹದಿಂದ ಹಣ ಕೂಡಿಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಅನೇಕರು ಗ್ರಂಥ ಸಂಗ್ರಹದಲ್ಲಿ, ಬಹುಗ್ರಂಥಗಳನ್ನು ಓದುವುದರಲ್ಲಿ ಆಸಕ್ತರಾಗಿರುತ್ತಾರೆಯೇ ಹೊರತು, ಅದರಲ್ಲಿರುವ ಭಾವನೆಗಳನ್ನು ಮೈಗೂಡಿಸಿಕೊಳ್ಳುವುದರಲ್ಲಿ ಅಲ್ಲ. ಅನೇಕರು ಸಾಂಪ್ರದಾಯಿಕ, ಧಾರ್ಮಿಕ ಆಚರಣೆಯಲ್ಲಿ ಮಗ್ನ ರಾಗಿರುತ್ತಾರೆಯೇ ಹೊರತು ಅದರ ಹಿಂದಿರುವ ಆಧ್ಯಾತ್ಮಿಕ ಆದರ್ಶವನ್ನು ಲೆಕ್ಕಿಸುವುದೇ ಇಲ್ಲ. ಇದರಿಂದ ಎಷ್ಟೇ ಧಾರ್ಮಿಕ ಕ್ರಿಯಾವಿಧಿಗಳನ್ನು ಅನುಸರಿಸಿದರೂ ದೇವಸ್ಥಾನಗಳಿಗೆ ಹೋದರೂ ಎಷ್ಟೇ ಜಪ ಮಾಡಿದರೂ ಅವರ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ.

ದಯಾಳುಗಳಾದರೆ, ಪರರ ಕಷ್ಟಕ್ಕೆ ಸ್ಪಂದಿಸಿದರೆ ನಿರಾಳವಾಗಿ ಮಲಗಬಹುದು. ಧರ್ಮ ಹೇಳುವುದೂ ಅದನ್ನೇ. ಸಾಧ್ಯವಾದಷ್ಟು ಸಹಾಯ ಮಾಡಿ ಎಂದು. ಪರೋಪಕಾರಕ್ಕಾಗಿ ಬದುಕುವುದೇ ಸದ್ಧರ್ಮವಾಗಿದೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಆತ್ಮಶ್ರದ್ಧೆ ನೈತಿಕತೆಯ ತಳಹದಿ

ನಿಜವಾದ ನೈತಿಕತೆ ವ್ಯಕ್ತಿಯಲ್ಲಿರುವ ಆಂತರಿಕ ಒಳ್ಳೆಯತನವನ್ನು ಆಧರಿಸಿದೆ. ವ್ಯಕ್ತಿ ನೈತಿಕತೆಯನ್ನು ಅನುಸರಿಸಬೇಕಾದುದು ಹೊರಗಿನ ಅವಶ್ಯಕತೆಯಿಂದಲ್ಲ, ಹೊರಗಿನ ಒತ್ತಾಯದಿಂದಲ್ಲ ಅಥವಾ ಶಿಕ್ಷೆಯ ಭಯದಿಂದಲೂ ಅಲ್ಲ. ಅವನ ಸ್ವಭಾವವೇ ಒಳ್ಳೆಯದಾಗಿರುವುದರಿಂದ.

ಆರೋಗ್ಯವಂತವಾಗಿರುವುದು ದೇಹದ ಸ್ವಭಾವ, ಕಾಯಿಲೆ ಬರುವುದು ಕೆಲವು ದೋಷಗಳಿಂದ. ಹಾಗೆಯೇ, ನೈತಿಕವಾಗಿ ಜೀವಿಸುವುದು ಸ್ವಭಾವ. ಅನೈತಿಕತೆ ಅವನಿಗೆ ಅಸ್ವಭಾವಿಕ, ಕೆಲವು ವೈಯಕ್ತಿಕ ಮತ್ತು ಸಾಮಾಜಿಕ ದೋಷಗಳಿಂದ ಉಂಟಾಗುತ್ತದೆ.

ಆಂತರಿಕ ಒಳ್ಳೆಯತನದ ಅರಿವು ಮೂಡಬೇಕು, ತನ್ನ ಬಗ್ಗೆ ಉದಾತ್ತ ಭಾವನೆಯೂ ಗೌರವವೂ ಉಂಟಾಗಬೇಕು. ಆಗ ವ್ಯಕ್ತಿ ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾನೆ. ಮಕ್ಕಳಿಗೆ ಆತ್ಮಶ್ರದ್ಧೆಯ ಭಾವನೆಗಳನ್ನು ನೀಡಿದರೆ, ಅವರಲ್ಲಿ ಆತ್ಮಗೌರವನ್ನು ಕೆರಳಿಸಿದರೆ ಮತ್ತು ನೈತಿಕತೆಯ ಅವಶ್ಯಕತೆಯನ್ನು ಮನಗಾಣುವಂತೆ ಮಾಡಿದರೆ ಆಗ ಅವರು ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾರೆ.

‘ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ಅನುಷ್ಠಾನಕ್ಕೆ ತಂದಿದ್ದರೆ ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು’ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ತಂದೆ ತಾಯಿ ಮತ್ತು ಹಿರಿಯರು ಮಕ್ಕಳಿಗೆ ಸುಳ್ಳು ಹೇಳಬೇಡ, ಕದಿಯಬೇಡ ಮುಂತಾದ ನೈತಿಕ ಬೋಧನೆಯನ್ನು ಮಾಡುತ್ತಾರೆ ಮತ್ತು ಅವರು ಅನೈತಿಕವಾಗಿ ವರ್ತಿಸಿದರೆ ಬೈಯುತ್ತಾರೆ ಅಥವಾ ಹೊಡೆಯುತ್ತಾರೆ. ಏಕೆ ಹಾಗೆ ಮಾಡಬಾರದು ಎಂಬುದನ್ನು ಅವರು ತಿಳಿಸಿಕೊಡುವುದಿಲ್ಲ. ಇದರಿಂದಾಗಿ ನೈತಿಕತೆಯ ಅವಶ್ಯಕತೆಯ ಅರಿವು ಅವರಿಗೆ ಉಂಟಾಗುವುದೇ ಇಲ್ಲ. ಇನ್ನೊಂದು ವಿಷಯವೇನೆಂದರೆ ಮಕ್ಕಳು ನಮ್ಮ ನುಡಿಗಿಂತ ನಮ್ಮ ನಡೆಯನ್ನು ಅನುಸರಿಸುವುದೇ ಅಧಿಕ. ಆದ್ದರಿಂದ ಅವರಲ್ಲಿ ನೈತಿಕ ಪ್ರಜ್ಞೆ ಮೂಡುವಂತಾಗಲು ಮನೆಯಲ್ಲಿ ನೈತಿಕ ವಾತಾವರಣ ಸೃಷ್ಟಿಯಾಗಬೇಕು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ವಿದ್ಯಾರ್ಥಿಗಳಿಗೆ ಬೇಕು ಚಾರಿತ್ರ್ಯ ಶುದ್ಧಿ

ಇಂದಿನ ವಿದ್ಯಾರ್ಥಿಗಳು, ಯುವಕರು ತುಂಬಾ ಭಾವೋದ್ರೇಕಿಗಳಾಗುತ್ತಿದ್ದಾರೆ. ಅವರಿಗೆ ಸ್ವಲ್ಪವೂ ದುಃಖವನ್ನಾಗಲಿ, ಅವಮಾನವನ್ನಾಗಲೀ ಸಹಿಸುವ ಶಕ್ತಿ ಇಲ್ಲ. ಥಟ್ಟನೆ ಕೋಪಕ್ಕೆ ಒಳಗಾಗಿ ಏನೇನೋ ಮಾಡಿಬಿಡುತ್ತಾರೆ. ಕೆಲವೊಮ್ಮೆ ತೀವ್ರ ದುಗುಡಕ್ಕೆ ಒಳಗಾಗಿ ಆತ್ಮಹತ್ಯೆಯನ್ನೇ ಮಾಡಿಕೊಂಡು ಬಿಡುತ್ತಾರೆ. ಈ ಎಲ್ಲ ದುರ್ಬಲತೆಗೆ ಮುಖ್ಯ ಕಾರಣ ಚಾರಿತ್ರ್ಯಶುದ್ಧಿಯ ಕೊರತೆ.

ಇಂದಿನ ವಿದ್ಯಾರ್ಥಿಗಳಲ್ಲಿರಬೇಕಾದ ಎರಡನೇ ಮುಖ್ಯಗುಣ ಚಾರಿತ್ರ್ಯಶುದ್ಧಿ. ಚಾರಿತ್ರ್ಯಶುದ್ಧಿ ಅಂದರೆ ಸತ್ಯ, ಪ್ರಾಮಾಣಿಕತೆ, ಅಹಿಂಸೆ, ಇಂದ್ರಿಯನಿಗ್ರಹ ಇತ್ಯಾದಿ ನೈತಿಕ ಗುಣಗಳನ್ನು ಪಾಲಿಸುವುದರಿಂದ ಇಚ್ಛಾಶಕ್ತಿ ಪ್ರಬಲವಾಗುತ್ತದೆ. ಇದೇ ಚಾರಿತ್ರ್ಯದ ತಳಹದಿ.

ಚಾರಿತ್ರ್ಯವೆಂದರೆ ಒಟ್ಟು ಸಂಸ್ಕಾರಗಳ ಮೊತ್ತ. ಒಬ್ಬ ವ್ಯಕ್ತಿಯು ಒಳ್ಳೆಯದನ್ನೋ, ಕೆಟ್ಟದನ್ನೋ ನಿರಂತರವಾಗಿ ಮಾಡುತ್ತಾ, ಚಿಂತಿಸುತ್ತಾ, ಮಾತನಾಡುತ್ತಾ ಇದ್ದರೆ ಅದೇ ಒಂದು ಸಂಸ್ಕಾರವಾಗಿ ಅದಕ್ಕನುಗುಣವಾದ ಚಾರಿತ್ರ್ಯ ಅವನದಾಗುತ್ತದೆ. ಚಾರಿತ್ರ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ. ಚಾರಿತ್ರ್ಯಶುದ್ಧಿ ಇಲ್ಲದಿದ್ದರೆ ನಾವು ಪಡೆದ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗುವುದಿಲ್ಲ.

ನಾವು ನಿಜವಾದ ಅರ್ಥದಲ್ಲಿ ಮಾನವರಾಗಿ ಬಾಳಬೇಕಾದರೆ ಜ್ಞಾನದ ಹಂಬಲ, ಚಾರಿತ್ರ್ಯಶುದ್ಧಿ, ಮಾನವೀಯ ಸಂಬಂಧ, ಆಧ್ಯಾತ್ಮಿಕತೆಯ ಒಲವು ನಮ್ಮಲ್ಲಿರಬೇಕು. ಪ್ರಿಯ ವಿದ್ಯಾರ್ಥಿಗಳೇ, ಇವುಗಳನ್ನು ನಿಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ನೀವೂ ನೆಮ್ಮದಿಯಿಂದ ಬಾಳಿ, ಇತರರಿಗೂ ನೆಮ್ಮದಿಯನ್ನು ನೀಡಿ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ನಾವೇನಾಗಿರುವೆವೋ ಅದು ಸಂಸ್ಕೃತಿ

‘ನಾವೇನಾಗಿರುವೆವೋ ಅದು ಸಂಸ್ಕೃತಿ ಮತ್ತು ನಾವು ಏನು ಪಡೆದಿರುವೆವೋ ಅದು ನಾಗರಿಕತೆ’ ಎಂಬುದು ಸಂಸ್ಕೃತಿ ಮತ್ತು ನಾಗರಿಕತೆ ಬಗೆಗಿನ ಒಂದು ಪ್ರಸಿದ್ಧ ಹೇಳಿಕೆ.

ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ, ಆಂತರಿಕ ಶಾಂತಿ ಮತ್ತು ಆನಂದ, ನಮ್ಮ ನಡವಳಿಕೆ, ಇತರರೊಡನೆ ನಾವು ಹೊಂದಿರುವ ಉತ್ತಮ ಸಂಬಂಧ ಮತ್ತು ಸಾಮಾಜಿಕ ಸ್ಥಿರತೆ ಇವು ಬಹುಮಟ್ಟಿಗೆ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ.

ನಮ್ಮ ಬಾಹ್ಯ ಜೀವನಮಟ್ಟ, ಹೊಂದಿರುವ ಸೌಲಭ್ಯ, ವಿಲಾಸಿ ವಸ್ತುಗಳು ನಮ್ಮ ಭೌತಿಕ ಮತ್ತು ಬೌದ್ಧಿಕ ಸಂಪತ್ತು. ಇವು ನಮ್ಮ ನಾಗರಿಕತೆಯ ಅಳತೆಗೋಲು. ಸಂಸ್ಕೃತಿ ಮತ್ತು ನಾಗರಿಕತೆಗಳು ಕ್ರಮವಾಗಿ ನಮ್ಮ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಜೀವನವನ್ನು ಪ್ರತಿನಿಧಿಸುತ್ತವೆ. ಇವೆರಡೂ ಪರಸ್ಪರ ಪೂರಕ. ಆದರೆ, ನಾವು ಪಡೆದಿರುವುದೇ ಪ್ರಧಾನವಾಗಿ ನಾವೇನಾಗಿರುವೆವೋ. ಅದು ಗೌಣವಾದರೆ ಆಗ ಜೀವನ ಶೂನ್ಯವೂ ಅರ್ಥಹೀನವೂ ಆಗುತ್ತದೆ.

ಶಿಕ್ಷಣದ ಹಂತದಲ್ಲಿ ಜ್ಞಾನಾರ್ಜನೆ ಮತ್ತು ಕಾರ್ಯ ಕುಶಲತೆ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಆದರೆ, ಇದರ ಜೊತೆಗೆ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿತ್ವದ ಬೆಳವಣಿಗೆಯೂ ಆಗಬೇಕು. ಅದಿಲ್ಲದಿದ್ದರೆ ಪಡೆದ ಜ್ಞಾನ ಮತ್ತು ಕೌಶಲಗಳನ್ನು ಸರಿಯಾದ ರೀತಿಯಲ್ಲಿ, ಸ್ವಂತಕ್ಕೂ ಹಾಗೂ ಸಮಾಜಕ್ಕೂ ಉಪಯುಕ್ತವಾಗುವಂತೆ ಬಳಸಿಕೊಳ್ಳಲಾಗುವುದಿಲ್ಲ. ಜ್ಞಾನವು ಒಂದು ಶಕ್ತಿ. ಆ ಶಕ್ತಿಯನ್ನು ಪಡೆಯುವುದು ನಾಗರಿಕತೆಯಾದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬಲ್ಲ ವ್ಯಕ್ತಿತ್ವವನ್ನು ಪಡೆಯುವುದು ಸಂಸ್ಕೃತಿ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ಕೋಪದ ಪರಿಣಾಮ ಅನರ್ಥಕಾರಿ

ಕೋಪದಿಂದಾಗುವ ಕೆಟ್ಟ ಪರಿಣಾಮಗಳು ನೂರಾರು. ಎಲ್ಲ ಮಹಾತ್ಮರು ಕೋಪವನ್ನು ಶಪಿಸಿದ್ದಾರೆ. ಭಗವದ್ಗೀತೆಯಲ್ಲಿ ಕೋಪವನ್ನು ನರಕದ ಬಾಗಿಲು ಎಂದು ಕರೆಯಲಾಗಿದೆ. ಕೋಪದ ಪರಿಣಾಮ ಜಗಳ. ಬೈಗಳಗಳಿಗೆ ಪ್ರತಿಬೈಗಳು, ಹಿಂಸೆಗೆ ಪ್ರತಿಹಿಂಸೆ. ಹೀಗೆ ಕೋಪಿಷ್ಠರಿಂದ ಅಧರ್ಮ ಪ್ರಸಾರ, ಅಲ್ಲದೆ ಸರ್ವನಾಶ ಉಂಟಾದೀತೆಂದು ಎಚ್ಚರಿಸುತ್ತದೆ ಮಹಾಭಾರತ.

ಮನುಷ್ಯನ ಮೆದುಳನ್ನು ಸಿಟ್ಟು ಪ್ರವೇಶಿಸಿದಾಗ, ಅವನು ತೋರಿಸುವ ವಿಕಾರ ವರ್ತನೆಗಳು ಅನೇಕ ರೀತಿಯದಾಗಿರುತ್ತವೆ. ಕೋಪದ ಕುರಿತು ಒಂದು ಶ್ಲೋಕ ಹೀಗೆನ್ನುತ್ತದೆ, 'ಉತ್ತಮರ ಕೋಪ ಒಂದು ಕ್ಷಣ, ಮಧ್ಯಮರದು ಎರಡು ತಾಸು, ಅಧಮರು ದಿನವಿಡೀ ಕೋಪಗೊಂಡರೆ, ದುರಾತ್ಮರು ಜೀವಮಾನವೆಲ್ಲ ಕೋಪವನ್ನುಳಿಸಿಕೊಳ್ಳುತ್ತಾರೆ' ಅಂದರೆ ಕೋಪವನ್ನು ದೀರ್ಘಾಯುವಾಗಲು ಬಿಡಬೇಡಿ.

ಕೋಪ ನಿಮ್ಮ ದೈಹಿಕ,ಮಾನಸಿಕ ಸಮತ್ವವನ್ನು ನಾಶ ಗೊಳಿಸುವುದು. ಅದರಿಂದಾಗಿ ಇತರರೊಡನೆ ಸುಮ್ಮನೆ ದ್ವೇಷ ಕಟ್ಟಿಕೊಳ್ಳಬೇಕಾಗುವುದು. ಸಿಡುಕಿನ ನಿಮ್ಮವರ್ತನೆ ಇತರರಿಗೆ ಅಸಹ್ಯವಾಗುವುದು. ಸಿಟ್ಟನ್ನು ಕುರಿತು ಬಸವಣ್ಣನವರ ವಾಣಿ ನೆನಪಿರಲಿ. 'ಮನೆಯೊಳಗಣ ಕಿಚ್ಚು ಮನೆಯನ್ನೇ ಸುಡುವಂತೆ ತನ್ನಲ್ಲಿ ಹುಟ್ಟಿದ ಕೋಪ ತನ್ನನ್ನು ಸುಡದೇ ಬಿಡದು'.

ಆದರೆ ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ, ಸಮಾಜದ ಮಧ್ಯೆ ಇರಬೇಕಾದರೆ ದುಷ್ಟರ ಕೈಯಿಂದ ತಪ್ಪಿಸಿಕೊಳ್ಳಲು ಮನುಷ್ಯ ಸ್ವಲ್ಪ ತಮೋ ಗುಣವನ್ನು ಪ್ರದರ್ಶಿಸಬೇಕಾಗುತ್ತದೆ. ಆದರೆ ಮುಯ್ಯಿಗೆ ಮುಯ್ಯಿ ತೀರಿಸಲು ಹೋಗಬಾರದು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಯುಕ್ತ ರೀತಿಯಲ್ಲಿ ಬಳಕೆಯಾಗಲಿ ಮನಸ್ಸು

ಆಲೋಚನೆ ಎಂದರೆ ವಸ್ತು, ವ್ಯಕ್ತಿ, ಘಟನೆ ಮುಂತಾದವುಗಳನ್ನು ಕುರಿತು ಮನಸ್ಸಿನಲ್ಲೇಳುವ ಚಿಂತನಾತರಂಗಗಳು. ವಿವಿಧ ಕಲ್ಪನೆಗಳು, ಬೌದ್ಧಿಕ ವಿಚಾರಗಳೂ ಇದೇ ಗುಂಪಿಗೆ ಸೇರುತ್ತವೆ.

ಇಚ್ಛೆ ಎಂದರೆ ಆಸೆಗಳ ಅನುಮೋದನೆ ಅಥವಾ ನಿರೋಧ. ನಾವು ಕೆಲವು ಆಸೆಗಳನ್ನು ಪೂರ್ತಿ ಗೊಳಿಸುವ ಸಂಕಲ್ಪ ಮಾಡುತ್ತೇವೆ. ಮತ್ತೆ ಕೆಲವು ಆಸೆಗಳನ್ನು ಸನ್ನಿವೇಶಕ್ಕೆ ತಕ್ಕಂತೆ ನಿರೋಧಿಸುತ್ತೇವೆ ಅಥವಾ ಮಾರ್ಪಡಿಸುತ್ತೇವೆ ಅಥವಾ ಮುಂದೂಡುತ್ತೇವೆ. ಈ ಮಾನಸಿಕ ಕ್ರಿಯೆಗೆ ಇಚ್ಛೆಯೆಂದು ಹೆಸರು. ನಮ್ಮಲ್ಲೇಳುವ ರಾಗ, ದ್ವೇಷ ಭಯ, ಅನುಕಂಪ ಮುಂತಾದ ಭಾವ ತರಂಗಗಳಿಗೆ ಭಾವನೆ ಎಂದು ಹೆಸರು.

ಆಲೋಚನೆಗಳನ್ನು ವ್ಯವಸ್ಥಿತಗೊಳಿಸಿದರೆ ನಮ್ಮ ಬೌದ್ಧಿಕ ಸಾಮರ್ಥ್ಯ ವೃದ್ಧಿಯಾಗುತ್ತದೆ. ವ್ಯವಸ್ಥಿತವಾಗಿ ಆಲೋಚಿಸುವುದನ್ನು ನಾವು ಕಲಿಯಬೇಕು. ಆಗ ಹೊಸ ಹೊಸ ವಿಚಾರಗಳು ಮನಸ್ಸಿಗೆ ಬರುತ್ತವೆ. ಹಾಗೆಯೇ ನಮ್ಮ ಆಸೆಗಳನ್ನು ನಿಗ್ರಹಿಸುವುದರ ಮೂಲಕ ನಮ್ಮ ಇಚ್ಛಾಶಕ್ತಿಯನ್ನು ವೃದ್ಧಿಸಬಹುದು. ಆಗ ಉನ್ನತ ಆದರ್ಶವನ್ನು ಅನುಸರಿಸಲು ಇಚ್ಛೆ ನೆರವಾಗುತ್ತದೆ. ನಮ್ಮ ಕೋಪ, ಭಯ, ಅಸೂಯೆ ಮುಂತಾದ ನಿಷೇಧಾತ್ಮಕ ಭಾವನೆಗಳನ್ನು ಪ್ರೀತಿ ಅನುಕಂಪ ಸಹಾನುಭೂತಿ ಮುಂತಾದ ಅನ್ವಯಾತ್ಮಕ ಭಾವನೆಗಳಾಗಿ ಪರಿವರ್ತಿಸಬೇಕು. ಹೀಗೆ ನಮ್ಮ ಮನಸ್ಸನ್ನು ಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು.

ಪ್ರಜಾವಾಣಿ

# ವಚನಾಮೃತ



ಮಾತಾ ಕೈವಲ್ಯಮಯಿ, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಭಗವದ್ ಚಿಂತನೆಯಿಂದ ಯೋಗ ಕ್ಷೇಮ

**ಯೋಗ** ಕ್ಷೇಮ ಎಂಬುದು ಪಾರಿಭಾಷಿಕ ಶಬ್ದ. ನಮ್ಮಲ್ಲಿಲ್ಲದ್ದನ್ನು ಬೇಕಾದುದನ್ನು ಪಡೆಯುವುದು ಯೋಗ. ಇರುವುದನ್ನು ಕಾಪಾಡಿಕೊಳ್ಳುವುದು ಕ್ಷೇಮ. ವ್ಯಾವಹಾರಿಕ ಜಗತ್ತೆಲ್ಲವೂ ಕೇವಲ 'ಯೋಗಕ್ಷೇಮ'ಕ್ಕಾಗಿ ಮಾಡುವ ಪ್ರಯತ್ನವೇ. ಮನಃಶಕ್ತಿಯ ಅಧಿಕ ಅಂಶ ಇದರಲ್ಲಿ ವ್ಯಯವಾಗುತ್ತಿದ್ದರೆ ಭಕ್ತಿ ಸಾಧನೆಗೆ ಏನು ಉಳಿದೀತು? ಆದುದರಿಂದ ಯೋಗಕ್ಷೇಮದ ಚಿಂತೆಯನ್ನು, ಮಾಯೆಯನ್ನು ದಾಟಲು ಬಯಸುವ ಭಕ್ತನು ತ್ಯಜಿಸಬೇಕು.

ಮೊದಲು 'ಯೋಗಕ್ಷೇಮ' ಸರಿಯಾಗಿದ್ದರೆ ತಾನೇ ಅನಂತರ ಭಗವತ್ ಚಿಂತನೆ ಮಾಡಲು ಸಾಧ್ಯ? ಅದನ್ನೇ ಬಿಡಬೇಕು ಎಂದರೆ ಮತ್ತಾರು ನೋಡಿಕೊಳ್ಳುವವರು?

ಏಕಾಂತದಲ್ಲಿ ದೇವರ ಚಿಂತನೆ ಮಾಡಿದರೆ ಜ್ಞಾನ, ಭಕ್ತಿ ವೈರಾಗ್ಯಗಳು ಪ್ರಾಪ್ತವಾಗುತ್ತವೆ. ಆದರೆ, ಆ ಮನಸ್ಸನ್ನು ಸಂಸಾರದಲ್ಲಿ ಹಾಕಿಬಿಟ್ಟರೆ ಕದಡುತ್ತದೆ. ಸಂಸಾರದಲ್ಲಿ ಕೇವಲ ಕಾಮ-ಕಾಂಚನಗಳ ಚಿಂತೆ. ಹೆಪ್ಪು ಹಾಕಿದ ಹಾಲನ್ನು ಸದಾ ಕುಲುಕಿ ಅಲ್ಲಾಡಿಸುತ್ತಿದ್ದರೆ ಅದು ಮೊಸರಾಗುವುದಿಲ್ಲ. ಮೊಸರಿಂದ ಬೆಣ್ಣೆ ತೆಗೆಯಬೇಕಾದರೆ ಸಾವಧಾನದಿಂದ ಕುಳಿತು ಮೊಸರನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಬಹುದು. ಹಾಗೆಯೇ, ಮೊದಲು ಏಕಾಂತದಲ್ಲಿ ಸಾಧನೆ ಮಾಡಿ ಜ್ಞಾನ-ಭಕ್ತಿಗಳೆಂಬ ಬೆಣ್ಣೆಯನ್ನು ಪಡೆದು, ಅನಂತರ ಎಲ್ಲಿ ಬೇಕಾದರೂ ಇಡಬಹುದು.

ಸಂಸಾರದಲ್ಲಿದ್ದು ಸಾಧನೆ ಮಾಡುವುದು ತುಂಬ ಕಠಿಣ. ಅಲ್ಲಿ ಅನೇಕ ಅಡ್ಡಿ ಆತಂಕಗಳು, ರೋಗ,ರುಜಿನಗಳು, ಶೋಕ, ದಾರಿದ್ರ್ಯದಂಥ ಅನೇಕ ರೀತಿಯ ಸಮಸ್ಯೆಗಳು. ಹಾಗಿರುವುದರಿಂದ ಸಂಸಾರಿಗಳಿಗಿರುವ ಉಪಾಯವೆಂದರೆ ಏಕಾಂತದಲ್ಲಿದ್ದು ಸಾಧನೆ ಮಾಡುವುದು. ಹೀಗೆ ಏಕಾಂತದಲ್ಲಿ ಸಾಧನೆ ಮಾಡುವಾಗ ಪರಮಾತ್ಮನೇ ಸರ್ವಸ್ವ ಎಂದು ಭಾವಿಸಿ ಸಾಧನೆ ಮಾಡಬೇಕು. ಆಗ ದೇವರು ಒಲಿಯುವನು. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಅತಿ ಆಸೆ, ದುರಾಸೆಗಳಿರಬಾರದು

ಸ್ವಾಮಿ ವಿವೇಕಾನಂದರು ಹೇಳುವಂತೆ ಭಾರತದ ಎರಡು ಮುಖ್ಯ ಆದರ್ಶಗಳು ಸೇವೆ ಮತ್ತು ತ್ಯಾಗ. ಇತರರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು. ಯಾವುದೇ ರೂಪದ್ದಾಗಿರಬಹುದು. ಆರ್ಥಿಕವಾಗಿರಬಹುದು, ಶೈಕ್ಷಣಿಕವಾಗಿರಬಹುದು ಅಥವಾ ಆಧ್ಯಾತ್ಮಿಕವಾಗಿರಬಹುದು. ಈ ಸಮಾಜದಲ್ಲಿ ಒಂಟಿಯಾಗಿರಲು ಆಗುವುದಿಲ್ಲ. ಸಹಾಯವನ್ನು ಸ್ವೀಕರಿಸಬೇಕಾಗುವುದು. ಆದರೆ, ಇತರರಿಗೆ ಸಹಾಯ ಮಾಡುವಾಗ ಸೇವಾ ಮನೋಭಾವದಿಂದ ಮಾಡಬೇಕು. ಈ ಸೇವಾ ಮನೋಭಾವವೇ ಪ್ರವೃತ್ತಿಶೀಲತೆಯ ಉದಾತ್ತ ರೂಪ.

ಈ ಸೇವೆಯ ಹಿಂದೆ ತ್ಯಾಗವೂ ಇರಬೇಕು. ಅತಿ ಆಸೆ ದುರಾಸೆಗಳಿರಬಾರದು. ಪ್ರಾಪಂಚಿಕ ವಸ್ತುಗಳಲ್ಲಿ ವ್ಯಾಮೋಹವಿರಬಾರದು. ಹೀಗಿಲ್ಲದಿದ್ದರೆ ಸೇವೆಯೂ ಸ್ವಾರ್ಥಪರವಾಗುವುದು. ಕೀರ್ತಿ ಯಶಸ್ಸುಗಳ ಸಾಧನವಾಗುವುದು. ನಿರ್ಲಿಪ್ತತೆ ಇದ್ದರೆ ಮಾತ್ರ ನಿಸ್ವಾರ್ಥ ಸೇವೆ ಸಾಧ್ಯ. ಈ ನಿರ್ಲಿಪ್ತತೆಯೇ ನಿವೃತ್ತಿಯ ಉದಾತ್ತ ರೂಪ. ನಮ್ಮ ಪ್ರವೃತ್ತಿಯು ಸೇವಾ ರೂಪದಲ್ಲಿ ವ್ಯಕ್ತವಾಗಬೇಕು. ನಿವೃತ್ತಿಯು ತ್ಯಾಗ ರೂಪದಲ್ಲಿ ವ್ಯಕ್ತವಾಗಬೇಕು.

ಜೀವನ ಒಂದು ಹೋರಾಟ. ಅನೇಕ ಶಕ್ತಿಗಳು ನಮ್ಮ ವಿಕಾಸವನ್ನು ತಡೆಗಟ್ಟಲು ಪ್ರಯತ್ನಿಸುತ್ತಿರುವುವು. ಅನೇಕ ಕಷ್ಟನಷ್ಟಗಳನ್ನು ನಾವು ಅನುಭವಿಸಬೇಕಾಗುವುದು. ಅನೇಕ ಆಘಾತಗಳನ್ನು ಸಹಿಸಬೇಕಾಗುವುದು. ಈ ಹೋರಾಟದಲ್ಲಿ, ಈ ಜೀವನ ಸಂಗ್ರಾಮದಲ್ಲಿ ನಾವು ಜಯಗಳಿಸಿದರೆ ನಮ್ಮ ಜೀವನ ಸಾರ್ಥಕವೆನಿಸುವುದು. ಅದಕ್ಕಾಗಿ ನಮ್ಮ ಸ್ವಭಾವ ಜನ್ಯವಾದ ಪ್ರವೃತ್ತಿ, ನಿವೃತ್ತಿಗಳೆರಡನ್ನೂ ನಮ್ಮ ಜೀವನ ವಿಕಾಸಕ್ಕೆ ಪೂರಕವಾಗುವಂತೆ ಉಪಯೋಗಿಸಿಕೊಳ್ಳಬೇಕು.

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಜೀವನದಲ್ಲಿ ದುಃಖ ಅನಿವಾರ್ಯ

ಈ ಜೀವನದಲ್ಲಿ ದುಃಖ ಮಿಶ್ರವಿಲ್ಲದ ಸುಖವೆಂಬುದು ಇಲ್ಲವೇ ಇಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, 'ಸುಖವು ದುಃಖದ ಕಿರೀಟವನ್ನು ತೊಟ್ಟುಕೊಂಡು ಬರುತ್ತದೆ'.

ಅನಿವಾರ್ಯವಾದುದನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು. ಆಂಗ್ಲಭಾಷೆಯಲ್ಲಿ ಒಂದು ಪ್ರಾರ್ಥನೆ ಇದೆ. 'ಓ ಪ್ರಭು, ಯಾವುದನ್ನು ನಾನು ಬದಲಾಯಿಸಲಾಗುವುದಿಲ್ಲವೋ ಅದನ್ನು ಒಪ್ಪಿಕೊಳ್ಳುವ ಮಾನಸಿಕ ಪ್ರಶಾಂತತೆಯನ್ನೂ, ಯಾವುದನ್ನು ನಾನು ಬದಲಾಯಿಸಬಹುದೊ ಅದನ್ನು ಬದಲಾಯಿಸುವ ಧೈರ್ಯವನ್ನೂ, ಇವೆರಡನ್ನೂ ಬೇರ್ಪಡಿಸುವ ವಿವೇಕವನ್ನೂ ನನಗೆ ಕರುಣಿಸು' ಎಂದು.

ನಾವೆಲ್ಲರೂ ಮಾನವರು, ಯಾರೂ ಪರಿಪೂರ್ಣ ವ್ಯಕ್ತಿಗಳಲ್ಲ. ಕುಟುಂಬದಲ್ಲಾಗಲಿ, ಸಂಸ್ಥೆಯಲ್ಲಾಗಲಿ ಅಥವಾ ಸಮಾಜದಲ್ಲಾಗಲಿ ಪರಸ್ಪರ ಮನಸ್ತಾಪ, ಜಗಳ ಇತ್ಯಾದಿಗಳು ಅನಿವಾರ್ಯ. ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳು ಅನಿವಾರ್ಯ. ಇವನ್ನೆಲ್ಲ ನಾವು ಒಪ್ಪಿಕೊಂಡು ಶಾಂತ ಚಿತ್ತರಾಗಿರುವುದನ್ನು ಕಲಿಯಬೇಕು.

ಶಾರದಾ ಮಾತೆಯವರು ಹೇಳುತ್ತಾರೆ, 'ಕಷ್ಟ, ಸುಖಗಳು ಮನುಷ್ಯರನ್ನು ಬಿಟ್ಟು ಮತ್ತೆಲ್ಲಿಗೆ ಹೋಗುತ್ತವೆ?' ನಾವು ಮನುಷ್ಯರಾಗಿರುವುದರಿಂದಲೇ ನಮಗೆ ಕಷ್ಟಗಳು ಬರುತ್ತವೆ. ಕಷ್ಟವನ್ನು ಪರಿಭಾವಿಸುವ ಸಾಮರ್ಥ್ಯ ಮನುಷ್ಯತ್ವದ ಒಂದು ಲಕ್ಷಣ. ಈ ಸಾಮರ್ಥ್ಯ ನಮಗಿರುವುದಕ್ಕಾಗಿ ನಾವು ಸಂತೋಷ ಪಡೋಣ.

ಮಹಾ ಭಾರತದಲ್ಲಿ ಒಂದು ಶ್ಲೋಕವಿದೆ, 'ಸುಖವು ನಮಗೆ ಸುಖವಾಗಿಯೇ ಸಿಗುವುದಿಲ್ಲ. ಸುಖಗಳು ದುಃಖದಿಂದಲೇ ಲಭಿಸುವಂತಹವು. ಕಷ್ಟಗಳು ಜೀವನದ ಅವಿಭಾಜ್ಯ ಅಂಗಗಳು ಎಂಬುದನ್ನೂ, ಕಷ್ಟಗಳು ನಮ್ಮ ಪ್ರಗತಿಗೆ ಅವಶ್ಯಕ ಎಂಬುದನ್ನೂ ಅರಿತು ಕಷ್ಟಗಳನ್ನು ಸ್ವೀಕರಿಸೋಣ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಮೃದು ವಚನವೇ ಸಕಲ ಜಪಂಗಳಯ್ಯ

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಭಾಷೆ ಎಂತಹ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಆಲೋಚಿಸಿದಾಗ ನಾವು ವಾಗ್ದೇವಿಯನ್ನು ಗೌರವಿಸುವುದು, ಪೂಜಿಸುವುದು ಅತ್ಯಂತ ಅರ್ಥಪೂರ್ಣವಾಗಿ ಕಾಣುತ್ತದೆ. ಜಗತ್ತಿನ ಬಗ್ಗೆ ನಮ್ಮ ಭಾವನೆಗಳೆಲ್ಲವೂ ಭಾಷೆಯ ಮೂಲಕವೇ ಉಂಟಾಗಿರುವುದು. ಭಾಷೆಯ ಹೊರತಾಗಿ ನಾವು ವಸ್ತುಗಳ ಬಗ್ಗೆ ಚಿಂತಿಸಲಾರೆವು. ನಾವು ಚಿಂತಿಸುವುದೆಂದರೆ ಮನಸ್ಸಿನಲ್ಲಿ ಮಾತನಾಡುವುದು. ಭರ್ತೃಹರಿ ಎಂಬ ತತ್ವಜ್ಞಾನಿಯ ಅಭಿಪ್ರಾಯದಲ್ಲಿ ನೇರವಾಗಿಯೋ, ಪರೋಕ್ಷವಾಗಿಯು ಭಾಷೆಯ ಮೂಲಕ ವ್ಯಕ್ತವಾಗದ ಒಂದು ವಸ್ತು ಇದೆ ಎಂದು ಊಹಿಸಲಾಗುವುದಿಲ್ಲ.

ಭಾಷೆಗಿಂತ ಸ್ವತಂತ್ರವಾಗಿ ಒಂದು ವಸ್ತು ಇರಬಹುದಾದರೂ ಅದು ಇದೆ ಎಂದು ಅರಿವಾಗುವುದು ಭಾಷೆಯ ಮೂಲಕ. ನಮ್ಮ ದಿನನಿತ್ಯದ ಜೀವನದಲ್ಲಿ ಜನರೊಡನೆ ವ್ಯವಹರಿಸುವಾಗ ನಮ್ಮ ಮಾತಿನ ನಿಗ್ರಹ ಅತ್ಯವಶ್ಯಕ. ಅವರೊಡನೆ ಹೇಗೆ ಎಷ್ಟು ಮಾತನಾಡಬೇಕು ಎಂಬ ಕೌಶಲ ನಮಗಿರಬೇಕು.

ನಿಮ್ಮ ಅಚಾತುರ್ಯದ ಮಾತಿನಿಂದ ಎಷ್ಟೋ ಅನಾಹುತಗಳಾಗುತ್ತವೆ. ಮುಚ್ಚುಮರೆ ಇಲ್ಲದೆ ಮಾತನಾಡುವ ಬಿಚ್ಚು ಮನಸ್ಸಿನ ಕೆಲವರು ತಮ್ಮ ಮಾತಿನ ಮೂಲಕ ಇತರರ ಮನಸ್ಸನ್ನು ಎಷ್ಟೊಂದು ನೋಯಿಸುತ್ತಾರೆ ಎಂಬುದನ್ನು ತಿಳಿಯುವುದೇ ಇಲ್ಲ. ಅವರ ಅಹಂಕಾರ ಅವರನ್ನು ತಿಳಿಯುವುದಕ್ಕೆ ಬಿಡುವುದಿಲ್ಲ.

ಹೀಗೆಯೇ ದರ್ಪ ಅಹಂಕಾರಗಳಿಂದ ಕೂಡಿದ ಅನೇಕರು ತಮ್ಮ ಕಟು ಮಾತಿನ ಮೂಲಕ ಇತರರನ್ನು ಎಷ್ಟೊಂದು ನೋಯಿಸುತ್ತಾರೆ. ಇತರರಿಗೆ ಅಹಿತವನ್ನುಂಟು ಮಾಡುವ ಇತರರ ಮನಸ್ಸನ್ನು ನೋಯಿಸುವ ಮಾತನ್ನು ಅದು ಸತ್ಯವಾದರೂ ನುಡಿಯಕೂಡದು. ಏಕೆಂದರೆ ನೈತಿಕತೆಯ ಮುಖ್ಯ ತಳಹದಿಯೇ ಇತರರನ್ನು ಪ್ರೀತಿಸುವುದು. ಇತರರಿಗೆ ಕಳಕಳಿಯನ್ನು ತೋರಿಸುವುದು. ಜಗತ್ತಿಗೆ ಅನುಗುಣವಾಗಿ ನಮ್ಮ ಮಾತು ವ್ಯವಹಾರಗಳನ್ನು ನಿಯಂತ್ರಿಸಿಕೊಳ್ಳಬೇಕು. ಆದ ಕಾರಣವೇ ಬಸವಣ್ಣವರು ಹೀಗೆ ಹೇಳುತ್ತಾರೆ 'ಮೃದುವಚನವೇ ಸಕಲ ಜಪಂಗಳಯ್ಯ, ಮೃದು ವಚನವೇ ಸಕಲ ತಪಂಗಳಯ್ಯ'.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ತ್ಯಾಗ, ಮಾನವೀಯತೆ ಮುಖ್ಯವಾಗಲಿ

'ತ್ಯಾಗದ ಮೂಲಕ ಭೋಗಿಸು' ಎಂದು ಈಶಾವಾಸ್ಯ ಉಪನಿಷತ್ ಹೇಳುತ್ತದೆ. ಭೋಗವೆಂದರೆ ಕೇವಲ ಇಂದ್ರಿಯ ಸುಖವಲ್ಲ. ನಾವು ಗ್ರಾಹಕರಾಗಿ ವ್ಯಕ್ತಿಗಳಿಂದ ಸಮಾಜದಿಂದ ಮತ್ತು ಪ್ರಕೃತಿಯಿಂದ ಏನೇನು ಸ್ವೀಕರಿಸುತ್ತೇವೋ ಅವೆಲ್ಲವೂ. ಈ ರೀತಿ ಸ್ವೀಕರಿಸುವುದು ತ್ಯಾಗವನ್ನು ಅವಲಂಬಿಸಿರಬೇಕು ಎಂದು ಉಪನಿಷತ್ ಹೇಳುತ್ತದೆ. ಅಂದರೆ, ಸ್ವೀಕರಿಸುವುದರ ಜೊತೆಗೆ ನೀಡುವುದನ್ನು ನಾವು ಕಲಿಯಬೇಕು. ಆದರೆ, ಇಂದಿನ ವಾಣಿಜ್ಯ ಸಂಸ್ಕೃತಿಯ ಪ್ರಭಾವದಿಂದ ಗ್ರಾಹಕ ಮನೋಭಾವ ತೀವ್ರ ಗೊಳ್ಳುತ್ತಿದ್ದು, ತ್ಯಾಗದ ಭಾವನೆ ಹಿಂದೆ ಸರಿಯುತ್ತಿದೆ.

ಮಾನವ ಕೆಲಸದ ಯಂತ್ರವಾಗಿದ್ದಾನೆ. ಆತ ಜೀವಂತ ವ್ಯಕ್ತಿಯಾಗಿರದೇ ಜೀವಂತ ವಸ್ತುವಾಗಿರುವನು. ಅವನ ಅಂಗಾಂಗಗಳು ಮಾರಾಟದ ವಸ್ತುಗಳಾಗಿರುವುವು. ಮಾಲೀಕ,ಮುಖ್ಯಸ್ಥ ತನ್ನ ಕೆಳಗಿನವರನ್ನು ಕೆಲಸದವರೆಂದು ಕಾಣುತ್ತಾನೆಯೇ ಹೊರತು, ಮಾನವರೆಂದು ಕಾಣುವುದಿಲ್ಲ. ಅವನಿಗೆ ಕೆಲಸವೇ ಮುಖ್ಯ. ಕೆಲಸಗಾರರ ವೈಯಕ್ತಿಕ ಸುಖ, ದುಃಖಗಳಾಗಲಿ, ಜೀವನದ ಸಮಸ್ಯೆಗಳಾಗಲಿ ಅವನ ಗಮನಕ್ಕೆ ಬರುವುದಿಲ್ಲ. ಹಾಗೆಯೇ ಕೈ ಕೆಳಗಿನವರು ಕೂಡ ಮುಖ್ಯಸ್ಥನನ್ನು ವ್ಯಕ್ತಿ ಎಂದು ಪರಿಗಣಿಸುವುದಿಲ್ಲ. ವೈಯಕ್ತಿಕ ಉಪಯುಕ್ತತೆ ಪ್ರಧಾನವಾಗಿ ಮಾನವೀಯತೆ ಕಡೆ ಗಣಿಸಲಾಗುತ್ತಿದೆ.

ವ್ಯಕ್ತಿಯ ಬೆಲೆ ವ್ಯಾವಹಾರಿಕ ಉಪಯುಕ್ತತೆಯನ್ನು ಅವಲಂಬಿಸುತ್ತದೆಯೇ ಹೊರತು, ಅವನ ನಿಜವಾದ ವ್ಯಕ್ತಿತ್ವವನ್ನಲ್ಲ. ನಾವು ಹಳೆಯ ಮಂದಿರಗಳನ್ನೂ, ಹಳೆಯ ಪೀಠೋಪಕರಣಗಳನ್ನೂ, ಹಳೆಯ ಬೆಳ್ಳಿಯನ್ನೂ, ಹಳೆಯ ನಿಘಂಟುಗಳನ್ನೂ ಮತ್ತು ಹಳೆಯ ಪುಸ್ತಕಗಳನ್ನೂ ಪ್ರೀತಿಸುತ್ತೇವೆ. ಹಾಗೆಯೇ ಪೂರ್ಣ ಜೀವನಾನುಭವಗಳನ್ನು ಹೊಂದಿದ ವಯೋವೃದ್ಧರನ್ನೇಕೆ ಪ್ರೀತಿಸಬಾರದು?

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ವ್ಯಕ್ತಿಯ ಉನ್ನತಿಯಲ್ಲಿ ಜಗತ್ತಿನ ಹಿತ

**ಯು**ವಕರು ಸಮಾಜದಲ್ಲಿ ತಮ್ಮ ಸ್ಥಾನವನ್ನು ಕಂಡುಕೊಳ್ಳಬೇಕು, ಸಮಾಜದೊಡನೆ ಒಂದು ಅರ್ಥಪೂರ್ಣ ಸಂಬಂಧವನ್ನು ಹೊಂದಿರಬೇಕು. ಇಂತಹ ಸಂಬಂಧ ಸಾಧ್ಯವಾಗುವುದು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದಾಗ. ಇಲ್ಲದಿದ್ದರೆ ಯುವಕರು ಕೇವಲ ಇಂದ್ರಿಯ ಸುಖಾನ್ವೇಷಣೆಯಲ್ಲಿ ತಮ್ಮನ್ನೂ ತಾವು ಕಳೆದುಕೊಂಡು ಸಮಾಜಕ್ಕೂ ಕಂಟಕರಾಗುತ್ತಾರೆ.

ಈ ದೃಷ್ಟಿಯಿಂದಲೇ ಸ್ವಾಮಿ ವಿವೇಕಾನಂದರು ಸೇವೆಯ ಆದರ್ಶವನ್ನು ಎತ್ತಿ ಹಿಡಿದರು. ಯುವಕರು ಇತರರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ತಮ್ಮ ಜೀವನಕ್ಕೆ ಒಂದು ಅರ್ಥವನ್ನು ಕಾಣುತ್ತಾರೆ. ಈ ಮೂಲಕ ಯುವಕರ ಎಷ್ಟೋ ಸಮಸ್ಯೆಗಳೂ ಪರಿಹಾರವಾಗುತ್ತವೆ.

ಸಮಾಜಸೇವೆ ಎಂದರೆ ಆಸ್ಪತ್ರೆಗಳು, ವಿದ್ಯಾಸಂಸ್ಥೆಗಳು ಮುಂತಾದವನ್ನು ಪ್ರಾರಂಭಿಸಿ ನಡೆಸುವುದು ಮಾತ್ರ ಎಂದಲ್ಲ. ಅದು ಎಲ್ಲರಿಗೂ ಸಾಧ್ಯವಾಗದೇ ಇರಬಹುದು. ನಮ್ಮ ಸುತ್ತಮುತ್ತಲ ಸ್ನೇಹಿತರು, ಬಂಧು- ಬಾಂಧವರು, ನೆರೆಹೊರೆಯವರಿಗೆ ಸೇವೆ ಸಲ್ಲಿಸಬಹುದಾದ ಎಷ್ಟೋ ಅವಕಾಶಗಳಿರುತ್ತವೆ.

ಸಾಂತ್ವನದ ನುಡಿಗಳಿಂದ, ಪ್ರಾಮಾಣಿಕವಾಗಿ ನಮ್ಮ ಕರ್ತವ್ಯ ಪಾಲನೆಯಿಂದ, ಶುದ್ಧ ನೈತಿಕ ಜೀವನ ನಡೆಸುವುದರಿಂದ, ನಿಷ್ಠೆಯಿಂದ ಮಾಡಿದ ಆಧ್ಯಾತ್ಮಿಕ ಸಾಧನೆಯ ಮೂಲಕವೇ ಇತರರಿಗೆ ಮತ್ತು ಸಮಾಜಕ್ಕೆ ನಾವು ಅಪಾರ ಸೇವೆ ಸಲ್ಲಿಸುವುದು ಸಾಧ್ಯವಾಗುತ್ತದೆ.

ಹೀಗೆ ತಮ್ಮನ್ನು ಕಡೆಗಣಿಸದೆ ಸಮಾಜದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಆದರ್ಶ ಜೀವನವನ್ನು ನಡೆಸಲು ಯುವಕರು ಸ್ವಾಮಿ ವಿವೇಕಾನಂದರಿಂದ ಬಹಳಷ್ಟು ಕಲಿಯುವುದಿದೆ. 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' (ವ್ಯಕ್ತಿಯ ಉನ್ನತಿ ಮತ್ತು ಜಗತ್ತಿನ ಹಿತ) ಎಂಬ ವಿವೇಕ ವಾಣಿ ಆಧುನಿಕ ಮಹಾಮಂತ್ರವೂ, ಯುವಕರಿಗೆ ತಾರಕ ಮಂತ್ರವೂ ಆಗಬಲ್ಲದು.



# ವಚನಾಮೃತ

**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಚಿತ್ತಶುದ್ಧಿಗೆ ದಾರಿ ನಿಷ್ಕಾಮ ಕರ್ಮ

ಕರ್ಮಕ್ಕೆ ಅನೇಕ ಫಲಗಳಿರುತ್ತವೆ. ವ್ಯಾಪಾರದ ಕೆಲಸವನ್ನೇ ಉದಾಹರಿಸುವುದಾದರೆ ಅನೇಕ ಗ್ರಾಹಕರು ಅದರಿಂದ ಪ್ರಯೋಜನ ಪಡೆಯುತ್ತಾರೆ-ಇದೊಂದು ಫಲ. ವ್ಯಾಪಾರಿ ಹಣಗಳಿಸುತ್ತಾನೆ-ಇದೂ ಫಲವೇ. ಸರಿಯಾದ ರೀತಿಯಲ್ಲಿ ವ್ಯಾಪಾರ ಮಾಡುವುದರಿಂದ ಒಳ್ಳೆಯ ವ್ಯಾಪಾರಿಯೆಂಬ ಕೀರ್ತಿ;ಮಾಡದಿದ್ದರೆ ಅಪಕೀರ್ತಿ-ಮತ್ತೊಂದು ಫಲ.

ವ್ಯಾಪಾರಿ ಯಾವ ಭಾವದಿಂದ ವ್ಯಾಪಾರ ಮಾಡುತ್ತಾನೆ ಎಂಬುದನ್ನು ಆಧರಿಸಿ ಅವನ ಮನಸ್ಸಿನಲ್ಲಿ ಸತ್ ಅಥವಾ ದುಷ್ಟ ಸಂಸ್ಕಾರಗಳು ಉಂಟಾಗುತ್ತವೆ. ಹೀಗೆ ಯಾವುದೇ ಕರ್ಮವನ್ನು ವಿಶ್ಲೇಷಿಸುತ್ತ ಹೋದರೆ ಅದಕ್ಕೆ ಅನೇಕ ಫಲಗಳಿರುವುದು ಕಂಡುಬರುತ್ತದೆ. ಈ ಯಾವುದೇ ಫಲಗಳಿಗೂ ಗಮನ ಕೊಡದೆ ಕರ್ತವ್ಯ ಬುದ್ಧಿಯಿಂದ ಸ್ವಧರ್ಮ ನಿಷ್ಠೆಯಿಂದ ಕರ್ಮವನ್ನು ಮಾಡುವುದು ನಿಷ್ಕಾಮ ಕರ್ಮ.

ಭಕ್ತನಾದವನು ಈಶ್ವರಾರ್ಪಣ ಭಾವದಿಂದ ಕರ್ಮವನ್ನು ಮಾಡುತ್ತ ಫಲಾಸಕ್ತಿಯಿಂದ ಮುಕ್ತನಾಗುತ್ತಾನೆ. ರಮಣ ಮಹರ್ಷಿಗಳು ಹೇಳುವಂತೆ, 'ಈಶ್ವರಾರ್ಪಿತ ನೇಚ್ಛಯಾ ಕೃತಂ', 'ಚಿತ್ತ-ಶೋಧಕಂ ಮುಕ್ತಿ ಸಾಧಕಂ' 'ಭಗವದರ್ಪಣ ಬುದ್ಧಿಯಿಂದ ಸ್ವಇಚ್ಛೆ ತೊರೆದು ಮಾಡಿದ ಕರ್ಮವು ಚಿತ್ತಶುದ್ಧಿ ಉಂಟುಮಾಡುತ್ತದೆ ಮತ್ತು ಮುಕ್ತಿಗೆ ಸಾಧನವಾಗುತ್ತದೆ'.

ಈ ಅರಿವಿನಿಂದ ಸಾಕ್ಷಿ ಭಾವದಲ್ಲಿ ಇದ್ದುಕೊಂಡು ಕರ್ಮವನ್ನು ಮಾಡಿದರೆ ಅದು ನಿಷ್ಕಾಮ ಕರ್ಮ ಆಗ ಆಸಕ್ತಿಯೂ ಇರುತ್ತದೆ, ಕರ್ಮವೂ ಇರುತ್ತದೆ. ಆದರೆ ಬಂಧನವಿರುವುದಿಲ್ಲ. ಬಂಧನವಿದ್ದರೂ ಅದೂ ಪ್ರಕೃತಿಗೆ ಸೇರಿದ್ದು ತಾನೇ! ಹೀಗೆ ಪ್ರಕೃತಿಯಿಂದ ನಿರ್ಲಿಪ್ತವಾಗಿರುವುದೇ ಜೀವನ್ಮುಕ್ತಾವಸ್ಥೆ. ಈ ಸ್ಥಿತಿಯನ್ನು ಶ್ರೀಕೃಷ್ಣ ಹೀಗೆ ವರ್ಣಿಸುತ್ತಾನೆ. 'ಎಷ್ಟೇ ನದಿಗಳ ನೀರುಗಳು ಪ್ರವೇಶಿಸಿದರೂ ಸಮುದ್ರವು ಮಾತ್ರ ಪೂರ್ಣವಾಗಿಯೂ ಅಚಲವಾಗಿಯೂ ಇರುವುದೊ, ಹಾಗೆಯೇ ಸ್ಥಿತಪ್ರಜ್ಞನನ್ನು ಎಷ್ಟೇ ಆಸೆಗಳು ಪ್ರವೇಶಿಸಿದರೂ ಅವನು ಮಾತ್ರ ಪೂರ್ಣನೂ ಅಚಲನೂ ಆಗಿರುತ್ತಾನೆ'. ಅಂದರೆ ಎಲ್ಲ ಕ್ರಿಯೆಗಳಿಗೂ ಕೇವಲ ಸಾಕ್ಷಿ ಭಾವದಲ್ಲಿರುತ್ತಾನೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ‘ಸುಖ’ ಮನುಷ್ಯನ ಆಂತರಿಕ ಸ್ಥಿತಿ...

ಸಾಮಾನ್ಯವಾಗಿ ಜನರು ಭಾವಿಸುತ್ತಾರೆ, ತಮಗೆ ಯಾವ ತೊಂದರೆ ತಾಪತ್ರಯಗಳೂ ಇಲ್ಲದಿದ್ದರೆ ಸುಖವಾಗಿರುತ್ತೇವೆ ಎಂದು. ಇದು ಸಮುದ್ರದಲ್ಲಿ ಅಲೆಗಳು ಶಾಂತವಾದ ಮೇಲೆ ಸಮುದ್ರ ಸ್ನಾನ ಮಾಡುತ್ತೇನೆ ಎಂದು ಭಾವಿಸಿದಂತೆ!

ತಾಪತ್ರಯಗಳನ್ನು ನಿವಾರಿಸುವುದರಲ್ಲಿ ಇಡೀ ಜೀವನ ಕಳೆದು ಹೋಗುತ್ತದೆ. ಅನುಭವಿಸುವುದಕ್ಕೆ ಸಮಯವೇ ಇರುವುದಿಲ್ಲ. ಈ ಮನೋಭಾವಕ್ಕೆ ಕಾರಣ ಕಷ್ಟಗಳ ಅಭಾವವೇ ಸುಖ ಎಂಬ ತಪ್ಪು ಕಲ್ಪನೆ. ಕಷ್ಟಗಳು ಏನೂ ಇಲ್ಲದಿದ್ದರೂ ನಾವು ಸುಖವಾಗಿರುವುದಿಲ್ಲ. ಒಬ್ಬ ಬೌದ್ಧ ಸನ್ಯಾಸಿ ಹೇಳುತ್ತಾರೆ, ನಾವು ಹಲ್ಲು ನೋವಿನಿಂದ ನರಳುತ್ತಿರುವಾಗ ಹಲ್ಲು ನೋವು ಇಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತೆ ಎಂದು ಭಾವಿಸುತ್ತೇವೆ. ಆದರೆ, ಹಲ್ಲು ನೋವು ಇಲ್ಲದಿರುವಾಗಲೂ ನಾವೇನೂ ಸುಖವಾಗಿರುವುದಿಲ್ಲ. ಆದ್ದರಿಂದ ಸುಖ ನಮ್ಮ ಮನೋಭಾವವನ್ನು ಅವಲಂಬಿಸಿರುತ್ತದೆ. ನಾವು ಸುಖವಾಗಿರಬೇಕೆಂದು ಬಯಸಿದರೆ ಕಷ್ಟಗಳ ನಡುವೆಯೂ ಸುಖವಾಗಿರಬಹುದು. ಅವು ಕೇವಲ ಬಾಹ್ಯ ಘಟನೆಗಳು ಅಷ್ಟೇ. ಆದರೆ, ಸುಖ ಆಂತರಿಕ ಸ್ಥಿತಿ. ನಾವು ಆಂತರಿಕ ಸ್ಥಿತಿಯಲ್ಲಿ ಸ್ಥಿರವಾಗಿ ನಿಂತಾಗ ಬಾಹ್ಯ ಘಟನೆಗಳಾವವೂ ನಮ್ಮನ್ನು ವಿಚಲಿತಗೊಳಿಸಲಾರವು. ಇದೇ ನಿಜವಾದ ಸುಖದ ಸ್ಥಿತಿ.

ಸೇತುವೆ ಕೆಳಗೆ ಹರಿಯುವ ನೀರಿನಂತೆ ಆ ಕಷ್ಟಗಳು ಕೂಡ ಬಂದು ಮಾಯವಾಗಿ ಬಿಡುತ್ತವೆ. ಹಾಗಾಗಿ ನಾವು ಸೇತುವೆಯಂತೆ ದೃಢವಾಗಿರಬೇಕು. ಎಂತಹ ಕಷ್ಟ ವಿಪತ್ತುಗಳ ಮಹಾಪೂರವೇ ಬಂದರೂ ಕೊಚ್ಚಿಕೊಂಡು ಹೋಗದಂತಿರಬೇಕು. ಇದು ನಮ್ಮ ಆಂತರಿಕ ಸ್ಥಿರತೆಯನ್ನು ಅವಲಂಬಿಸಿರುತ್ತದೆ. ಸೇತುವೆಯು ಭೂಮಿಯ ಆಳದಲ್ಲಿ ಗಟ್ಟಿಯಾಗಿ ನಿಂತಿರುವಂತೆ ನಾವು ವ್ಯಕ್ತಿತ್ವದ ಆಳದಲ್ಲಿ ನಮ್ಮ ಸ್ಥಿರತೆಯನ್ನು ಪಡೆಯಬೇಕು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ವ್ಯಕ್ತಿಯ ಉನ್ನತಿಯಲ್ಲಿ ಜಗತ್ತಿನ ಹಿತ

**ಯು**ವಕರು ಸಮಾಜದಲ್ಲಿ ತಮ್ಮ ಸ್ಥಾನವನ್ನು ಕಂಡುಕೊಳ್ಳಬೇಕು, ಸಮಾಜದೊಡನೆ ಒಂದು ಅರ್ಥಪೂರ್ಣ ಸಂಬಂಧವನ್ನು ಹೊಂದಿರಬೇಕು. ಇಂತಹ ಸಂಬಂಧ ಸಾಧ್ಯವಾಗುವುದು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದಾಗ. ಇಲ್ಲದಿದ್ದರೆ ಯುವಕರು ಕೇವಲ ಇಂದ್ರಿಯ ಸುಖಾನ್ವೇಷಣೆಯಲ್ಲಿ ತಮ್ಮನ್ನೂ ತಾವು ಕಳೆದುಕೊಂಡು ಸಮಾಜಕ್ಕೂ ಕಂಟಕರಾಗುತ್ತಾರೆ.

ಈ ದೃಷ್ಟಿಯಿಂದಲೇ ಸ್ವಾಮಿ ವಿವೇಕಾನಂದರು ಸೇವೆಯ ಆದರ್ಶವನ್ನು ಎತ್ತಿ ಹಿಡಿದರು. ಯುವಕರು ಇತರರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ತಮ್ಮ ಜೀವನಕ್ಕೆ ಒಂದು ಅರ್ಥವನ್ನು ಕಾಣುತ್ತಾರೆ. ಈ ಮೂಲಕ ಯುವಕರ ಎಷ್ಟೋ ಸಮಸ್ಯೆಗಳೂ ಪರಿಹಾರವಾಗುತ್ತವೆ.

ಸಮಾಜಸೇವೆ ಎಂದರೆ ಆಸ್ಪತ್ರೆಗಳು, ವಿದ್ಯಾಸಂಸ್ಥೆಗಳು ಮುಂತಾದವನ್ನು ಪ್ರಾರಂಭಿಸಿ ನಡೆಸುವುದು ಮಾತ್ರ ಎಂದಲ್ಲ. ಅದು ಎಲ್ಲರಿಗೂ ಸಾಧ್ಯವಾಗದೇ ಇರಬಹುದು. ನಮ್ಮ ಸುತ್ತಮುತ್ತಲ ಸ್ನೇಹಿತರು, ಬಂಧು- ಬಾಂಧವರು, ನೆರೆಹೊರೆಯವರಿಗೆ ಸೇವೆ ಸಲ್ಲಿಸಬಹುದಾದ ಎಷ್ಟೋ ಅವಕಾಶಗಳಿರುತ್ತವೆ.

ಸಾಂತ್ವನದ ನುಡಿಗಳಿಂದ, ಪ್ರಾಮಾಣಿಕವಾಗಿ ನಮ್ಮ ಕರ್ತವ್ಯ ಪಾಲನೆಯಿಂದ, ಶುದ್ಧ ನೈತಿಕ ಜೀವನ ನಡೆಸುವುದರಿಂದ, ನಿಷ್ಠೆಯಿಂದ ಮಾಡಿದ ಆಧ್ಯಾತ್ಮಿಕ ಸಾಧನೆಯ ಮೂಲಕವೇ ಇತರರಿಗೆ ಮತ್ತು ಸಮಾಜಕ್ಕೆ ನಾವು ಅಪಾರ ಸೇವೆ ಸಲ್ಲಿಸುವುದು ಸಾಧ್ಯವಾಗುತ್ತದೆ.

ಹೀಗೆ ತಮ್ಮನ್ನು ಕಡೆಗಣಿಸದೆ ಸಮಾಜದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಆದರ್ಶ ಜೀವನವನ್ನು ನಡೆಸಲು ಯುವಕರು ಸ್ವಾಮಿ ವಿವೇಕಾನಂದರಿಂದ ಬಹಳಷ್ಟು ಕಲಿಯುವುದಿದೆ. 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' (ವ್ಯಕ್ತಿಯ ಉನ್ನತಿ ಮತ್ತು ಜಗತ್ತಿನ ಹಿತ) ಎಂಬ ವಿವೇಕ ವಾಣಿ ಆಧುನಿಕ ಮಹಾಮಂತ್ರವೂ, ಯುವಕರಿಗೆ ತಾರಕ ಮಂತ್ರವೂ ಆಗಬಲ್ಲದು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಕೆಲಸವೇ ಪರಮ ಔಷಧ

ಜೀವನವನ್ನು ಕ್ರಿಯೆಯಿಂದ ಬೇರ್ಪಡಿಸಲಾಗುವುದಿಲ್ಲ. ಜೀವಿಸುವುದೆಂದರೆ ಕೆಲಸ ಮಾಡುವುದೆಂದರ್ಥ. ಸಮರ್ಪಣ ಕೆಲಸ ನಿಂತು ಹೋದರೆ ಅದೇ ನಮ್ಮ ಪಾಲಿಗೆ ಸಾವು. ದೇಹದ ಮತ್ತು ಮನಸ್ಸಿನ ಆರೋಗ್ಯಕ್ಕೆ ಕ್ರಿಯೆ ಅವಶ್ಯಕ. ನಮ್ಮ ಮೆದುಳನ್ನು ಹೆಚ್ಚು ಹೆಚ್ಚು ಕ್ರಿಯೆಯಲ್ಲಿ ತೊಡಗಿಸಿದಷ್ಟೂ ಅದರ ಸಾಮರ್ಥ್ಯ ಅಧಿಕವಾಗುತ್ತಾ ಹೋಗುತ್ತದೆ. ನಮ್ಮ ಆಂತರಿಕ ಪ್ರತಿಭೆ ಸಾಮರ್ಥ್ಯಗಳು ವ್ಯಕ್ತವಾಗುವುದೇ ಕೆಲಸದ ಮೂಲಕ.

ಸಂಸ್ಕೃತ ಭಾಷೆಯಲ್ಲಿ ಒಂದು ಹೇಳಿಕೆ ಇದೆ. 'ಯಃ ಕ್ರಿಯಾ ವಾನ್ ಸ ಪಂಡಿತ', 'ಯಾರು ಕ್ರಿಯಾಶೀಲರನೋ ಅವನೇ ಜ್ಞಾನಿ' ಎಂದು.

ನಮ್ಮಲ್ಲಿ ಎರಡು ಸ್ವಭಾವಗಳಿವೆ. ಪ್ರವೃತ್ತಿ ಮತ್ತು ನಿವೃತ್ತಿ. ಮೊದಲನೆಯದು ಹೊರಗೆ ಹೋಗಿ ಕೆಲಸದಲ್ಲಿ ನಿರತವಾಗುವ ಸ್ವಭಾವ. ಎರಡನೆಯದು ತನ್ನ ಪಾಡಿಗೆ ತಾನಿರುವ ಸ್ವಭಾವ. ಮೊದಲನೆಯದು ಪ್ರಕೃತಿಗೆ ಸಂಬಂಧಿಸಿದ್ದು. ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಮನಸ್ಸಿನ ಅಲೆದಾಟ ಎಷ್ಟೋ ಕಡಿಮೆಯಾಗುತ್ತದೆ.

ಪ್ರಸಿದ್ಧ ಜೀವಶಾಸ್ತ್ರ ವಿಜ್ಞಾನಿ ಅಲೆಕ್ಸಿಸ್ ಕ್ಯಾರೆಲ್ ಹೇಳುತ್ತಾನೆ. ಚಿಂತೆ, ದುಃಖ, ದುಗುಡ ಮುಂತಾದವುಗಳನ್ನು ಮರೆಯಲು ಜನರು ಕುಡಿತ ಮತ್ತು ಡ್ರಗ್ ಸೇವನೆಗಳಲ್ಲಿ ತೊಡಗುತ್ತಾರೆ.ಇದರಿಂದ ಅವರ ಸಮಸ್ಯೆಗಳೇನೂ ಪರಿಹಾರವಾಗುವುದಿಲ್ಲ. ಒಂದು ಸಮಸ್ಯೆ ಜೊತೆಗೆ ಮತ್ತೊಂದು ಸೇರಿಕೊಳ್ಳುತ್ತದೆ ಅಷ್ಟೇ. ಇದರ ಬದಲು ಅವರು ಆರೋಗ್ಯಕರ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ಸಮಸ್ಯೆಗಳು ಕರಗಿ ಹೋಗುತ್ತವೆ. ಎಷ್ಟೋ ಮಾನಸಿಕ ಸಮಸ್ಯೆಗಳಿಗೆ ಕೆಲಸವೇ ಪರಮ ಔಷಧವಾಗಿದೆ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**

ಅಧ್ಯಕ್ಷೆ, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಮನಃಶಾಂತಿ ಬೇಕಿದ್ದರೆ ಪರದೋಷ ಕಾಣಬೇಡಿ

**ಪರರ** ದೋಷವನ್ನು ನೋಡದಿರುವುದಕ್ಕೂ ಮನಃಶಾಂತಿಗೂ ಇರುವ ಸಂಬಂಧವನ್ನು ತಿಳಿದುಕೊಳ್ಳಬೇಕಾದರೆ, ನಾವು ಮೊದಲು ನಾವು ಈ ದೋಷ ಎಂದರೇನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಈ ಆರು ಗುಣಗಳು ನಮ್ಮ ಮನಸ್ಸಿನಲ್ಲಿ ಅವಿತುಕೊಂಡು ದರೋಡೆ ಮಾಡುತ್ತಲೇ ಇರುತ್ತವೆ.

ನಿತ್ಯ ಜೀವನದಲ್ಲಿ ನಾವು ದೋಷಪೂರ್ಣವಾಗಿ ನಡೆದುಕೊಳ್ಳಲು ಕಾರಣ ಈ ಗುಣಗಳೇ. ನಮ್ಮ ನಮ್ಮ ಮನಸ್ಸಿನ ದೋಷಗಳಿಂದಾಗಿ ಅದಾಗಲೇ ನಮ್ಮ ಮನಸ್ಸಿನ ಶಾಂತಿ ಕದಡಿ ಹೋಗಿರುವಾಗ ಇನ್ನು ನಮ್ಮ ಸುತ್ತಮುತ್ತ ಇರುವ ಇತರ ಜನರ ದೋಷಗಳನ್ನೆಲ್ಲ ನೋಡುತ್ತ ಹೋದರೆ ಮನಸ್ಸು ಅಶಾಂತಿಯ ಸಂತೆಕಟ್ಟೆಯಾಗಲಿದೆ.

ಶಾರದಾ ದೇವಿ ಅವರು ಹೇಳುತ್ತಾರೆ, 'ಸದಾ ಇತರರ ದೋಷಗಳನ್ನು ನೋಡುತ್ತಾ ನೋಡುತ್ತಾ ಮನಸ್ಸು ಮಲಿನವಾಗಿ ಬಿಡುತ್ತದೆ' ಎಂದು. ಒಳ್ಳೆಯ ಮತ್ತು ಕೆಟ್ಟ ಕೆಲಸಗಳಲ್ಲಿ ಯಾರ್‍ಯಾರು ಪಾಲ್ಗೊಳ್ಳುತ್ತಾರೋ ಅವರಿಗೆ ಅವುಗಳ ಫಲವಾದ ಪಾಪ ಪುಣ್ಯಗಳಲ್ಲಿ ಪಾಲು ಲಭಿಸುತ್ತದೆ. ಒಳ್ಳೆಯ ಮಾತು ಸತ್ಸಂಸ್ಕಾರವನ್ನುಂಟು ಮಾಡಿದರೆ, ಕೆಟ್ಟ ಮಾತು ದುಷ್ಟ ಸಂಸ್ಕಾರವನ್ನುಂಟು ಮಾಡುತ್ತದೆ. ಸತ್ಸಂಸ್ಕಾರದಿಂದ ಮನಃಶಾಂತಿ ಲಭಿಸಿದರೆ, ದುಷ್ಟ ಸಂಸ್ಕಾರದಿಂದ ಅಶಾಂತಿ ಉಂಟಾಗುತ್ತದೆ.

ನಮ್ಮ ದೃಷ್ಟಿ ಯಾವಾಗಲೂ ಹೊರಮುಖವಾಗಿರುವುದರಿಂದ ಪರದೋಷಗಳೇ ಕಾಣುತ್ತವೆ. ನಮ್ಮ ದೃಷ್ಟಿಯನ್ನು ಒಳಮುಖವಾಗಿ ಹರಿಸಿದಾಗ ನಮ್ಮ ನಮ್ಮ ದೋಷಗಳೇ ನಮಗೆ ಪೆಡಂಭೂತದಂತೆ ಕಾಣಿಸುತ್ತವೆ. ಆಗ ಔಚಿತ್ಯ-ಅನೌಚಿತ್ಯ, ಗುಣ-ದೋಷ ಇವುಗಳನ್ನು ನಾವೇ ಕಂಡುಕೊಳ್ಳಬಹುದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಜೀವನಕ್ಕಿರಲಿ ಸ್ಥೈರಣೆ

ಬೀಜ ಚಿಕ್ಕದಾದರೂ ಬೃಹತ್ ಮರವಾಗಿ ಬೆಳೆಯುವ ಸಾಮರ್ಥ್ಯ ಅದರಲ್ಲಿ ಅಡಗಿದೆ. ನಾಮ ಅಥವಾ ಮಂತ್ರವನ್ನು ಲಯಬದ್ಧವಾಗಿ ಉಚ್ಚರಿಸಿದರೆ ಅದು ಮನಸ್ಸಿನಲ್ಲಿ ಸಕಾರಾತ್ಮಕ ಸ್ಪಂದನವನ್ನು ಸೃಷ್ಟಿಸುತ್ತದೆ. ಕ್ರಮೇಣ ಇಡೀ ಮನಸ್ಸ ಭಗವದ್ಭಾವದಿಂದ ತುಂಬುತ್ತದೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ನಾಮಜಪಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಿದ್ದರು.

ನಾವು ತಾಳ್ಮೆಯಿಂದ ದೀರ್ಘಕಾಲ ನಾಮೋಚ್ಚಾರಣೆ ಮಾಡುತ್ತಾ ಹೋಗಬೇಕು. ಬೇಗನೇ ಪರಿಣಾಮವನ್ನು ನಿರೀಕ್ಷಿಸಬಾರದು. ಪ್ರತಿದಿನವೂ ನಡೆಯುವ ಜಪದಿಂದಲೇ ತಪದ ಮೆಟ್ಟಿಲು ಹತ್ತುತ್ತ ಹೋಗುತ್ತೇವೆ. ಒಂದೆರಡು ದಿನಗಳಲ್ಲಿಯೇ ಪರಿಣಾಮ ನಿರೀಕ್ಷಿಸಿದರೆ ಜಪವೆಂಬುದು ಚಮತ್ಕಾರವಲ್ಲ. ಪರಿಣಾಮವಾಗಲಿಲ್ಲವೆಂದು ನಿರಾಸೆ ಹುಟ್ಟಿದರೆ, ಸಾಧನೆಯ ಹಾದಿ ಮೊಟಕಾಗುತ್ತದೆ.

ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ತಾಳ್ಮೆ ಅತ್ಯಂತ ಮುಖ್ಯ. ತಾಳ್ಮೆ ಇಲ್ಲದವರು ಒಂದಾದ ಮೇಲೆ ಒಂದರಂತೆ ಸಾಧನ ವಿಧಾನಗಳನ್ನು ಬದಲಾಯಿಸುತ್ತಾ ಹೋಗುತ್ತಾರೆ. ಕೊನೆಗೆ ಯಾವುದರಿಂದಲೂ ಪ್ರಯೋಜನವಾಗದೆ ನಿರಾಸೆಗೆ ಒಳಗಾಗುತ್ತಾರೆ.

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

# ದೇವರೊಡನೆ ಮಾತು ನೈಜ ಪ್ರಾರ್ಥನೆ

ಪ್ರಾರ್ಥನೆ ಎಂದರೆ ಒಂದರ್ಥದಲ್ಲಿ ದೇವರೊಡನೆ ಮಾತನಾಡುವುದು. ಮಾತು ಇತರರೊಡನೆ ಸಂಬಂಧವನ್ನು ಬೆಳೆಸಿಕೊಳ್ಳುವ ವಿಧಾನ. ದೇವರ ಬಗ್ಗೆ ಮಾತನಾಡುವುದಕ್ಕಿಂತ ದೇವರೊಡನೆ ಮಾತನಾಡುವುದು ಒಳ್ಳೆಯದು ಎಂಬುದು ಸಂತರ ಅಭಿಪ್ರಾಯ.

ಹೀಗೆ ದೇವರೊಡನೆ ಮಾತನಾಡುತ್ತ ಅವನೊಡನೆ ನಿಕಟ ಸಂಬಂಧ ಉಂಟಾಗುವುದು. ಅವನು ನಮ್ಮವನೆಂಬ ಭಾವದಿಂದ ನಮ್ಮ ಅಂತರಂಗವನ್ನು ತೆರೆದು ಅವನ ಮುಂದಿಡಬಹುದು. ಹೃದಯದ ವೇದನೆಯನ್ನು ತೋಡಿಕೊಳ್ಳಬಹುದು, ನಮ್ಮೆಲ್ಲ ದೋಷಗಳನ್ನೂ ತೆರೆದಿರಿಸಬಹುದು. ಈ ರೀತಿ ಮುಕ್ತವಾಗಿ ನಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸುತ್ತ ಸಾಗಿದಂತೆ ನಮ್ಮ ದೋಷಗಳು ನಮಗೇ ಸ್ಪಷ್ಟವಾಗಿ ಕಾಣತೊಡಗುತ್ತವೆ. ಈ ರೀತಿಯ ಕಳಕಳಿಯ ಪ್ರಾರ್ಥನೆ ನಮ್ಮ ಅಂತರಂಗವನ್ನು ಕಲಕಿ ಅಲ್ಲಿರುವ ಕೊಳಕನ್ನೆಲ್ಲ ಹೊರಹಾಕುತ್ತದೆ.

ಕಾಣದ ದೇವರೊಡನೆ ಮಾತನಾಡುವುದು ಹೇಗೆ? ಎಂಬ ಪ್ರಶ್ನೆ ಏಳಬಹುದು. ಆದರೆ, ನಾವು ಯಾವಾಗಲೂ ಮನಸ್ಸಿನಲ್ಲಿ ಇತರರೊಡನೆ ಮಾತನಾಡುವ ಮಾದರಿಯಲ್ಲಿಯೇ ನಮ್ಮ ಇಷ್ಟ ದೇವತೆಯೊಡನೆ ಮಾತನಾಡಬಹುದು. ಆಗ ನಮ್ಮ ಹೃದಯಾಂತರಾಳದಲ್ಲಿ ಉಂಟಾಗುವ ದಿವ್ಯ ಸ್ಪಂದನ, ಸ್ಫುರಿಸುವ ದಿವ್ಯ ಭಾವನೆಗಳೇ ಅತ್ಯುತ್ತಮ ಪ್ರಾರ್ಥನೆಯಾಗುತ್ತವೆ. ಅವೇ ಭಗವಂತನು ನಮ್ಮ ಪ್ರಾರ್ಥನೆಗೆ ನೀಡುವ ಉತ್ತರವೂ ಕೂಡ. 'ಭಗವಂತನೆಡೆಗೆ ಕಳಿಸಿದ ಕೃತಜ್ಞತಾಪೂರ್ಣವಾದ ಒಂದು ಆಲೋಚನೆಯೇ ಅತ್ಯಂತ ಪರಿಪೂರ್ಣವಾದ ಪ್ರಾರ್ಥನೆ' ಎಂಬುದು ಅನುಭವಿಗಳ ಮಾತು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷೆ, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಹಣದಿಂದ ಹಾಸಿಗೆ ಸಿಗುತ್ತದೆ, ನಿದ್ರೆ ಸಿಗುವುದಿಲ್ಲ!

ಹಣದಿಂದ ಹಾಸಿಗೆ ಸಿಗುತ್ತದೆ, ನಿದ್ರೆ ಸಿಗುವುದಿಲ್ಲ. ಹಣದಿಂದ ಆಹಾರ ಪದಾರ್ಥಗಳು ಸಿಗುತ್ತವೆ, ಬಾಯಿ ರುಚಿ ಸಿಕ್ಕುವುದಿಲ್ಲ. ಹಣದಿಂದ ಔಷಧ ದೊರೆಯುತ್ತದೆ, ಆರೋಗ್ಯ ಸಿಗದು. ಹಣದಿಂದ ಗ್ರಂಥಗಳನ್ನು ಖರೀದಿಸಬಹುದು. ಜ್ಞಾನ ದೊರೆಯದು. ಹಣದಿಂದ ಕಟ್ಟಡ ಕಟ್ಟಬಹುದು, ಮನೆಯಾಗದು. ಐಶ್ವರ್ಯ ಎಂಬುದು ಉಪ್ಪು ನೀರಿನಂತೆ ಕುಡಿದಷ್ಟೂ ಬಾಯಾರಿಕೆ ಜಾಸ್ತಿಯಾಗುತ್ತದೆ. ಆದರೂ ವ್ಯಾಮೋಹದಿಂದ ಹಣ ಕೂಡಿಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಅನೇಕರು ಗ್ರಂಥ ಸಂಗ್ರಹದಲ್ಲಿ, ಬಹುಗ್ರಂಥಗಳನ್ನು ಓದುವುದರಲ್ಲಿ ಆಸಕ್ತರಾಗಿರುತ್ತಾರೆಯೇ ಹೊರತು, ಅದರಲ್ಲಿರುವ ಭಾವನೆಗಳನ್ನು ಮೈಗೂಡಿಸಿಕೊಳ್ಳುವುದರಲ್ಲಿ ಅಲ್ಲ. ಅನೇಕರು ಸಾಂಪ್ರದಾಯಿಕ, ಧಾರ್ಮಿಕ ಆಚರಣೆಯಲ್ಲಿ ಮಗ್ನ ರಾಗಿರುತ್ತಾರೆಯೇ ಹೊರತು ಅದರ ಹಿಂದಿರುವ ಆಧ್ಯಾತ್ಮಿಕ ಆದರ್ಶವನ್ನು ಲೆಕ್ಕಿಸುವುದೇ ಇಲ್ಲ. ಇದರಿಂದ ಎಷ್ಟೇ ಧಾರ್ಮಿಕ ಕ್ರಿಯಾವಿಧಿಗಳನ್ನು ಅನುಸರಿಸಿದರೂ ದೇವಸ್ಥಾನಗಳಿಗೆ ಹೋದರೂ ಎಷ್ಟೇ ಜಪ ಮಾಡಿದರೂ ಅವರ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ.

ದಯಾಳುಗಳಾದರೆ, ಪರರ ಕಷ್ಟಕ್ಕೆ ಸ್ಪಂದಿಸಿದರೆ ನಿರಾಳವಾಗಿ ಮಲಗಬಹುದು. ಧರ್ಮ ಹೇಳುವುದೂ ಅದನ್ನೇ. ಸಾಧ್ಯವಾದಷ್ಟು ಸಹಾಯ ಮಾಡಿ ಎಂದು. ಪರೋಪಕಾರಕ್ಕಾಗಿ ಬದುಕುವುದೇ ಸದ್ಧರ್ಮವಾಗಿದೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

# ಆತ್ಮಶ್ರದ್ಧೆ ನೈತಿಕತೆಯ ತಳಹದಿ

ನಿಜವಾದ ನೈತಿಕತೆ ವ್ಯಕ್ತಿಯಲ್ಲಿರುವ ಆಂತರಿಕ ಒಳ್ಳೆಯತನವನ್ನು ಆಧರಿಸಿದೆ. ವ್ಯಕ್ತಿ ನೈತಿಕತೆಯನ್ನು ಅನುಸರಿಸಬೇಕಾದುದು ಹೊರಗಿನ ಅವಶ್ಯಕತೆಯಿಂದಲ್ಲ, ಹೊರಗಿನ ಒತ್ತಾಯದಿಂದಲ್ಲ ಅಥವಾ ಶಿಕ್ಷೆಯ ಭಯದಿಂದಲೂ ಅಲ್ಲ. ಅವನ ಸ್ವಭಾವವೇ ಒಳ್ಳೆಯದಾಗಿರುವುದರಿಂದ.

ಆರೋಗ್ಯವಂತವಾಗಿರುವುದು ದೇಹದ ಸ್ವಭಾವ, ಕಾಯಿಲೆ ಬರುವುದು ಕೆಲವು ದೋಷಗಳಿಂದ. ಹಾಗೆಯೇ, ನೈತಿಕವಾಗಿ ಜೀವಿಸುವುದು ಸ್ವಭಾವ. ಅನೈತಿಕತೆ ಅವನಿಗೆ ಅಸ್ವಭಾವಿಕ, ಕೆಲವು ವೈಯಕ್ತಿಕ ಮತ್ತು ಸಾಮಾಜಿಕ ದೋಷಗಳಿಂದ ಉಂಟಾಗುತ್ತದೆ.

ಆಂತರಿಕ ಒಳ್ಳೆಯತನದ ಅರಿವು ಮೂಡಬೇಕು, ತನ್ನ ಬಗ್ಗೆ ಉದಾತ್ತ ಭಾವನೆಯೂ ಗೌರವವೂ ಉಂಟಾಗಬೇಕು. ಆಗ ವ್ಯಕ್ತಿ ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾನೆ. ಮಕ್ಕಳಿಗೆ ಆತ್ಮಶ್ರದ್ಧೆಯ ಭಾವನೆಗಳನ್ನು ನೀಡಿದರೆ, ಅವರಲ್ಲಿ ಆತ್ಮಗೌರವನ್ನು ಕೆರಳಿಸಿದರೆ ಮತ್ತು ನೈತಿಕತೆಯ ಅವಶ್ಯಕತೆಯನ್ನು ಮನಗಾಣುವಂತೆ ಮಾಡಿದರೆ ಆಗ ಅವರು ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾರೆ.

‘ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ಅನುಷ್ಠಾನಕ್ಕೆ ತಂದಿದ್ದರೆ ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು’ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ತಂದೆ ತಾಯಿ ಮತ್ತು ಹಿರಿಯರು ಮಕ್ಕಳಿಗೆ ಸುಳ್ಳು ಹೇಳಬೇಡ, ಕದಿಯಬೇಡ ಮುಂತಾದ ನೈತಿಕ ಬೋಧನೆಯನ್ನು ಮಾಡುತ್ತಾರೆ ಮತ್ತು ಅವರು ಅನೈತಿಕವಾಗಿ ವರ್ತಿಸಿದರೆ ಬೈಯುತ್ತಾರೆ ಅಥವಾ ಹೊಡೆಯುತ್ತಾರೆ. ಏಕೆ ಹಾಗೆ ಮಾಡಬಾರದು ಎಂಬುದನ್ನು ಅವರು ತಿಳಿಸಿಕೊಡುವುದಿಲ್ಲ. ಇದರಿಂದಾಗಿ ನೈತಿಕತೆಯ ಅವಶ್ಯಕತೆಯ ಅರಿವು ಅವರಿಗೆ ಉಂಟಾಗುವುದೇ ಇಲ್ಲ. ಇನ್ನೊಂದು ವಿಷಯವೇನೆಂದರೆ ಮಕ್ಕಳು ನಮ್ಮ ನುಡಿಗಿಂತ ನಮ್ಮ ನಡೆಯನ್ನು ಅನುಸರಿಸುವುದೇ ಅಧಿಕ. ಆದ್ದರಿಂದ ಅವರಲ್ಲಿ ನೈತಿಕ ಪ್ರಜ್ಞೆ ಮೂಡುವಂತಾಗಲು ಮನೆಯಲ್ಲಿ ನೈತಿಕ ವಾತಾವರಣ ಸೃಷ್ಟಿಯಾಗಬೇಕು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ವಿದ್ಯಾರ್ಥಿಗಳಿಗೆ ಬೇಕು ಚಾರಿತ್ರ್ಯ ಶುದ್ಧಿ

ಇಂದಿನ ವಿದ್ಯಾರ್ಥಿಗಳು, ಯುವಕರು ತುಂಬಾ ಭಾವೋದ್ರೇಕಿಗಳಾಗುತ್ತಿದ್ದಾರೆ. ಅವರಿಗೆ ಸ್ವಲ್ಪವೂ ದುಃಖವನ್ನಾಗಲಿ, ಅವಮಾನವನ್ನಾಗಲೀ ಸಹಿಸುವ ಶಕ್ತಿ ಇಲ್ಲ. ಥಟ್ಟನೆ ಕೋಪಕ್ಕೆ ಒಳಗಾಗಿ ಏನೇನೋ ಮಾಡಿಬಿಡುತ್ತಾರೆ. ಕೆಲವೊಮ್ಮೆ ತೀವ್ರ ದುಗುಡಕ್ಕೆ ಒಳಗಾಗಿ ಆತ್ಮಹತ್ಯೆಯನ್ನೇ ಮಾಡಿಕೊಂಡು ಬಿಡುತ್ತಾರೆ. ಈ ಎಲ್ಲ ದುರ್ಬಲತೆಗೆ ಮುಖ್ಯ ಕಾರಣ ಚಾರಿತ್ರ್ಯಶುದ್ಧಿಯ ಕೊರತೆ.

ಇಂದಿನ ವಿದ್ಯಾರ್ಥಿಗಳಲ್ಲಿರಬೇಕಾದ ಎರಡನೇ ಮುಖ್ಯಗುಣ ಚಾರಿತ್ರ್ಯಶುದ್ಧಿ. ಚಾರಿತ್ರ್ಯಶುದ್ಧಿ ಅಂದರೆ ಸತ್ಯ, ಪ್ರಾಮಾಣಿಕತೆ, ಅಹಿಂಸೆ, ಇಂದ್ರಿಯನಿಗ್ರಹ ಇತ್ಯಾದಿ ನೈತಿಕ ಗುಣಗಳನ್ನು ಪಾಲಿಸುವುದರಿಂದ ಇಚ್ಛಾಶಕ್ತಿ ಪ್ರಬಲವಾಗುತ್ತದೆ. ಇದೇ ಚಾರಿತ್ರ್ಯದ ತಳಹದಿ.

ಚಾರಿತ್ರ್ಯವೆಂದರೆ ಒಟ್ಟು ಸಂಸ್ಕಾರಗಳ ಮೊತ್ತ. ಒಬ್ಬ ವ್ಯಕ್ತಿಯು ಒಳ್ಳೆಯದನ್ನೋ, ಕೆಟ್ಟದನ್ನೋ ನಿರಂತರವಾಗಿ ಮಾಡುತ್ತಾ, ಚಿಂತಿಸುತ್ತಾ, ಮಾತನಾಡುತ್ತಾ ಇದ್ದರೆ ಅದೇ ಒಂದು ಸಂಸ್ಕಾರವಾಗಿ ಅದಕ್ಕನುಗುಣವಾದ ಚಾರಿತ್ರ್ಯ ಅವನದಾಗುತ್ತದೆ. ಚಾರಿತ್ರ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ. ಚಾರಿತ್ರ್ಯಶುದ್ಧಿ ಇಲ್ಲದಿದ್ದರೆ ನಾವು ಪಡೆದ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗುವುದಿಲ್ಲ.

ನಾವು ನಿಜವಾದ ಅರ್ಥದಲ್ಲಿ ಮಾನವರಾಗಿ ಬಾಳಬೇಕಾದರೆ ಜ್ಞಾನದ ಹಂಬಲ, ಚಾರಿತ್ರ್ಯಶುದ್ಧಿ, ಮಾನವೀಯ ಸಂಬಂಧ, ಆಧ್ಯಾತ್ಮಿಕತೆಯ ಒಲವು ನಮ್ಮಲ್ಲಿರಬೇಕು. ಪ್ರಿಯ ವಿದ್ಯಾರ್ಥಿಗಳೇ, ಇವುಗಳನ್ನು ನಿಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ನೀವೂ ನೆಮ್ಮದಿಯಿಂದ ಬಾಳಿ, ಇತರರಿಗೂ ನೆಮ್ಮದಿಯನ್ನು ನೀಡಿ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

# ಕೋಪದ ಪರಿಣಾಮ ಅನರ್ಥಕಾರಿ

ಕೋಪದಿಂದಾಗುವ ಕೆಟ್ಟ ಪರಿಣಾಮಗಳು ನೂರಾರು. ಎಲ್ಲ ಮಹಾತ್ಮರು ಕೋಪವನ್ನು ಶಪಿಸಿದ್ದಾರೆ. ಭಗವದ್ಗೀತೆಯಲ್ಲಿ ಕೋಪವನ್ನು ನರಕದ ಬಾಗಿಲು ಎಂದು ಕರೆಯಲಾಗಿದೆ. ಕೋಪದ ಪರಿಣಾಮ ಜಗಳ. ಬೈಗಳಗಳಿಗೆ ಪ್ರತಿಬೈಗಳು, ಹಿಂಸೆಗೆ ಪ್ರತಿಹಿಂಸೆ. ಹೀಗೆ ಕೋಪಿಷ್ಠರಿಂದ ಅಧರ್ಮ ಪ್ರಸಾರ, ಅಲ್ಲದೆ ಸರ್ವನಾಶ ಉಂಟಾದೀತೆಂದು ಎಚ್ಚರಿಸುತ್ತದೆ ಮಹಾಭಾರತ.

ಮನುಷ್ಯನ ಮೆದುಳನ್ನು ಸಿಟ್ಟು ಪ್ರವೇಶಿಸಿದಾಗ, ಅವನು ತೋರಿಸುವ ವಿಕಾರ ವರ್ತನೆಗಳು ಅನೇಕ ರೀತಿಯದಾಗಿರುತ್ತವೆ. ಕೋಪದ ಕುರಿತು ಒಂದು ಶ್ಲೋಕ ಹೀಗೆನ್ನುತ್ತದೆ, ‘ಉತ್ತಮರ ಕೋಪ ಒಂದು ಕ್ಷಣ, ಮಧ್ಯಮರದು ಎರಡು ತಾಸು, ಅಧಮರು ದಿನವಿಡೀ ಕೋಪಗೊಂಡರೆ, ದುರಾತ್ಮರು ಜೀವಮಾನವೆಲ್ಲ ಕೋಪವನ್ನುಳಿಸಿಕೊಳ್ಳುತ್ತಾರೆ’ ಅಂದರೆ ಕೋಪವನ್ನು ದೀರ್ಘಾಯುವಾಗಲು ಬಿಡಬೇಡಿ.

ಕೋಪ ನಿಮ್ಮ ದೈಹಿಕ,ಮಾನಸಿಕ ಸಮತ್ವವನ್ನು ನಾಶ ಗೊಳಿಸುವುದು. ಅದರಿಂದಾಗಿ ಇತರರೊಡನೆ ಸುಮ್ಮನೆ ದ್ವೇಷ ಕಟ್ಟಿಕೊಳ್ಳಬೇಕಾಗುವುದು. ಸಿಡುಕಿನ ನಿಮ್ಮವರ್ತನೆ ಇತರರಿಗೆ ಅಸಹ್ಯವಾಗುವುದು. ಸಿಟ್ಟನ್ನು ಕುರಿತು ಬಸವಣ್ಣನವರ ವಾಣಿ ನೆನಪಿರಲಿ. ‘ಮನೆಯೊಳಗಣ ಕಿಚ್ಚು ಮನೆಯನ್ನೇ ಸುಡುವಂತೆ ತನ್ನಲ್ಲಿ ಹುಟ್ಟಿದ ಕೋಪ ತನ್ನನ್ನು ಸುಡದೇ ಬಿಡದು'.

ಆದರೆ ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ, ಸಮಾಜದ ಮಧ್ಯೆ ಇರಬೇಕಾದರೆ ದುಷ್ಟರ ಕೈಯಿಂದ ತಪ್ಪಿಸಿಕೊಳ್ಳಲು ಮನುಷ್ಯ ಸ್ವಲ್ಪ ತಮೋ ಗುಣವನ್ನು ಪ್ರದರ್ಶಿಸಬೇಕಾಗುತ್ತದೆ. ಆದರೆ ಮುಯ್ಯಿಗೆ ಮುಯ್ಯಿ ತೀರಿಸಲು ಹೋಗಬಾರದು. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ನಾವೇನಾಗಿರುವೆವೋ ಅದು ಸಂಸ್ಕೃತಿ

'ನಾವೇನಾಗಿರುವೆವೋ ಅದು ಸಂಸ್ಕೃತಿ ಮತ್ತು ನಾವು ಏನು ಪಡೆದಿರುವೆವೋ ಅದು ನಾಗರಿಕತೆ' ಎಂಬುದು ಸಂಸ್ಕೃತಿ ಮತ್ತು ನಾಗರಿಕತೆ ಬಗೆಗಿನ ಒಂದು ಪ್ರಸಿದ್ಧ ಹೇಳಿಕೆ.

ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ, ಆಂತರಿಕ ಶಾಂತಿ ಮತ್ತು ಆನಂದ, ನಮ್ಮ ನಡವಳಿಕೆ, ಇತರರೊಡನೆ ನಾವು ಹೊಂದಿರುವ ಉತ್ತಮ ಸಂಬಂಧ ಮತ್ತು ಸಾಮಾಜಿಕ ಸ್ಥಿರತೆ ಇವು ಬಹುಮಟ್ಟಿಗೆ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ.

ನಮ್ಮ ಬಾಹ್ಯ ಜೀವನಮಟ್ಟ, ಹೊಂದಿರುವ ಸೌಲಭ್ಯ, ವಿಲಾಸಿ ವಸ್ತುಗಳು ನಮ್ಮ ಭೌತಿಕ ಮತ್ತು ಬೌದ್ಧಿಕ ಸಂಪತ್ತು. ಇವು ನಮ್ಮ ನಾಗರಿಕತೆಯ ಅಳತೆಗೋಲು. ಸಂಸ್ಕೃತಿ ಮತ್ತು ನಾಗರಿಕತೆಗಳು ಕ್ರಮವಾಗಿ ನಮ್ಮ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಜೀವನವನ್ನು ಪ್ರತಿನಿಧಿಸುತ್ತವೆ. ಇವೆರಡೂ ಪರಸ್ಪರ ಪೂರಕ. ಆದರೆ, ನಾವು ಪಡೆದಿರುವುದೇ ಪ್ರಧಾನವಾಗಿ ನಾವೇನಾಗಿರುವೆವೋ. ಅದು ಗೌಣವಾದರೆ ಆಗ ಜೀವನ ಶೂನ್ಯವೂ ಅರ್ಥಹೀನವೂ ಆಗುತ್ತದೆ.

ಶಿಕ್ಷಣದ ಹಂತದಲ್ಲಿ ಜ್ಞಾನಾರ್ಜನೆ ಮತ್ತು ಕಾರ್ಯ ಕುಶಲತೆ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಆದರೆ, ಇದರ ಜೊತೆಗೆ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿತ್ವದ ಬೆಳವಣಿಗೆಯೂ ಆಗಬೇಕು. ಅದಿಲ್ಲದಿದ್ದರೆ ಪಡೆದ ಜ್ಞಾನ ಮತ್ತು ಕೌಶಲಗಳನ್ನು ಸರಿಯಾದ ರೀತಿಯಲ್ಲಿ, ಸ್ವಂತಕ್ಕೂ ಹಾಗೂ ಸಮಾಜಕ್ಕೂ ಉಪಯುಕ್ತವಾಗುವಂತೆ ಬಳಸಿಕೊಳ್ಳಲಾಗುವುದಿಲ್ಲ. ಜ್ಞಾನವು ಒಂದು ಶಕ್ತಿ. ಆ ಶಕ್ತಿಯನ್ನು ಪಡೆಯುವುದು ನಾಗರಿಕತೆಯಾದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬಲ್ಲ ವ್ಯಕ್ತಿತ್ವವನ್ನು ಪಡೆಯುವುದು ಸಂಸ್ಕೃತಿ.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಯುಕ್ತ ರೀತಿಯಲ್ಲಿ ಬಳಕೆಯಾಗಲಿ ಮನಸ್ಸು

ಆಲೋಚನೆ ಎಂದರೆ ವಸ್ತು, ವ್ಯಕ್ತಿ, ಘಟನೆ ಮುಂತಾದವುಗಳನ್ನು ಕುರಿತು ಮನಸ್ಸಿನಲ್ಲೇಳುವ ಚಿಂತನಾತರಂಗಗಳು. ವಿವಿಧ ಕಲ್ಪನೆಗಳು, ಬೌದ್ಧಿಕ ವಿಚಾರಗಳೂ ಇದೇ ಗುಂಪಿಗೆ ಸೇರುತ್ತವೆ.

ಇಚ್ಛೆ ಎಂದರೆ ಆಸೆಗಳ ಅನುಮೋದನೆ ಅಥವಾ ನಿರೋಧ. ನಾವು ಕೆಲವು ಆಸೆಗಳನ್ನು ಪೂರ್ತಿ ಗೊಳಿಸುವ ಸಂಕಲ್ಪ ಮಾಡುತ್ತೇವೆ. ಮತ್ತೆ ಕೆಲವು ಆಸೆಗಳನ್ನು ಸನ್ನಿವೇಶಕ್ಕೆ ತಕ್ಕಂತೆ ನಿರೋಧಿಸುತ್ತೇವೆ ಅಥವಾ ಮಾರ್ಪಡಿಸುತ್ತೇವೆ ಅಥವಾ ಮುಂದೂಡುತ್ತೇವೆ. ಈ ಮಾನಸಿಕ ಕ್ರಿಯೆಗೆ ಇಚ್ಛೆಯೆಂದು ಹೆಸರು. ನಮ್ಮಲ್ಲೇಳುವ ರಾಗ, ದ್ವೇಷ ಭಯ, ಅನುಕಂಪ ಮುಂತಾದ ಭಾವ ತರಂಗಗಳಿಗೆ ಭಾವನೆ ಎಂದು ಹೆಸರು.

ಆಲೋಚನೆಗಳನ್ನು ವ್ಯವಸ್ಥಿತಗೊಳಿಸಿದರೆ ನಮ್ಮ ಬೌದ್ಧಿಕ ಸಾಮರ್ಥ್ಯ ವೃದ್ಧಿಯಾಗುತ್ತದೆ. ವ್ಯವಸ್ಥಿತವಾಗಿ ಆಲೋಚಿಸುವುದನ್ನು ನಾವು ಕಲಿಯಬೇಕು. ಆಗ ಹೊಸ ಹೊಸ ವಿಚಾರಗಳು ಮನಸ್ಸಿಗೆ ಬರುತ್ತವೆ. ಹಾಗೆಯೇ ನಮ್ಮ ಆಸೆಗಳನ್ನು ನಿಗ್ರಹಿಸುವುದರ ಮೂಲಕ ನಮ್ಮ ಇಚ್ಛಾಶಕ್ತಿಯನ್ನು ವೃದ್ಧಿಸಬಹುದು. ಆಗ ಉನ್ನತ ಆದರ್ಶವನ್ನು ಅನುಸರಿಸಲು ಇಚ್ಛೆ ನೆರವಾಗುತ್ತದೆ. ನಮ್ಮ ಕೋಪ, ಭಯ, ಅಸೂಯೆ ಮುಂತಾದ ನಿಷೇಧಾತ್ಮಕ ಭಾವನೆಗಳನ್ನು ಪ್ರೀತಿ ಅನುಕಂಪ ಸಹಾನುಭೂತಿ ಮುಂತಾದ ಅನ್ವಯಾತ್ಮಕ ಭಾವನೆಗಳಾಗಿ ಪರಿವರ್ತಿಸಬೇಕು. ಹೀಗೆ ನಮ್ಮ ಮನಸ್ಸನ್ನು ಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಜೀವನದಲ್ಲಿ ದುಃಖ ಅನಿವಾರ್ಯ

ಈ ಜೀವನದಲ್ಲಿ ದುಃಖ ಮಿಶ್ರವಿಲ್ಲದ ಸುಖವೆಂಬುದು ಇಲ್ಲವೇ ಇಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, 'ಸುಖವು ದುಃಖದ ಕಿರೀಟವನ್ನು ತೊಟ್ಟುಕೊಂಡು ಬರುತ್ತದೆ'.

ಅನಿವಾರ್ಯವಾದುದನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು. ಆಂಗ್ಲಭಾಷೆಯಲ್ಲಿ ಒಂದು ಪ್ರಾರ್ಥನೆ ಇದೆ. 'ಓ ಪ್ರಭು, ಯಾವುದನ್ನು ನಾನು ಬದಲಾಯಿಸಲಾಗುವುದಿಲ್ಲವೋ ಅದನ್ನು ಒಪ್ಪಿಕೊಳ್ಳುವ ಮಾನಸಿಕ ಪ್ರಶಾಂತತೆಯನ್ನೂ, ಯಾವುದನ್ನು ನಾನು ಬದಲಾಯಿಸಬಹುದೊ ಅದನ್ನು ಬದಲಾಯಿಸುವ ಧೈರ್ಯವನ್ನೂ, ಇವೆರಡನ್ನೂ ಬೇರ್ಪಡಿಸುವ ವಿವೇಕವನ್ನೂ ನನಗೆ ಕರುಣಿಸು' ಎಂದು.

ನಾವೆಲ್ಲರೂ ಮಾನವರು, ಯಾರೂ ಪರಿಪೂರ್ಣ ವ್ಯಕ್ತಿಗಳಲ್ಲ. ಕುಟುಂಬದಲ್ಲಾಗಲಿ, ಸಂಸ್ಥೆಯಲ್ಲಾಗಲಿ ಅಥವಾ ಸಮಾಜದಲ್ಲಾಗಲಿ ಪರಸ್ಪರ ಮನಸ್ತಾಪ, ಜಗಳ ಇತ್ಯಾದಿಗಳು ಅನಿವಾರ್ಯ. ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳು ಅನಿವಾರ್ಯ. ಇವನ್ನೆಲ್ಲ ನಾವು ಒಪ್ಪಿಕೊಂಡು ಶಾಂತ ಚಿತ್ತರಾಗಿರುವುದನ್ನು ಕಲಿಯಬೇಕು.

ಶಾರದಾ ಮಾತೆಯವರು ಹೇಳುತ್ತಾರೆ, 'ಕಷ್ಟ, ಸುಖಗಳು ಮನುಷ್ಯರನ್ನು ಬಿಟ್ಟು ಮತ್ತೆಲ್ಲಿಗೆ ಹೋಗುತ್ತವೆ?' ನಾವು ಮನುಷ್ಯರಾಗಿರುವುದರಿಂದಲೇ ನಮಗೆ ಕಷ್ಟಗಳು ಬರುತ್ತವೆ. ಕಷ್ಟವನ್ನು ಪರಿಭಾವಿಸುವ ಸಾಮರ್ಥ್ಯ ಮನುಷ್ಯತ್ವದ ಒಂದು ಲಕ್ಷಣ. ಈ ಸಾಮರ್ಥ್ಯ ನಮಗಿರುವುದಕ್ಕಾಗಿ ನಾವು ಸಂತೋಷ ಪಡೋಣ.

ಮಹಾ ಭಾರತದಲ್ಲಿ ಒಂದು ಶ್ಲೋಕವಿದೆ, 'ಸುಖವು ನಮಗೆ ಸುಖವಾಗಿಯೇ ಸಿಗುವುದಿಲ್ಲ. ಸುಖಗಳು ದುಃಖದಿಂದಲೇ ಲಭಿಸುವಂತಹವು. ಕಷ್ಟಗಳು ಜೀವನದ ಅವಿಭಾಜ್ಯ ಅಂಗಗಳು ಎಂಬುದನ್ನೂ, ಕಷ್ಟಗಳು ನಮ್ಮ ಪ್ರಗತಿಗೆ ಅವಶ್ಯಕ ಎಂಬುದನ್ನೂ ಅರಿತು ಕಷ್ಟಗಳನ್ನು ಸ್ವೀಕರಿಸೋಣ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಅತಿ ಆಸೆ, ದುರಾಸೆಗಳಿರಬಾರದು

ಸ್ವಾಮಿ ವಿವೇಕಾನಂದರು ಹೇಳುವಂತೆ ಭಾರತದ ಎರಡು ಮುಖ್ಯ ಆದರ್ಶಗಳು ಸೇವೆ ಮತ್ತು ತ್ಯಾಗ. ಇತರರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು. ಯಾವುದೇ ರೂಪದ್ದಾಗಿರಬಹುದು. ಆರ್ಥಿಕವಾಗಿರಬಹುದು, ಶೈಕ್ಷಣಿಕವಾಗಿರಬಹುದು ಅಥವಾ ಆಧ್ಯಾತ್ಮಿಕವಾಗಿರಬಹುದು. ಈ ಸಮಾಜದಲ್ಲಿ ಒಂಟಿಯಾಗಿರಲು ಆಗುವುದಿಲ್ಲ. ಸಹಾಯವನ್ನು ಸ್ವೀಕರಿಸಬೇಕಾಗುವುದು. ಆದರೆ, ಇತರರಿಗೆ ಸಹಾಯ ಮಾಡುವಾಗ ಸೇವಾ ಮನೋಭಾವದಿಂದ ಮಾಡಬೇಕು. ಈ ಸೇವಾ ಮನೋಭಾವವೇ ಪ್ರವೃತ್ತಿಶೀಲತೆಯ ಉದಾತ್ತ ರೂಪ.

ಈ ಸೇವೆಯ ಹಿಂದೆ ತ್ಯಾಗವೂ ಇರಬೇಕು. ಅತಿ ಆಸೆ ದುರಾಸೆಗಳಿರಬಾರದು. ಪ್ರಾಪಂಚಿಕ ವಸ್ತುಗಳಲ್ಲಿ ವ್ಯಾಮೋಹವಿರಬಾರದು. ಹೀಗಿಲ್ಲದಿದ್ದರೆ ಸೇವೆಯೂ ಸ್ವಾರ್ಥಪರವಾಗುವುದು. ಕೀರ್ತಿ ಯಶಸ್ಸುಗಳ ಸಾಧನವಾಗುವುದು. ನಿರ್ಲಿಪ್ತತೆ ಇದ್ದರೆ ಮಾತ್ರ ನಿಸ್ವಾರ್ಥ ಸೇವೆ ಸಾಧ್ಯ. ಈ ನಿರ್ಲಿಪ್ತತೆಯೇ ನಿವೃತ್ತಿಯ ಉದಾತ್ತ ರೂಪ. ನಮ್ಮ ಪ್ರವೃತ್ತಿಯು ಸೇವಾ ರೂಪದಲ್ಲಿ ವ್ಯಕ್ತವಾಗಬೇಕು. ನಿವೃತ್ತಿಯು ತ್ಯಾಗ ರೂಪದಲ್ಲಿ ವ್ಯಕ್ತವಾಗಬೇಕು.

ಜೀವನ ಒಂದು ಹೋರಾಟ. ಅನೇಕ ಶಕ್ತಿಗಳು ನಮ್ಮ ವಿಕಾಸವನ್ನು ತಡೆಗಟ್ಟಲು ಪ್ರಯತ್ನಿಸುತ್ತಿರುವುವು. ಅನೇಕ ಕಷ್ಟನಷ್ಟಗಳನ್ನು ನಾವು ಅನುಭವಿಸಬೇಕಾಗುವುದು. ಅನೇಕ ಆಘಾತಗಳನ್ನು ಸಹಿಸಬೇಕಾಗುವುದು. ಈ ಹೋರಾಟದಲ್ಲಿ, ಈ ಜೀವನ ಸಂಗ್ರಾಮದಲ್ಲಿ ನಾವು ಜಯಗಳಿಸಿದರೆ ನಮ್ಮ ಜೀವನ ಸಾರ್ಥಕವೆನಿಸುವುದು. ಅದಕ್ಕಾಗಿ ನಮ್ಮ ಸ್ವಭಾವ ಜನ್ಯವಾದ ಪ್ರವೃತ್ತಿ, ನಿವೃತ್ತಿಗಳೆರಡನ್ನೂ ನಮ್ಮ ಜೀವನ ವಿಕಾಸಕ್ಕೆ ಪೂರಕವಾಗುವಂತೆ ಉಪಯೋಗಿಸಿಕೊಳ್ಳಬೇಕು.

ಪ್ರಜಾವಾಣಿ

# ವಚನಾಮೃತ



ಮಾತಾ ಕೈವಲ್ಯಮಯಿ, ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಭಗವದ್ ಚಿಂತನೆಯಿಂದ ಯೋಗ ಕ್ಷೇಮ

**ಯೋಗ** ಕ್ಷೇಮ ಎಂಬುದು ಪಾರಿಭಾಷಿಕ ಶಬ್ದ. ನಮ್ಮಲ್ಲಿಲ್ಲದ್ದನ್ನು ಬೇಕಾದುದನ್ನು ಪಡೆಯುವುದು ಯೋಗ. ಇರುವುದನ್ನು ಕಾಪಾಡಿಕೊಳ್ಳುವುದು ಕ್ಷೇಮ. ವ್ಯಾವಹಾರಿಕ ಜಗತ್ತೆಲ್ಲವೂ ಕೇವಲ 'ಯೋಗಕ್ಷೇಮ'ಕ್ಕಾಗಿ ಮಾಡುವ ಪ್ರಯತ್ನವೇ. ಮನಃಶಕ್ತಿಯ ಅಧಿಕ ಅಂಶ ಇದರಲ್ಲಿ ವ್ಯಯವಾಗುತ್ತಿದ್ದರೆ ಭಕ್ತಿ ಸಾಧನೆಗೆ ಏನು ಉಳಿದೀತು? ಆದುದರಿಂದ ಯೋಗಕ್ಷೇಮದ ಚಿಂತೆಯನ್ನು, ಮಾಯೆಯನ್ನು ದಾಟಲು ಬಯಸುವ ಭಕ್ತನು ತ್ಯಜಿಸಬೇಕು.

ಮೊದಲು 'ಯೋಗಕ್ಷೇಮ' ಸರಿಯಾಗಿದ್ದರೆ ತಾನೇ ಅನಂತರ ಭಗವತ್ ಚಿಂತನೆ ಮಾಡಲು ಸಾಧ್ಯ? ಅದನ್ನೇ ಬಿಡಬೇಕು ಎಂದರೆ ಮತ್ತಾರು ನೋಡಿಕೊಳ್ಳುವವರು?

ಏಕಾಂತದಲ್ಲಿ ದೇವರ ಚಿಂತನೆ ಮಾಡಿದರೆ ಜ್ಞಾನ, ಭಕ್ತಿ ವೈರಾಗ್ಯಗಳು ಪ್ರಾಪ್ತವಾಗುತ್ತವೆ. ಆದರೆ, ಆ ಮನಸ್ಸನ್ನು ಸಂಸಾರದಲ್ಲಿ ಹಾಕಿಬಿಟ್ಟರೆ ಕದಡುತ್ತದೆ. ಸಂಸಾರದಲ್ಲಿ ಕೇವಲ ಕಾಮ-ಕಾಂಚನಗಳ ಚಿಂತೆ. ಹೆಪ್ಪು ಹಾಕಿದ ಹಾಲನ್ನು ಸದಾ ಕುಲುಕಿ ಅಲ್ಲಾಡಿಸುತ್ತಿದ್ದರೆ ಅದು ಮೊಸರಾಗುವುದಿಲ್ಲ. ಮೊಸರಿಂದ ಬೆಣ್ಣೆ ತೆಗೆಯಬೇಕಾದರೆ ಸಾವಧಾನದಿಂದ ಕುಳಿತು ಮೊಸರನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಬಹುದು. ಹಾಗೆಯೇ, ಮೊದಲು ಏಕಾಂತದಲ್ಲಿ ಸಾಧನೆ ಮಾಡಿ ಜ್ಞಾನ-ಭಕ್ತಿಗಳೆಂಬ ಬೆಣ್ಣೆಯನ್ನು ಪಡೆದು, ಅನಂತರ ಎಲ್ಲಿ ಬೇಕಾದರೂ ಇಡಬಹುದು.

ಸಂಸಾರದಲ್ಲಿದ್ದು ಸಾಧನೆ ಮಾಡುವುದು ತುಂಬ ಕಠಿಣ. ಅಲ್ಲಿ ಅನೇಕ ಅಡ್ಡಿ ಆತಂಕಗಳು, ರೋಗ,ರುಜಿನಗಳು, ಶೋಕ, ದಾರಿದ್ರ್ಯದಂಥ ಅನೇಕ ರೀತಿಯ ಸಮಸ್ಯೆಗಳು. ಹಾಗಿರುವುದರಿಂದ ಸಂಸಾರಿಗಳಿಗಿರುವ ಉಪಾಯವೆಂದರೆ ಏಕಾಂತದಲ್ಲಿದ್ದು ಸಾಧನೆ ಮಾಡುವುದು. ಹೀಗೆ ಏಕಾಂತದಲ್ಲಿ ಸಾಧನೆ ಮಾಡುವಾಗ ಪರಮಾತ್ಮನೇ ಸರ್ವಸ್ವ ಎಂದು ಭಾವಿಸಿ ಸಾಧನೆ ಮಾಡಬೇಕು. ಆಗ ದೇವರು ಒಲಿಯುವನು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಮೃದು ವಚನವೇ ಸಕಲ ಜಪಂಗಳಯ್ಯ

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಭಾಷೆ ಎಂತಹ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಆಲೋಚಿಸಿದಾಗ ನಾವು ವಾಗ್ದೇವಿಯನ್ನು ಗೌರವಿಸುವುದು, ಪೂಜಿಸುವುದು ಅತ್ಯಂತ ಅರ್ಥಪೂರ್ಣವಾಗಿ ಕಾಣುತ್ತದೆ. ಜಗತ್ತಿನ ಬಗ್ಗೆ ನಮ್ಮ ಭಾವನೆಗಳೆಲ್ಲವೂ ಭಾಷೆಯ ಮೂಲಕವೇ ಉಂಟಾಗಿರುವುದು. ಭಾಷೆಯ ಹೊರತಾಗಿ ನಾವು ವಸ್ತುಗಳ ಬಗ್ಗೆ ಚಿಂತಿಸಲಾರೆವು. ನಾವು ಚಿಂತಿಸುವುದೆಂದರೆ ಮನಸ್ಸಿನಲ್ಲಿ ಮಾತನಾಡುವುದು. ಭರ್ತೃಹರಿ ಎಂಬ ತತ್ವಜ್ಞಾನಿಯ ಅಭಿಪ್ರಾಯದಲ್ಲಿ ನೇರವಾಗಿಯೋ, ಪರೋಕ್ಷವಾಗಿಯು ಭಾಷೆಯ ಮೂಲಕ ವ್ಯಕ್ತವಾಗದ ಒಂದು ವಸ್ತು ಇದೆ ಎಂದು ಊಹಿಸಲಾಗುವುದಿಲ್ಲ.

ಭಾಷೆಗಿಂತ ಸ್ವತಂತ್ರವಾಗಿ ಒಂದು ವಸ್ತು ಇರಬಹುದಾದರೂ ಅದು ಇದೆ ಎಂದು ಅರಿವಾಗುವುದು ಭಾಷೆಯ ಮೂಲಕ. ನಮ್ಮ ದಿನನಿತ್ಯದ ಜೀವನದಲ್ಲಿ ಜನರೊಡನೆ ವ್ಯವಹರಿಸುವಾಗ ನಮ್ಮ ಮಾತಿನ ನಿಗ್ರಹ ಅತ್ಯವಶ್ಯಕ. ಅವರೊಡನೆ ಹೇಗೆ ಎಷ್ಟು ಮಾತನಾಡಬೇಕು ಎಂಬ ಕೌಶಲ ನಮಗಿರಬೇಕು.

ನಿಮ್ಮ ಅಚಾತುರ್ಯದ ಮಾತಿನಿಂದ ಎಷ್ಟೋ ಅನಾಹುತಗಳಾಗುತ್ತವೆ. ಮುಚ್ಚುಮರೆ ಇಲ್ಲದೆ ಮಾತನಾಡುವ ಬಿಚ್ಚು ಮನಸ್ಸಿನ ಕೆಲವರು ತಮ್ಮ ಮಾತಿನ ಮೂಲಕ ಇತರರ ಮನಸ್ಸನ್ನು ಎಷ್ಟೊಂದು ನೋಯಿಸುತ್ತಾರೆ ಎಂಬುದನ್ನು ತಿಳಿಯುವುದೇ ಇಲ್ಲ. ಅವರ ಅಹಂಕಾರ ಅವರನ್ನು ತಿಳಿಯುವುದಕ್ಕೆ ಬಿಡುವುದಿಲ್ಲ.

ಹೀಗೆಯೇ ದರ್ಪ ಅಹಂಕಾರಗಳಿಂದ ಕೂಡಿದ ಅನೇಕರು ತಮ್ಮ ಕಟು ಮಾತಿನ ಮೂಲಕ ಇತರರನ್ನು ಎಷ್ಟೊಂದು ನೋಯಿಸುತ್ತಾರೆ. ಇತರರಿಗೆ ಅಹಿತವನ್ನುಂಟು ಮಾಡುವ ಇತರರ ಮನಸ್ಸನ್ನು ನೋಯಿಸುವ ಮಾತನ್ನು ಅದು ಸತ್ಯವಾದರೂ ನುಡಿಯಕೂಡದು. ಏಕೆಂದರೆ ನೈತಿಕತೆಯ ಮುಖ್ಯ ತಳಹದಿಯೇ ಇತರರನ್ನು ಪ್ರೀತಿಸುವುದು. ಇತರರಿಗೆ ಕಳಕಳಿಯನ್ನು ತೋರಿಸುವುದು. ಜಗತ್ತಿಗೆ ಅನುಗುಣವಾಗಿ ನಮ್ಮ ಮಾತು ವ್ಯವಹಾರಗಳನ್ನು ನಿಯಂತ್ರಿಸಿಕೊಳ್ಳಬೇಕು. ಆದ ಕಾರಣವೇ ಬಸವಣ್ಣನವರು ಹೀಗೆ ಹೇಳುತ್ತಾರೆ 'ಮೃದುವಚನವೇ ಸಕಲ ಜಪಂಗಳಯ್ಯ, ಮೃದು ವಚನವೇ ಸಕಲ ತಪಂಗಳಯ್ಯ'.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ತ್ಯಾಗ, ಮಾನವೀಯತೆ ಮುಖ್ಯವಾಗಲಿ

‘ತ್ಯಾಗದ ಮೂಲಕ ಭೋಗಿಸು’ ಎಂದು ಈಶಾವಾಸ್ಯ ಉಪನಿಷತ್ ಹೇಳುತ್ತದೆ. ಭೋಗವೆಂದರೆ ಕೇವಲ ಇಂದ್ರಿಯ ಸುಖವಲ್ಲ. ನಾವು ಗ್ರಾಹಕರಾಗಿ ವ್ಯಕ್ತಿಗಳಿಂದ ಸಮಾಜದಿಂದ ಮತ್ತು ಪ್ರಕೃತಿಯಿಂದ ಏನೇನು ಸ್ವೀಕರಿಸುತ್ತೇವೋ ಅವೆಲ್ಲವೂ. ಈ ರೀತಿ ಸ್ವೀಕರಿಸುವುದು ತ್ಯಾಗವನ್ನು ಅವಲಂಬಿಸಿರಬೇಕು ಎಂದು ಉಪನಿಷತ್ ಹೇಳುತ್ತದೆ. ಅಂದರೆ, ಸ್ವೀಕರಿಸುವುದರ ಜೊತೆಗೆ ನೀಡುವುದನ್ನು ನಾವು ಕಲಿಯಬೇಕು. ಆದರೆ, ಇಂದಿನ ವಾಣಿಜ್ಯ ಸಂಸ್ಕೃತಿಯ ಪ್ರಭಾವದಿಂದ ಗ್ರಾಹಕ ಮನೋಭಾವ ತೀವ್ರ ಗೊಳ್ಳುತ್ತಿದ್ದು, ತ್ಯಾಗದ ಭಾವನೆ ಹಿಂದೆ ಸರಿಯುತ್ತಿದೆ.

ಮಾನವ ಕೆಲಸದ ಯಂತ್ರವಾಗಿದ್ದಾನೆ. ಆತ ಜೀವಂತ ವ್ಯಕ್ತಿಯಾಗಿರದೇ ಜೀವಂತ ವಸ್ತುವಾಗಿರುವನು. ಅವನ ಅಂಗಾಂಗಗಳು ಮಾರಾಟದ ವಸ್ತುಗಳಾಗಿರುವುವು. ಮಾಲೀಕ,ಮುಖ್ಯಸ್ಥ ತನ್ನ ಕೆಳಗಿನವರನ್ನು ಕೆಲಸದವರೆಂದು ಕಾಣುತ್ತಾನೆಯೇ ಹೊರತು, ಮಾನವರೆಂದು ಕಾಣುವುದಿಲ್ಲ. ಅವನಿಗೆ ಕೆಲಸವೇ ಮುಖ್ಯ. ಕೆಲಸಗಾರರ ವೈಯಕ್ತಿಕ ಸುಖ, ದುಃಖಗಳಾಗಲಿ, ಜೀವನದ ಸಮಸ್ಯೆಗಳಾಗಲಿ ಅವನ ಗಮನಕ್ಕೆ ಬರುವುದಿಲ್ಲ. ಹಾಗೆಯೇ ಕೈ ಕೆಳಗಿನವರು ಕೂಡ ಮುಖ್ಯಸ್ಥನನ್ನು ವ್ಯಕ್ತಿ ಎಂದು ಪರಿಗಣಿಸುವುದಿಲ್ಲ. ವೈಯಕ್ತಿಕ ಉಪಯುಕ್ತತೆ ಪ್ರಧಾನವಾಗಿ ಮಾನವೀಯತೆ ಕಡೆ ಗಣಿಸಲಾಗುತ್ತಿದೆ.

ವ್ಯಕ್ತಿಯ ಬೆಲೆ ವ್ಯಾವಹಾರಿಕ ಉಪಯುಕ್ತತೆಯನ್ನು ಅವಲಂಬಿಸುತ್ತದೆಯೇ ಹೊರತು, ಅವನ ನಿಜವಾದ ವ್ಯಕ್ತಿತ್ವವನ್ನಲ್ಲ. ನಾವು ಹಳೆಯ ಮಂದಿರಗಳನ್ನೂ, ಹಳೆಯ ಪೀಠೋಪಕರಣಗಳನ್ನೂ, ಹಳೆಯ ಬೆಳ್ಳಿಯನ್ನೂ, ಹಳೆಯ ನಿಘಂಟುಗಳನ್ನೂ ಮತ್ತು ಹಳೆಯ ಪುಸ್ತಕಗಳನ್ನೂ ಪ್ರೀತಿಸುತ್ತೇವೆ. ಹಾಗೆಯೇ ಪೂರ್ಣ ಜೀವನಾನುಭವಗಳನ್ನು ಹೊಂದಿದ ವಯೋವೃದ್ಧರನ್ನೇಕೆ ಪ್ರೀತಿಸಬಾರದು?

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಸಂಬಂಧದ ಅವಶ್ಯಕತೆ

ಪ್ರತಿಯೊಬ್ಬ ವ್ಯಕ್ತಿಯನ್ನು ಯಾವುದೋ ಒಂದು ಶಕ್ತಿ ಹೊರಗೆಳೆದು ಸಮೂಹದಲ್ಲಿ ಭಾಗವಹಿಸುವಂತೆ ಮಾಡುತ್ತದೆ. ಇತರರೊಡನೆ, ಸಮಾಜದೊಡನೆ, ಕುಟುಂಬದೊಡನೆ ಅಥವಾ ಯಾವುದಾದರೂ ಸಂಸ್ಥೆಯೊಡನೆ ಒಂದಾಗಲು ಬಯಸುತ್ತಾನೆ. ಖ್ಯಾತ ಮನಃಶಾಸ್ತ್ರಜ್ಞ ಎರಿಫ್ರೋಮ್ ಹೇಳುತ್ತಾರೆ, 'ಮನುಷ್ಯ ಸಂಬಂಧವನ್ನು ಪಡೆದಿರಬೇಕು, ಅವನು ಮಾನಸಿಕವಾಗಿ ಸ್ವಸ್ಥನಾಗಿರಬೇಕಾದರೆ ಇತರರೊಡನೆ ಅವನು ಒಂದಾಗಬೇಕು. ಇತರರೊಡನೆ ಅವನು ಒಂದಾಗಿರುವ ಅವಶ್ಯಕತೆ ಅವನಲ್ಲಿರುವ ಅತ್ಯಂತ ಶಕ್ತಿಯುತವಾದ ಬಯಕೆ'

ಹೀಗಾಗಿಯೇ ವ್ಯಕ್ತಿ ವಿವಾಹವಾಗುತ್ತಾನೆ, ಸಂಸ್ಥೆಗಳಿಗೆ ಸೇರಿಕೊಳ್ಳುತ್ತಾನೆ, ಹೊರಗೆ ಹೋಗಿ ಜನರೊಡನೆ ಬೆರೆಯುತ್ತಾನೆ, ಆಟವಾಡುತ್ತಾನೆ. ಮನರಂಜನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾನೆ. ಏನಾದರೂ ಕೆಲಸ ಮಾಡಿ ಆ ಮೂಲಕವಾದರೂ ಸಂಬಂಧವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಅವನು ಸೋಮಾರಿಯಾಗಿದ್ದರೆ ತನ್ನಂತೆ ಇತರ ಸೋಮಾರಿಗಳನ್ನು ಹುಡುಕಿಕೊಂಡು ಹೋಗಿ ಕಾಡು ಹರಟೆಯಲ್ಲಿ ತೊಡಗುತ್ತಾನೆ. ಒಟ್ಟಾರೆ ಒಂಟಿತನದಿಂದ ದೂರವಾಗಲು ಹವಣಿಸುತ್ತಾನೆ.

ಅಡುಗೆ ಮಾಡುವಾಗ ಅನೇಕ ವಸ್ತುಗಳನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸಿ ರುಚಿಕರವಾದ ಪದಾರ್ಥಗಳನ್ನು ತಯಾರಿಸುತ್ತಾರೆ. ಈ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾದರೆ ರುಚಿ ಕೆಡುತ್ತದೆ. ಅದು ಕೆಲವೊಮ್ಮೆ ಆರೋಗ್ಯವನ್ನು ಕೆಡಿಸುತ್ತದೆ. ಹಾಗೆಯೇ, ನಾವು ಜನರೊಡನೆ ಸರಿಯಾದ ರೀತಿಯಲ್ಲಿ ಬೆರೆತರೆ ಅದು ವ್ಯಕ್ತಿಗೆ ಮತ್ತು ಸಮಾಜಕ್ಕೆ ಹಿತಕರ,ಇಲ್ಲದಿದ್ದರೆ ಅದು ಕಲಬೆರಕೆ. ಆಹಾರದ ವಸ್ತುಗಳ ಕಲಬೆರಕೆಯು ದೇಹದ ಆರೋಗ್ಯವನ್ನು ಕೆಡಿಸುವಂತೆ ವ್ಯಕ್ತಿಗಳ ಕಲಬೆರಕೆಯು ಸಮಾಜದ ಆರೋಗ್ಯವನ್ನು ಕೆಡಿಸುತ್ತದೆ.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ನೈತಿಕತೆಯ ತಳಹದಿಯೇ ಆಂತರಿಕ ಪ್ರೇರಣೆ

**ನಾವು** ಪಡೆದ ವಿದ್ಯೆ ಸಾರ್ಥಕವಾಗಬೇಕಾದರೆ ನಮ್ಮ ಜೀವನವು ನೈತಿಕ ಪರಿಪೂರ್ಣತೆ ಪಡೆದಿರಬೇಕು. ಇಲ್ಲದಿದ್ದರೆ ಅನೈತಿಕ ಮಾರ್ಗದಲ್ಲಿ ನಮ್ಮ ಜ್ಞಾನವನ್ನು ಬೆಳೆಸುತ್ತೇವೆ. ವಿದ್ಯೆ ಒಂದು ಆಯುಧವಿದ್ದಂತೆ, ಅದನ್ನು ವಿನಾಶಕ್ಕಾಗಿಯೂ ಉಪಯೋಗಿಸಬಹುದು, ರಕ್ಷಣೆಗಾಗಿಯೂ, ರಚನಾತ್ಮಕವಾಗಿಯೂ ಉಪಯೋಗಿಸಬಹುದು.

ಸ್ವಾಮಿ ವಿವೇಕಾನಂದರು ಹೇಳುವಂತೆ, ಜ್ಞಾನವು ಒಂದು ಶಕ್ತಿ. ಇದನ್ನು ಒಳ್ಳೆಯ ರೀತಿಯಲ್ಲಾಗಲಿ, ಕೆಟ್ಟ ರೀತಿಯಲ್ಲಾಗಲಿ ಉಪಯೋಗಿಸಬಹುದು. ಇದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ವ್ಯಕ್ತಿಯಲ್ಲಿ ನೈತಿಕ ಪರಿವರ್ತನೆ ಉಂಟಾಗಬೇಕು. ನಾನು ನೀತಿವಂತನಾಗಿರಬೇಕು, ನಾನು ಸ್ವತಂತ್ರವಾಗಬೇಕು ಎಂಬ ಆಂತರಿಕ ತುಡಿತವೇ ನೈತಿಕತೆಯ ತಳಹದಿ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ.

ಯಾವುದೇ ಬಾಹ್ಯ ಒತ್ತಡದಿಂದಲ್ಲದೆ ಆಂತರಿಕ ಪ್ರೇರಣೆಯಿಂದಲೇ ನೀತಿವಂತನಾಗಿರಬೇಕಾದರೆ ಅವನು ತನ್ನ ಬಗೆಗಿನ ಕಲ್ಪನೆಯನ್ನು ಬದಲಾಯಿಸಬೇಕು. ತನ್ನ ಬಗ್ಗೆ ಉದಾತ್ತ ಕಲ್ಪನೆ ಇದ್ದರೆ ಜೀವನವೂ ಉದಾತ್ತವಾಗುತ್ತದೆ. ಆಗ ನೈತಿಕತೆಯು ಸ್ವಾಭಾವಿಕವಾಗಿ ನಮ್ಮ ಜೀವನದೊಂದಿಗೆ ಒಂದಾಗಿಬಿಡುತ್ತದೆ.

ನಮ್ಮ ನಿಜವಾದ ಆಧ್ಯಾತ್ಮಿಕ ಸ್ವರೂಪವನ್ನು ಅರಿತಾಗ ಮೋಕ್ಷ ಪ್ರಾಪ್ತಿ ಉಂಟಾಗುತ್ತದೆ. ಸೂರ್ಯ, ಚಂದ್ರರು ತಮ್ಮ ಮಾರ್ಗವನ್ನು ಅನುಸರಿಸುವಂತೆ ನಾವು ಒಳ್ಳೆಯ ಮಾರ್ಗವನ್ನು ಅನುಸರಿಸೋಣ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಗುರುವಿನ ಮಹತ್ವ

‘ಪ್ರತಿಯೊಬ್ಬ ಮನುಷ್ಯನಲ್ಲೂ ದಿವ್ಯತೆ ಇದೆ’ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ದಿವ್ಯತೆಯನ್ನು ಹೊರ ತೆಗೆಯುವುದೇ ಮನುಷ್ಯ ಜೀವನದ ಗುರಿ. ಇದನ್ನು ಸಾಧಿಸಬೇಕೆಂದರೆ ಮತ್ತೊಂದು ದಿವ್ಯಶಕ್ತಿಯ ಸಂಪರ್ಕಕ್ಕೆ ನಾವು ಬರಬೇಕಾಗುತ್ತದೆ. ಈ ಶಕ್ತಿಯನ್ನು ನಾವು 'ಗುರು' ಎಂದು ಕರೆಯುವುದು. ‘ವರ್ಣ ಮಾತ್ರಂ ಕಲಿಸಿದಾತಂ ಗುರುಂ’ ಎಂಬಂತೆ ಒಂದು ಶಬ್ದವನ್ನು ಕಲಿಸುವುದರಿಂದ ಹಿಡಿದು ನಮ್ಮ ಮೂಲ ಸ್ವರೂಪವನ್ನು ತಿಳಿಸಿ ಕೊಡುವ ಬ್ರಹ್ಮ-ಜ್ಞಾನಿಯವರೆಗೂ ಎಲ್ಲರೂ ಗುರುಗಳೇ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ.

‘ಗು’ ಎಂದರೆ ‘ಅಜ್ಞಾನ’, ‘ರು’ ಎಂದರೆ ‘ಹೋಗಲಾಡಿಸುವವನು’. ನಮ್ಮಲ್ಲಿರುವ ಅಜ್ಞಾನ ಅಥವಾ ಅಂಧಕಾರವನ್ನು ಹೋಗಲಾಡಿಸುವವನೇ ಗುರು. ನಮ್ಮ ದೇಶದ ಸಂಸ್ಕೃತಿ ಗುರುವಿಗೆ ತಂದೆ, ತಾಯಿಯರಿಗಿಂತಲೂ ಎತ್ತರದ ಸ್ಥಾನವನ್ನು ಕೊಟ್ಟಿದೆ. ಇದನ್ನೇ ನಾವು ‘ಆಚಾರ್ಯ ದೇವೋಭವ’ ಎಂಬುದಾಗಿ ಕರೆಯುತ್ತೇವೆ.

ಗುರು ಹೇಗೆ ಕೆಲಸ ಮಾಡುತ್ತಾನೆ ಎಂಬುದಕ್ಕೆ ಒಂದು ಉದಾಹರಣೆ ಹೀಗಿದೆ. ಜಗತ್ತಿನ ಸುಪ್ರಸಿದ್ಧ ಶಿಲ್ಪಿ ಮೈಕೆಲೆಂಜಲೊ ಕೆತ್ತಿದ ಸುಂದರ ಮೂರ್ತಿಗಳನ್ನು ನೋಡಿ, ‘ಇಂತಹ ಸುಂದರ ಮೂರ್ತಿಯನ್ನು ಕೆತ್ತಲು ನಿಮಗೆ ಹೇಗೆ ಸಾಧ್ಯವಾಯಿತು?’ ಎಂದು ಒಬ್ಬರು ಕೇಳುತ್ತಾರೆ. ಇದಕ್ಕೆ‘ ಸುಂದರ ಮೂರ್ತಿಯನ್ನು ಕೆತ್ತಬೇಕೆಂಬ ಸಂಕಲ್ಪ ಮಾಡಿ ಬಂಡೆಯೊಂದನ್ನು ಆರಿಸಿ ತಂದು ಅನವಶ್ಯಕವಾದದ್ದನ್ನೆಲ್ಲ ತೆಗೆಯುತ್ತಾ ಹೋಗುತ್ತೇನೆ. ಕೊನೆಗೆ ಮೂರ್ತಿ ಅನಾ-ವರಣಗೊಳ್ಳುತ್ತದೆ’ ಎನ್ನುತ್ತಾರೆ. ಜಗತ್ತಿನಲ್ಲಿ ಪ್ರತಿಯೊಬ್ಬ ಗುರುವಿನ ಕೆಲಸವೂ ಹೀಗೆ... ನಾವಿಂದು ಜಗತ್ತಿನಲ್ಲಿ ಕೇಳಿರುವ ಮತ್ತು ಕಾಣುತ್ತಿರುವ ಹಲವಾರು ಸುಪ್ರಸಿದ್ಧ ವ್ಯಕ್ತಿಗಳೆಲ್ಲ ನಿರ್ಮಾಣವಾಗಿರುವುದು ಹೀಗೆಯೇ.



# ವಚನಾಮೃತ

**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಕೃಪಾಮಯಿ ಶಾರದಾಶ್ರಮ, ವಿಜಯಪುರ

## ನೈಜ ಅರ್ಥದಲ್ಲಿ ಸ್ವತಂತ್ರ ವ್ಯಕ್ತಿ...

**ಸಾಮಾನ್ಯವಾಗಿ ಜನ ಬಯಸುವುದು ವಾಕ್ ಸ್ವಾತಂತ್ರ್ಯವನ್ನು, ವಿಚಾರ ಸ್ವಾತಂತ್ರ್ಯವನ್ನಲ್ಲ. ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಿರಬೇಕು. ಆದರೆ, ಅವರ ಅಭಿಪ್ರಾಯಗಳೇ ಸ್ವತಂತ್ರವಾಗಿರುವುದಿಲ್ಲ. ಇದಕ್ಕೆ ಹಲವಾರು ಪ್ರಭಾವಗಳ ಪರಿಣಾಮ ಇರುತ್ತವೆ.**

ತಾನೇ ಸ್ವತಂತ್ರವಾಗಿ ವಿಚಾರ ಮಾಡಿ ತನ್ನದೇ ಆದ ಅಭಿಪ್ರಾಯವನ್ನು ರೂಪಿಸುವ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ. ಶ್ರೇಷ್ಠ ಚಿಂತಕರಾದ ವಿಲ್ ಡ್ಯೂರಂಟ್ ಹೇಳುವಂತೆ, 'ಮಾನವನ ಚಿಂತನೆ ಅವನದಲ್ಲ. ಅದು ಅವನು ಯಾವ ಸಾಮಾಜಿಕ ವರ್ಗದ ಭಾಗವಾಗಿರುವನೋ ಅದರ ಪ್ರತಿಫಲ'.

ಅನೇಕರು ಎಷ್ಟೋ ಪೂರ್ವಗ್ರಹಗಳಿಗೆ ದಾಸರಾಗಿರುತ್ತಾರೆ. ಮುಕ್ತ ಮನಸ್ಸಿನಿಂದ ವಿಚಾರ ಜಗತ್ತಿನಲ್ಲಿ ವಿಹರಿಸಲಾರರು. ಆದ್ದರಿಂದ ವೈಚಾರಿಕ ಸುಖವನ್ನು ಅನುಭವಿಸುವುದಕ್ಕೂ ವಿಚಾರ ಸ್ವಾತಂತ್ರ್ಯವೇ ಬೇಕು. ವೈಚಾರಿಕ ಗುಲಾಮಗಿರಿಯನ್ನು,ಅಂಧಾನುಕರಣೆಯನ್ನು ಸ್ವಾಮಿ ವಿವೇಕಾನಂದರು ಕಟುವಾಗಿ ಟೀಕಿಸುತ್ತಿದ್ದರು.

ಪ್ರಪಂಚದ ಸುಖ ಅನುಭವಿಸುವುದಕ್ಕೆ ನಮಗೆ ಸ್ವಾತಂತ್ರ್ಯ ಬೇಕು. ಜತೆಗೆ ಸುಭದ್ರತೆಗೆ ಹಣ, ಹುದ್ದೆ, ಅಧಿಕಾರ, ಸ್ಥಾನಮಾನಗಳೂ ಜತೆಗೂಡಬೇಕು. ಇವೆಲ್ಲವನ್ನೂ ಸರಿಯಾಗಿ ಬಳಸಿಕೊಂಡಾಗ ಮನುಷ್ಯನಿಗೆ ಸಮಾಜದಲ್ಲಿ ಮುಕ್ತ ಮನಸ್ಸಿನಿಂದ ಸ್ವಾತಂತ್ರ್ಯ ಅನುಭವಿಸಲು ಸಹಾಯಕವಾಗುವವು.

ಹಾಗೆಯೇ, ಪ್ರೀತಿ, ಸಹಾನುಭೂತಿ, ದಯೆ ಮುಂತಾದ ಎಲ್ಲ ಸದ್ಗುಣಗಳು ಆಧ್ಯಾತ್ಮಿಕ ಮೂಲದಿಂದ ಹೊರಹೊಮ್ಮುತ್ತವೆ. ಇವುಗಳ ಮೂಲವನ್ನು ನಾವು ಭೌತವಸ್ತುವಿನಲ್ಲಿ ಅರಸಲಾಗದು. ಆಧ್ಯಾತ್ಮಿಕ ಹಂತದಲ್ಲಿ ಮಾತ್ರ ಇವು ಸ್ವಭಾವ ಸಿದ್ಧವಾಗುತ್ತವೆ. ಆ ಸ್ವಭಾವ, ಸಿದ್ಧಿಯನ್ನು ಪಡೆದಾಗಲೇ ಒಬ್ಬ ವ್ಯಕ್ತಿಯನ್ನು ನಿಜವಾಗಿಯೂ ಸ್ವತಂತ್ರ ಎಂದು ಕರೆಯಬಹುದು.

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು,
ಕೃಪಾಮಯಿ ಶಾರದಾಶ್ರಮ, ವಿಜಯಪುರ

## ಸಹನೆಯಿಂದ ಸಿದ್ಧಿ

**ಉಗ್ಗು** ದನಿಯ, ಕುಗ್ಗು ನುಡಿಯ ಹುಡುಗನಾದ ಡಿಮೋಸ್ತನೀಸ್ ವಾಗ್ಮಿಯಾಗಲು ದೃಢ ನಿಶ್ಚಯ ಮಾಡಿದ. ಉಗ್ಗು ಅವನನ್ನು ಬಾಧಿಸುತ್ತಿತ್ತು. ದೀರ್ಘವಾದ ವಾಕ್ಯವನ್ನು ಒಮ್ಮೆಲೇ ಹೇಳುವ ಸಾಮರ್ಥ್ಯ ಅವರನಿಗಿರಲಿಲ್ಲ. ನಿರಂತರ ಪ್ರಯತ್ನದಿಂದ ಅವನು ಈ ದೌರ್ಬಲ್ಯವನ್ನು ಗೆದ್ದ.

ವೈದ್ಯರ ಹೇಳಿಕೆಯಂತೆ ನಾಲಿಗೆಯ ಮೇಲೆ ಬೆಣಚು ಕಲ್ಲುಗಳನ್ನಿಟ್ಟು ಸ್ಪಷ್ಟವಾಗಿ ಗಟ್ಟಿಯಾಗಿ ಶಬ್ದಗಳನ್ನು ಉಚ್ಚರಿಸತೊಡಗಿದ! ಎತ್ತರವಾದ ಬೆಟ್ಟಗಳನ್ನು ಏರಿಳಿಯುತ್ತಾ ದೀರ್ಘ ಉಸಿರೆಳೆಯುವ ಅಭ್ಯಾಸವನ್ನು ಮಾಡಿ, ಅತ್ಯಂತ ಉದ್ದವಾದ ವಾಕ್ಯಗಳನ್ನೂ ತಡೆಯಿಲ್ಲದೆ ಉಚ್ಚರಿಸತೊಡಗಿದ! ದಿನವೂ ಸಮುದ್ರದ ಬಳಿ ನಿಂತು ಸಮುದ್ರ ಘೋಷವನ್ನು ಮೀರಿಸುವ ದನಿಯಿಂದ ಮಾತುಗಾರಿಕೆಯನ್ನು ಅಭ್ಯಸಿಸಿದ!

ಕಾಯ್ದೆ, ಕಾನೂನು ಗ್ರಂಥಗಳನ್ನೂ, ಗ್ರೀಕ್ ಮಹಾಕಾವ್ಯಗಳನ್ನೂ ದಿನದ 16ಗಂಟೆಗಳಿಗೂ ಮಿಕ್ಕಿ ಅಧ್ಯಯನ ಮಾಡಿದ. ಜನರೊಡನೆಯ ವ್ಯವಹಾರದಿಂದ ಅಭ್ಯಾಸಕ್ಕೆ ವಿಘ್ನ ಬರಕೂಡದೆಂದು ತಲೆಯನ್ನು ಅರ್ಧ ಬೋಳಿಸಿ ವಿಕಾರ ಮಾಡಿಕೊಂಡು ನೆಲಮಾಳಿಗೆಯಲ್ಲಿ ಕುಳಿತಿರುತ್ತಿದ್ದ. ಪ್ರಭಾವಿ ಹಾವಭಾವ ಮತ್ತು ಅಂಗಾಭಿನಯಕ್ಕಾಗಿ ದೊಡ್ಡ ನಿಲುಗನ್ನಡಿ ಎದುರು ದಿನವೂ ನಾಟಕ ನಡೆಸುತ್ತಿದ್ದ. ಮೂರು ವರ್ಷಗಳ ಅಜ್ಞಾತವಾಸದಿಂದ ಆತ ಹೊರಬಿದ್ದಾಗ ಜ್ಞಾನನಿಧಿಯಾಗಿದ್ದ.

ಗ್ರೀಕ್ ದೊರೆ ಫಿಲಿಪ್, 'ಇಡೀ ಜಗತ್ತನ್ನೇ ಜಯಿಸಬಹುದು, ಆದರೆ, ಡಿಮೋಸ್ತನೀಸ್‌ನ ನಾಲಿಗೆಯನ್ನು ಜಯಿಸುವುದು ಅಸಾಧ್ಯ' ಎಂದು ಹೇಳಿದ.

'ಮಹತ್ಕಾರ್ಯಗಳು ಹಠಾತ್ ಬಲದಿಂದಲ್ಲ, ನಿರಂತರ ಪರಿಶ್ರಮದಿಂದ ಸಾಧ್ಯ' ಎಂಬ ಮಾತಿದೆ. 'ಹಿಡಿದ ಕೆಲಸವನ್ನು ಪರಿಪೂರ್ಣಗೊಳಿಸುವ ದೃಢ ನಿರ್ಧಾರವೇ ಬಲಿಷ್ಠನಿಗೂ, ದುರ್ಬಲರನಿಗೂ ಇರುವ ಅಂತರವನ್ನು ಸೂಚಿಸುತ್ತದೆ' ಎಂದು ಕಾರ್ಲೈಲ್ ಹೇಳಿದ್ದಾನೆ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ನಮ್ಮಂತೆಯೇ ಇತರರು..

ಮನುಷ್ಯರು ಅನೇಕ ವೇಳೆ ಆಡುವ ಮಾತುಗಳು ಅಸ್ವಾಭಾವಿಕವಾಗಿರುತ್ತವೆ. ನಮ್ಮಲ್ಲಿ ಪ್ರೀತಿ ಮತ್ತು ಸಹಾನುಭೂತಿಯ ಭಾವವಿದ್ದರೆ ಅದಕ್ಕನುಗುಣವಾಗಿ ನಮ್ಮ ಮಾತು ಕೂಡ ಪ್ರಿಯವೂ, ಹಿತವೂ ಆಗುತ್ತದೆ. ಇತರರನ್ನು ನಾವು ಯಾವುದೇ ರೀತಿಯಲ್ಲಿಯೂ ನೋಯಿಸಬಾರದು ಎಂಬ ಭಾವ ಮನಸ್ಸಿನಲ್ಲಿ ದೃಢವಾಗಿದ್ದರೆ ಅದು ಸ್ವಾಭಾವಿಕವಾಗಿಯೇ ನಮ್ಮ ನಡೆ-ನುಡಿಗಳನ್ನು ನಿಯಂತ್ರಿಸುತ್ತದೆ. ನಮಗೆ ಯಾವುದು ನೋವನ್ನುಂಟು ಮಾಡುತ್ತದೊ ಅಥವಾ ಹಿತವನ್ನು ಉಂಟುಮಾಡುತ್ತದೊ ಅದೇ ಇತರರಿಗೂ ಅನ್ವಯಿಸುತ್ತದೆ ಎಂಬ ಔದಾರ್ಯ ನಮ್ಮಲ್ಲಿದ್ದರೆ ಮಾತಿನ ಮೂಲಕ ಇತರರನ್ನು ನೋಯಿಸುವುದು ಕಡಿಮೆಯಾಗುತ್ತದೆ.

‘ಆತ್ಮವತ್ ಸರ್ವಭೂತೇಶು’ ಅಥವಾ ‘ನಮ್ಮಂತೆಯೇ ಇತರರು’ ಎಂಬ ತನ್ನನ್ನು ಇತರರಲ್ಲಿ ಕಾಣುವ ಭಾವವನ್ನು ನಾವು ಬೆಳೆಸಿಕೊಂಡರೆ ಕಟು ವಾಕ್ಯದಿಂದ ಇತರರನ್ನು ನೋಯಿಸುವ ಪ್ರಸಂಗವೇ ಬರಲಾರದು. ಆದರೆ, ನಾವು ಹಲವು ಸಲ ನಮ್ಮಂತೆ ಇತರರು ಎಂದು ಭಾವಿಸುವ ಸಾಮರ್ಥ್ಯವನ್ನು ಕಳೆದು ಕೊಂಡಿರುತ್ತೇವೆ. ನಮ್ಮ ವ್ಯಕ್ತಿತ್ವದ ಪರಿಧಿ ವಿಸ್ತಾರವಾಗುತ್ತ ಹೋಗಿ ಅದು ಎಲ್ಲರನ್ನೂ ಒಳಗೊಳ್ಳುವಂತಾದರೆ ನಮ್ಮ ಮಾತು ಸ್ವಭಾವ ಎಲ್ಲ ಮೃದುವಾಗುತ್ತದೆ. ಸಂಸ್ಕೃತದಲ್ಲಿ ಒಂದು ಹೇಳಿಕೆ ಇದೆ.

ಯದಿಚ್ಛಸಿ ವಶೀಕರ್ತುಮ್ ಜಗದೇಕೇನ ಕರ್ಮಣಾ|
ಪರಾಪವಾದಸಸ್ಯೇಭ್ಯೋ ಗಾಂ ಚರಂತೀಂ ನಿವಾರಯಾ||

ಒಂದೇ ಒಂದು ಕರ್ಮದಿಂದ ಜಗತ್ತನ್ನು ನಿನ್ನದಾಗಿಸಿಕೊಳ್ಳಬೇಕೆಂಬ ಇಚ್ಛೆ ಇದ್ದರೆ, ಪರನಿಂದೆಯ ಹೊಲದಲ್ಲಿ ನಾಲಿಗೆ ಎಂಬ ಹಸುವು ಮೇಯುವುದನ್ನು ನಿಲ್ಲಿಸು. ಇಲ್ಲಿ ‘ಗಾಂ’ ಎಂಬ ಶಬ್ದವನ್ನು ಹಸು ಮತ್ತು ನಾಲಿಗೆ ಎಂಬ ದ್ವಂದ್ವಾರ್ಥದಲ್ಲಿ ಉಪಯೋಗಿಸಲಾಗಿದೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ತ್ಯಾಗವೇ ಸಮಾಜದ ತಳಹದಿ

**ನಾವೆಲ್ಲ** ಸಮಾಜವೆಂಬ ದೋಣಿಯ ಪಯಣಿಗರು. ನಮ್ಮ ಮುನ್ನಡೆ ದೋಣಿಯ ವೇಗವನ್ನು ಅವಲಂಬಿಸಿದೆ. ನಾವು ದೋಣಿಯ ವೇಗವನ್ನು ಹೆಚ್ಚಿಸಬಹುದೇ ಹೊರತು ಯಾರೊಬ್ಬ ಪ್ರಯಾಣಿಕನೂ ತಾನು ಮೊದಲು ದಡ ಸೇರುತ್ತೇನೆ ಎಂದು ಮುನ್ನುಗ್ಗಲು ಆಗದು. ಅಲ್ಲಿ ಅವನು ತನ್ನತನವನ್ನು ತ್ಯಾಗ ಮಾಡಿ ಸಹ ಪ್ರಯಾಣಿಕರೊಡನೆ ಸಹಕರಿಸಬೇಕಾಗುತ್ತದೆ. ಇತರರನ್ನು ಮೀರಿ ಮುಂದೆ ಹೋದರೆ ನಿಸ್ಸಹಾಯಕನಾಗುತ್ತಾನೆ. ಆದ್ದರಿಂದ ತ್ಯಾಗವೇ ಸಮಾಜದ ಆಧಾರಸ್ತಂಭ.

ಸಮಾಜವನ್ನು ಕಟ್ಟುವುದೆಂದರೆ ವ್ಯಕ್ತಿಗಳ ಸ್ವಾರ್ಥ ತ್ಯಾಗ. ಇದು ಸಂಸ್ಥೆ, ಕುಟುಂಬ ವ್ಯವಸ್ಥೆಗೂ ಅನ್ವಯಿಸುತ್ತದೆ. ಇಲ್ಲಿ ವ್ಯಕ್ತಿಗಳು ತಮ್ಮ ಶ್ರಮ, ಸಮಯ, ಧನ ಅಥವಾ ಜ್ಞಾನವನ್ನು ಸಮರ್ಪಿಸಬೇಕಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಇಚ್ಛೆಯಂತೆಯೇ ಎಲ್ಲವೂ ನಡೆಯಬೇಕೆಂದು ಒತ್ತಾಯಿಸಿದರೆ ಸಂಸ್ಥೆ, ಕುಟುಂಬ, ಸಮಾಜ ಕುಸಿದು ಬೀಳುತ್ತದೆ. ತ್ಯಾಗವೇ ಇವುಗಳ ತಳಹದಿಯಾಗಿದೆ.

ತ್ಯಾಗವೆಂದರೆ ಮನೆ, ಮಠ ಎಲ್ಲ ಬಿಟ್ಟು ಸನ್ಯಾಸ ಸ್ವೀಕರಿಸುವುದಲ್ಲ. ತ್ಯಾಗವೆಂದರೆ ತನ್ನಲ್ಲಿ ತಾನು ನೆಲೆ ನಿಲ್ಲುವುದು.

ನಮ್ಮ ನೆಲೆ ನಮ್ಮಲ್ಲಿರದೆ ಹೊರಗೆಲ್ಲೋ ಇರುತ್ತದೆ. ಇದರಿಂದಾಗಿ ಹೊರಗಿನ ಸನ್ನಿವೇಶದಲ್ಲಿ ವ್ಯತ್ಯಾಸವಾದರೆ ನಾವು ವಿಚಲಿತರಾಗುತ್ತೇವೆ. ಅಧಿಕಾರ ಹೋದರೆ ನಮ್ಮ ವ್ಯಕ್ತಿತ್ವವೇ ಹೋದಂತಾಗುತ್ತದೆ. ಹಣ ನಷ್ಟವಾದರೆ ಸರ್ವಸ್ವವೇ ನಷ್ಟವಾದಂತಾಗುತ್ತದೆ. ನಮ್ಮ ವ್ಯಕ್ತಿತ್ವದ ಕೇಂದ್ರ ನಮ್ಮಲ್ಲಿಯೇ ಇರಬೇಕು. ನಮ್ಮಲ್ಲಿ ನಾವು ನೆಲೆನಿಲ್ಲಬೇಕು. ಆಗ ಹೊರಗಿನ ಸನ್ನಿವೇಶಗಳಾವವೂ ನಮ್ಮನ್ನು ಅಸ್ಥಿರಗೊಳಿಸಲಾರವು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಯಶಸ್ಸಿಗೆ ಬೇಕು ಚಾರಿತ್ರ್ಯದ ಬೆಂಬಲ

ಪ್ರತಿಕೂಲ ಪರಿಸ್ಥಿತಿಗಳಲ್ಲಿ ಹಲವರು ದಾಖಲೆಗಳನ್ನು ಮಾಡಬಲ್ಲವರಾದರೆ, ಹಲವರು ಸೋತು ಹೋಗುತ್ತಾರೆ. ಇದೇ ಸಂದರ್ಭದಲ್ಲೇ ವ್ಯಕ್ತಿಯೊಬ್ಬನ ಸಾಮರ್ಥ್ಯ, ಚಾರಿತ್ರ್ಯ ತಿಳಿಯುತ್ತದೆ. ‘ಪರಿಸ್ಥಿತಿ ಪ್ರತಿಕೂಲವಾಗಿದ್ದಾಗ ವ್ಯಕ್ತಿ ಹೇಗೆ ನಡೆದು ಕೊಳ್ಳುತ್ತಾನೆಂಬುದು ವ್ಯಕ್ತಿಯ ಚಾರಿತ್ರ್ಯದ ಅಳತೆ ಗೋಲಾಗುತ್ತದೆ’ ಎಂದಿದ್ದಾನೆ ಜಾನ್ ಎಫ್.ಕೆನಡಿ.

ಎಲ್ಲವೂ ಸುಗಮ, ಅನುಕೂಲಕರವಿದ್ದಾಗ ನಾವು ತರ್ಕ ಬದ್ಧವಾಗಿ, ಉದಾರವಾಗಿ ನಡೆದುಕೊಳ್ಳುತ್ತೇವೆ. ಅದೇ ನಾವು ಬಯಸಿದ್ದು ಆಗದೆ, ನಮ್ಮ ಮೇಲಿನ ಒತ್ತಡ ಹೆಚ್ಚಿದಲ್ಲಿ ಹಲವರಿಗೆ ಸ್ಪಷ್ಟವಾಗಿ ಯೋಚಿಸಲು ಸಹ ಆಗದೆ, ಇತರರ ಮೇಲೆ ರೇಗುತ್ತಾರೆ. ಹಲವರು ಸ್ಪಷ್ಟ ನಿಲುವು ತಳೆದು ಇತರರನ್ನು ಮೊದಲಿನಂತೆ ಗೌರವಿಸುತ್ತಾರೆ. ಒಟ್ಟಿನಲ್ಲಿ ಪ್ರತಿಕೂಲ ಪರಿಸ್ಥಿತಿಯು ವ್ಯಕ್ತಿಯ-ಮನುಷ್ಯನ ಚಾರಿತ್ರ್ಯ ತೋರಿಸುತ್ತದೆ.

ಯಶಸ್ಸಿಗಿಂತ ಕಠಿಣವಾದದ್ದು ಯಾವುದೆಂದರೆ ಯಶಸ್ಸನ್ನು ನಾವು ಹೇಗೆ ನಿಭಾಯಿಸುತ್ತೇವೆ ಎಂಬುದು. ಜೀವನದಲ್ಲಿ ಹೇಗೆ ಯಶಸ್ಸು ಸಾಧಿಸಬೇಕೆಂಬುದನ್ನು ಹಲವು ಮಂದಿ ತಿಳಿದಿರುತ್ತಾರೆ. ಆದರೆ, ಯಶಸ್ಸು ಸಾಧಿಸಿದ ನಂತರ ಹೇಗೆ ನಿಭಾಯಿಸಬೇಕು ಎಂಬುದು ಅವರಿಗೆ ಗೊತ್ತಿರುವುದಿಲ್ಲ. ಯಶಸ್ಸನ್ನು ಸಾಧಿಸಲು ಸಾಮರ್ಥ್ಯ ಬೇಕು. ಯಶಸ್ಸನ್ನು ಕಾಪಾಡಿಕೊಳ್ಳಲು ಚಾರಿತ್ರ್ಯಬೇಕು.

ನೀತಿ ಮತ್ತು ಚಾರಿತ್ರ್ಯ ನಿರ್ಮಾಣ ಹುಟ್ಟಿದಂದಿನಿಂದ ಆರಂಭವಾಗಿ ಸಾಯುವ ತನಕ ಸಾಗುತ್ತದೆ. ಚಾರಿತ್ರ್ಯಕ್ಕೆ ಯಶಸ್ಸು ಬೇಕಿಲ್ಲ. ಆದರೆ, ಯಶಸ್ಸಿಗೆ ಚಾರಿತ್ರ್ಯದ ಬೆಂಬಲ ಬೇಕು. ಕಳೆಗಳು ತೋಟದ ಫಲವತ್ತತೆಯನ್ನು ಕ್ಷೀಣಿಸದಿರಲು, ಮಾಲಿ ಅವುಗಳನ್ನು ಕಿತ್ತು ಹಾಕುತ್ತಿರುವಂತೆ, ನಾವು ನಮ್ಮ ತಪ್ಪುಗಳನ್ನು ಗುರುತಿಸಿ ತಿದ್ದಿಕೊಂಡು ನಮ್ಮ ಚಾರಿತ್ರ್ಯ ನಿರ್ಮಾಣ ಹಾಗೂ ಅಭಿವೃದ್ಧಿ ಮಾಡಿಕೊಳ್ಳಬೇಕು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಸುಶಿಕ್ಷಿತರು ಎಂದರೆ ಹೀಗಿರಬೇಕು...

ಯಾರು ಪ್ರತಿದಿನ ಎದುರಾಗುವ ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸುತ್ತಾರೋ, ಪರಿಸ್ಥಿತಿಗಳು ಸರಿಯಾಗಿ ಅರಿತುಕೊಂಡು ಸೂಕ್ತ ಕ್ರಿಯೆಗಳನ್ನು ತೆಗೆದುಕೊಳ್ಳುವುದರಿಂದ ತಪ್ಪಿಸಿಕೊಳ್ಳದೆ ಇರುತ್ತಾರೋ ಅವರನ್ನು ನಾವು ಸುಶಿಕ್ಷಿತರು ಎಂದು ಕರೆಯಬೇಕಾಗುತ್ತದೆ.

ಇತರರೊಡನೆ ಯಾರು ಗೌರವದಿಂದ ವರ್ತಿಸುತ್ತಾರೋ, ಇತರರ ಅಸಂತೋಷಕರ ಹಾಗೂ ಅಸಹ್ಯಕರ ಪ್ರವೃತ್ತಿಗಳನ್ನು ಸುಲಭವಾಗಿ ಸಹಿಸಿಕೊಳ್ಳುತ್ತಾರೋ, ತಮ್ಮ ಸಹಯೋಗಿಗಳೊಡನೆ ಸಾಧ್ಯವಿದ್ದಷ್ಟು ತಾಳ್ಮೆಯಿಂದ ವ್ಯವಹರಿಸುತ್ತಾರೋ ಅವರನ್ನು ಸಹ ಸುಶಿಕ್ಷಿತರು ಎಂದು ಕರೆಯಬಹುದು.

ಯಾರು ತಮ್ಮ ಇಂದ್ರಿಯ ಸುಖಗಳನ್ನು ಯಾವಾಗಲೂ ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾರೋ, ತಮ್ಮ ದೌರ್ಭಾಗ್ಯಗಳಿಂದ ಅತಿಯಾಗಿ ಪ್ರಭಾವಿತರಾಗದೇ ಅವುಗಳನ್ನು ನಿಮ್ಮ ಸಹಜ ಸ್ವಭಾವಕ್ಕೆ ಕುಂದುಬಾರದ ರೀತಿಯಲ್ಲಿ ಧೈರ್ಯದಿಂದ ಸಹಿಸಿಕೊಳ್ಳುತ್ತಾರೋ ಅವರು ಸುಶಿಕ್ಷಿತರು. ಎಲ್ಲಕ್ಕಿಂತ ಮುಖ್ಯವಾಗಿ ಯಾರು ತಮ್ಮ ಯಶಸ್ಸಿನಿಂದ ಹಾಳಾಗುವುದಿಲ್ಲವೋ, ತಮ್ಮ ಸಹಜ ಸ್ವಭಾವವನ್ನು ಬಿಡದೆ, ವಿವೇಕಿ, ಸಮಚಿತ್ತ ವ್ಯಕ್ತಿಗಳಂತೆ ತಮ್ಮ ನೆಲೆಯನ್ನು ತೊರೆಯುವರೋ, ತಮಗೆ ಜನ್ಮತಃ ದೊರೆತ ಸಹಜ ಸ್ವಭಾವವನ್ನು ಆನಂದಿಸುವಂತೆಯೇ ಆಕಸ್ಮಿಕವಾಗಿ ಬಂದ ಸೌಭಾಗ್ಯಗಳನ್ನೂ ಆನಂದಿಸುವರೋ ಅವರು ಸುಶಿಕ್ಷಿತರು.

ಯಾರ ನಡೆನುಡಿಗಳು ಈ ಮೇಲಿನ ಯಾವುದೇ ಒಂದು ವಿಶೇಷಣಕ್ಕೆ ಮಾತ್ರ ಸರಿ ಹೊಂದದೆ ಎಲ್ಲಕ್ಕೂ ಸರಿಹೊಂದುವುದೋ ಅವರೇ ಸುಶಿಕ್ಷಿತರು. ಅಂದರೆ, ಎಲ್ಲ ಸದ್ಗುಣಗಳನ್ನು ಹೊಂದಿರುವವರು. ಸಂಕ್ಷಿಪ್ತವಾಗಿ ಹೇಳುವುದಾದರೆ ಯಾವುದೇ ಸನ್ನಿವೇಶದಲ್ಲೇ ಆಗಲಿ ವಿವೇಕದಿಂದ ಆಯ್ಕೆ ಮಾಡುವವರು. ಯಾರು ವಿವೇಕ ಮತ್ತು ಮೂರ್ಖತನ, ಒಳ್ಳೆಯದು ಮತ್ತು ಕೆಟ್ಟದ್ದು, ಸಚ್ಚಾರಿತ್ರ್ಯ ಹಾಗೂ ಅಶ್ಲೀಲತೆಗಳ ನಡುವಣ ವ್ಯತ್ಯಾಸವನ್ನು ಅರಿಯಬಲ್ಲರೋ, ಇಂಥವರ ವ್ಯಾಸಂಗ ಯಾವುದೇ ತರಗತಿಯವರೆಗೇ ಆಗಿರಲಿ ಅವರು ಸುಶಿಕ್ಷಿತರು. ಹೀಗಾಗಿ ವಿನ್‌ಸ್ಟನ್ ಚರ್ಚಿಲ್ ಹೇಳುತ್ತಾರೆ, 'ವಿಶ್ವವಿದ್ಯಾಲಯಗಳ ಆದ್ಯ ಕರ್ತವ್ಯವೆಂದರೆ ವಿವೇಕ, ವಿವೇಚನೆಯನ್ನು ಕಲಿಸುವುದು. ವ್ಯಾಪಾರವನ್ನಲ್ಲ' ಎಂದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ದೇವರ ಅದ್ಭುತ ಕೊಡುಗೆ ‘ವಿಚಾರ ಶಕ್ತಿ’

ಈ ಜಗತ್ತಿನಲ್ಲಿ ಮನುಷ್ಯ ಉಳಿದೆಲ್ಲ ಜೀವಿಗಳಿಗಿಂತ ದೈಹಿಕವಾಗಿ ಅಶಕ್ತ. ಆದರೆ, ನಿಸರ್ಗ ಮನುಷ್ಯನ ಬಗ್ಗೆ ಕೂಡ ಕರುಣೆ ಹಾಗೂ ರಿಯಾಯಿತಿಯನ್ನು ತೋರಿದೆ. ಮನುಷ್ಯನಿಗೆ ದೇವರು ‘ವಿಚಾರ ಶಕ್ತಿ’ ಎಂಬ ಮಹಾನ್ ಕೊಡುಗೆಯನ್ನು ನೀಡಿದ್ದಾನೆ. ಮನುಷ್ಯ ತನಗೆ ಬೇಕಾದ ಪರಿಸರ ವಾತಾವರಣವನ್ನು ನಿರ್ಮಿಸಿಕೊಳ್ಳಬಲ್ಲ. ಅದೇ ಅನ್ಯ ಜೀವಿಗಳು ತಮ್ಮ ಪರಿಸರ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ದುರ್ದೈವವೆಂದರೆ ಕೆಲವೇ ಕೆಲವು ಜನರು ಮಾತ್ರ ತಮಗೆ ಅನಾಯಾಸವಾಗಿ ಬಂದಿರುವ ಈ ಮಹಾನ್ ಕೊಡುಗೆ ವಿಚಾರ ಶಕ್ತಿಯ ಪ್ರಯೋಜನವನ್ನು ಪಡೆದುಕೊಳ್ಳುತ್ತಿರುವುದು.

ವೈಫಲ್ಯಗಳಲ್ಲಿ ಎರಡು ವಿಧಗಳು. ಆಲೋಚಿಸದೆ ಕೆಲಸ ಮಾಡಿದವರು ಹಾಗೂ ಆಲೋಚಿಸಿ ಏನೂ ಮಾಡದೆ ಇದ್ದವರು. ನಮಗಿರುವ ಚಿಂತನ ಸಾಮರ್ಥ್ಯವನ್ನು ಬಳಸಿಕೊಳ್ಳದೆ ಜೀವಿಸುವುದು, ಗುರಿ ನೋಡದೆ ಗುಂಡು ಹಾರಿಸಿದಂತೆ. ಜೀವನವೆನ್ನುವುದು ಹೋಟೆಲ್ ಇದ್ದ ಹಾಗೆ. ನಾವು ನಮ್ಮ ತಾಟು ತೆಗೆದುಕೊಂಡು ನಮಗೆ ಬೇಕಾಗಿದ್ದನ್ನು ಬಡಿಸಿಕೊಂಡು ಹೋಗಿ ಬಿಲ್ ಕಟ್ಟುವುದು. ಬೆಲೆ ಕೊಡಲು ಸಿದ್ಧರಿರುವವರಿಗೆ ನಮಗೆ ಬೇಕಾದುದೆಲ್ಲವೂ ದೊರಕುವುದು. ನೀವು ಕುಳಿತಲ್ಲಿಯೇ ನಿಮಗೆ ಬೇಕಾಗಿದ್ದನ್ನು ಬಡಿಸುವವರು ಬರುತ್ತಾರೆಂದು ಕಾಯುತ್ತಾ ಕುಳಿತರೆ, ನೀವು ಕಾಯುತ್ತಲೇ ಇರಬೇಕು.

ಪ್ರತಿ ಆಯ್ಕೆಗೂ ಒಂದು ಪರಿಣಾಮವಿರುತ್ತದೆ. ನಾವು ಏನನ್ನೇ ಆಗಲಿ ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರು. ಆದರೆ, ಆಯ್ಕೆ ಮಾಡಿಕೊಂಡ ನಂತರ ಅದು ನಮ್ಮನ್ನು ನಿಯಂತ್ರಿಸತೊಡಗುತ್ತದೆ. ಅಸಮಾನರಾಗಲು ನಮಗೆ ಸಮಾನ ಅವಕಾಶಗಳಿವೆ, ಆಯ್ಕೆ ಮಾತ್ರ ನಮ್ಮದು. ಮಣ್ಣನ್ನು ತನಗೆ ಬೇಕಾದ ರೂಪದ ಮಡಕೆಯಾಗಿ ರೂಪಿಸುವ ಕುಂಬಾರನಿಗೆ ಜೀವನವನ್ನು ಹೋಲಿಸಬಹುದು. ಹಾಗೆಯೇ ನಮ್ಮ ಜೀವನವನ್ನು ನಮಗೆ ಬೇಕಾದಂತೆ ನಾವು ರೂಪಿಸಿಕೊಳ್ಳಬಹುದು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಶಿಸ್ತು, ಪರಿಶ್ರಮದ ಫಲ ಸಾಧನೆ

ಕೆಲವು ವ್ಯಕ್ತಿಗಳು ತಮ್ಮ ಜೀವನದಲ್ಲಿ ಎಂದಿಗೂ ತಮ್ಮ ಉದ್ದೇಶಿತ ಗುರಿಯನ್ನು ತಲುಪುವುದಿಲ್ಲ. ಹೀಗೇಕೆ ಎಂದರೆ ಇವರು ಒಂದಿಲ್ಲೊಂದು ಕಷ್ಟಕೋಟಲೆಯಲ್ಲಿ ಸಿಲುಕಿ ಪೇಚಾಡುತ್ತಿರುತ್ತಾರೆ. ಏಕೆ ಕೆಲವರಿಗೆ ಮಾತ್ರ ಯಾವತ್ತೂ ಯಶಸ್ಸು ಲಭಿಸುತ್ತದೆ ಹಾಗೂ ಇನ್ನೂ ಕೆಲವರಿಗೆ ಸೋಲಿನ ಕಹಿ?

ಯಾರೇ ಇರಲಿ, ಆತ ಜೀವನದಲ್ಲಿ ಏನಾದರೂ ಸ್ವಲ್ಪ ಸಾಧಿಸಿದ್ದರೆ ಅದು ಆತನ ಶಿಸ್ತು ಹಾಗೂ ಪರಿಶ್ರಮದ ಫಲದಿಂದ. ಕ್ರೀಡೆಯಲ್ಲಿ ಇರಬಹುದು, ಓದಿನಲ್ಲಿ ಇರಬಹುದು ಅಥವಾ ಯಾವುದೇ ಕ್ಷೇತ್ರದಲ್ಲಿ ಇರಬಹುದು. ಜೀವನದಲ್ಲಿ ಶಿಸ್ತು ಇಲ್ಲದ ವ್ಯಕ್ತಿ ಎಲ್ಲವನ್ನು ಮಾಡಲು ಪ್ರಯತ್ನಿಸುತ್ತಾನೆ. ಆದರೆ, ಯಾವುದಕ್ಕೂ ಬದ್ಧನಾಗಿರುವುದಿಲ್ಲ. ವಿಚಾರವಾದಿಗಳು ಶಿಸ್ತಿನ ಕೊರತೆ ಎಂದರೆ ಸ್ವಾತಂತ್ರ್ಯ ಎಂದು ವ್ಯಾಖ್ಯಾನಿಸುತ್ತಾರೆ.

ಸ್ಥಿರತೆಯ ಕೊರತೆ ಕಳಪೆ ಶಿಸ್ತಿಗೆ ಮೂಲ ಸ್ವಯಂ ನಿಯಂತ್ರಣ, ತ್ಯಾಗ, ಬೇರೆಡೆಗೆ ಲಕ್ಷ್ಯವನ್ನು ಹೊರಳಿಸದಿರುವುದು ಹಾಗೂ ಆಸೆಯ ನಿಗ್ರಹ ಕೇವಲ ಶಿಸ್ತಿನಿಂದ ಮಾತ್ರ ಸಾಧ್ಯ. ಅಂದರೆ, ಸದಾ ಒಂದೆಡೆ ಮಾತ್ರ ದೃಷ್ಟಿಯನ್ನು ನೆಟ್ಟಿರುವುದು.

ಮೊಲ ಹಾಗೂ ಆಮೆಯ ಓಟದ ಸ್ಪರ್ಧೆಯಲ್ಲಿ ಆಮೆಯೇ ಜಯಗಳಿಸಿದ ಕಥೆಯನ್ನು ಎಲ್ಲರೂ ಬಲ್ಲರು. ಸತತ ಪ್ರಯತ್ನಕ್ಕೆ ಶಿಸ್ತು ಅಗತ್ಯ ಹಾಗೂ ಅವ್ಯವಸ್ಥಿತ ಪ್ರಯತ್ನಕ್ಕಿಂತಲೂ ಇದು ಹೆಚ್ಚು ಮೌಲಿಕವಾದದ್ದು.

ಸಾಮಾನ್ಯವಾಗಿ ಮಿತಿಮೀರಿದ ಸ್ವಾತಂತ್ರ್ಯ ಮತ್ತು ಅಶಿಸ್ತಿನ ವಾತಾವರಣದಲ್ಲಿ ಬೆಳೆದ ಮಕ್ಕಳು ಸ್ವತಃ ತಮ್ಮನ್ನು, ತಮ್ಮ ಮಾತಾಪಿತರನ್ನು ಹಾಗೂ ಸಮಾಜವನ್ನು ಅಗೌರವವಾಗಿ ಕಾಣುತ್ತಾರಲ್ಲದೆ, ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವುದರಲ್ಲಿ ವಿಫಲರಾಗುತ್ತಾರೆ. ಪ್ರತಿಯೊಬ್ಬರ ಬದುಕಿನಲ್ಲಿಯೂ ಶಿಸ್ತು, ಪರಿಶ್ರಮ, ಬದ್ಧತೆಯಿಂದ ಮಾತ್ರವೇ ಯಶಸ್ಸು ಕಾಣಲು ಸಾಧ್ಯ.



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ವ್ಯಕ್ತಿಗೆ ಉನ್ನತ ಸ್ವಗೌರವ ಮುಖ್ಯ

**ನ**ಮ್ಮ ಬಗ್ಗೆ ನಾವು ಹೊಂದಿರುವ ಭಾವನೆ ಸ್ವಗೌರವ ಎಂದು ಸರಳವಾಗಿ ಹೇಳಬಹುದು. ಯಶಸ್ಸು ಅಥವಾ ವೈಫಲ್ಯಕ್ಕೆ ನಾವು ನಮ್ಮ ಬಗ್ಗೆ ತಳೆದಿರುವ ಅನಿಸಿಕೆಗಳೇ ಕಾರಣ. ಅತ್ಯುಚ್ಚ ಸ್ವಗೌರವ ಹೊಂದಿರುವ ವ್ಯಕ್ತಿ ಸದಾ ಉತ್ಸುಕನಾಗಿರುತ್ತಾನೆ. ಸಂತೋಷದಿಂದ ಇರುತ್ತಾನೆ. ಉದ್ದೇಶ ಸಹಿತವಾದ ಜೀವನ ನಿರ್ವಹಣೆ ಬಯಸುತ್ತಾನೆ.

ನೀವು ಯೋಗ್ಯರೆಂಬ ಅಭಿಪ್ರಾಯ ಸ್ವತಃ ನಿಮ್ಮ ಮೇಲಿರದಿದ್ದರೆ ನಿಮ್ಮಲ್ಲಿ ಉತ್ತಮ ಸ್ವಗೌರವ ಇರಲಾರದು. ಸ್ವಗೌರವ ನಿಮಗೆ ಆಂತರಿಕ ಚಾಲನಾಶಕ್ತಿಯನ್ನು ನೀಡುವುದು.

ನಾವು ನಮ್ಮ ಬಗೆಗಿನ ಅನಿಸಿಕೆಗಳನ್ನು ನಮಗೆ ಅರಿವಿಲ್ಲದಂತೆಯೇ ಇತರರಿಗೆ ರವಾನಿಸುತ್ತೇವೆ ಹಾಗೂ ಅವರು ಇದಕ್ಕೆ ತಕ್ಕುದಾಗಿ ಸ್ಪಂದಿಸುತ್ತಾರೆ. ಉನ್ನತ ಸ್ವಗೌರವ ಇರುವ ವ್ಯಕ್ತಿ ನಿಷ್ಠನೂ, ಸ್ವಾಭಿಮಾನಿಯೂ ಆಗಿರುತ್ತಾನಲ್ಲದೆ ಹೆಚ್ಚಿನ ಸಾಧನೆಗೆ ಹವಣಿಸುತ್ತಾನೆ. ಆಶಾವಾದಿಯಾಗಿ ಜೀವನವನ್ನು ಎದುರಿಸುತ್ತಾನೆ. ಉತ್ತಮ ಸಂಬಂಧ ಹೊಂದಲು ಬಯಸುತ್ತಾನೆ. ಅಂಥ ಜೀವನಕ್ಕೊಂದು ಸಾರ್ಥಕವಿರುತ್ತದೆ. ಇಂಥ ಭಾವನೆ ಹೊಂದಿದವರು ಆಕಾಂಕ್ಷಿಗಳು ಹಾಗೂ ಅತೀವ ಪ್ರೇರಣೆಯನ್ನು ಹೊಂದಿದವರಾಗಿರುತ್ತಾರೆ. ಅಲ್ಲದೆ, ಅಂತವರು ಸಂವೇದನಾಶೀಲರು ಆಗಿರುತ್ತಾರೆ. ಅವರು ಸಾಧನೆ ಮತ್ತು ಅವಕಾಶಗಳಿಗೆ ತೆರೆದವರಾಗಿರುತ್ತಾರೆ. ಹೊಗಳಿಕೆ ಮತ್ತು ತೆಗಳಿಕೆಯನ್ನು ಸಮಚಿತ್ತದಿಂದ ಸ್ವೀಕರಿಸುತ್ತಾರೆ.

ಯಾವುದು ಒಳ್ಳೆಯದೆಂಬ ಅರಿವು ಹಾಗೂ ಅದನ್ನು ಮಾಡಿದ ಸಮಾಧಾನದಿಂದ ಸಿಗುವ ಭಾವನೆಯೇ ಸ್ವಗೌರವ.



# ವಚನಾಮೃತ

**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಜಯಶಾಲಿಗೆ ಚಾರಿತ್ರ್ಯ ಅತ್ಯಮೂಲ್ಯ

ಬಹುತೇಕ ಮಂದಿ ಯಶಸ್ಸನ್ನು ಇಷ್ಟಪಡುತ್ತಾರೆ. ಆದರೆ, ಯಶಸ್ವಿ ವ್ಯಕ್ತಿಗಳನ್ನು ದ್ವೇಷಿಸುತ್ತಾರೆ ಏಕೆ? ವ್ಯಕ್ತಿಯೊಬ್ಬ ಜೀವನದಲ್ಲಿ ಸ್ವಲ್ಪ ಯಶಸ್ಸನ್ನು ಸಾಧಿಸಿದರೆ ಆತನ ಕಾಲೆಳೆಯಲು ನೂರಾರು ಮಂದಿ ಪ್ರಯತ್ನಿಸುತ್ತಾರೆ.
ಉನ್ನತ ಸ್ಥಾನ ಗಳಿಸಿದ್ದಾನೆಂದರೆ ಆತ ತನ್ನಿಂದ ತಾನೇ ಅಲ್ಲಿಗೆ ಹೋದನೆಂದು ಭಾವಿಸುವುದು ಸರಿಯಲ್ಲ. ಆ ಸ್ಥಾನ ಏರುವುದಕ್ಕೆ ಆತ ಪಟ್ಟ ಶ್ರಮ, ಅನುಭವಿಸಿದ ಕಷ್ಟ ಸಾಮಾನ್ಯವಾಗಿರುವುದಿಲ್ಲ. ಜೀವನ ಸಹ ಇದಕ್ಕಿಂತ ಭಿನ್ನವಲ್ಲ. ಎಲ್ಲ ವೃತ್ತಿಗಳಲ್ಲೂ ಯಶಸ್ವಿ ವ್ಯಕ್ತಿಯನ್ನು ಯಶಸ್ಸು ಸಾಧಿಸದ ಮಂದಿ ದ್ವೇಷಿಸುತ್ತಾರೆ.

ವಿಮರ್ಶಕರು ಯಾವಾಗಲೂ ಏರಿಯ ಮೇಲೆ ಕುಳಿತಿರುತ್ತಾರೆ. ಕೆಳದರ್ಜೆ ಸಾಧಕರಾದ ಇವರು ಕಾರ್ಯನಿರತರಾದವರಿಗೆ ಕೆಲಸವನ್ನು ಹೇಗೆ ಸರಿಯಾಗಿ ಮಾಡಬೇಕು ಎಂಬುದನ್ನು ಕೂಗಿ ಹೇಳುತ್ತಲೇ ಇರುತ್ತಾರೆ. ವಿಮರ್ಶಕರು ಎಂದೂ ನಾಯಕರಾಗಲಿ ಅಥವಾ ಕೆಲಸ ಮಾಡುವವರಾಗಲಿ ಆಗಿರುವುದಿಲ್ಲ.

ಟೀಕೆಯಿಂದ ತಪ್ಪಿಸಿಕೊಳ್ಳಲು ಜನಸಾಮಾನ್ಯರು ಸುರಕ್ಷೆಯ ಮಿತಿಯಲ್ಲೇ ಇದ್ದು ಸಾಮಾನ್ಯರಾಗಿಯೇ ಉಳಿಯುತ್ತಾರೆ. ಹೀಗಾಗಿ ನೀವು ಅದೆಷ್ಟು ಹೆಚ್ಚು ಸಾಧಿಸುತ್ತೀರೋ, ಟೀಕೆಯನ್ನು ಎದುರಿಸುವ ಸಾಧ್ಯತೆಯೂ ಅಷ್ಟೇ ಹೆಚ್ಚುವುದು. ಟೀಕೆ ಯಾರಿಗೇ ಆಗಲಿ ಇಷ್ಟವಾಗುವುದಿಲ್ಲ. ಆದರೆ, ಪ್ರಾಮಾಣಿಕ ಟೀಕೆಗಳಿಂದ ನಾವು ಕಲಿತು ಬೆಳೆಯಬಲ್ಲೆವು. ಟೀಕೆಯಿಂದ ಎದೆಗುಂದದಿರಲು ಚಾರಿತ್ರ್ಯವು ಎಷ್ಟು ಅಗತ್ಯವೋ ಟೀಕೆಯನ್ನು ಕೇಳಿಸಿಕೊಳ್ಳಲೂ ಚಾರಿತ್ರ್ಯ ಅಗತ್ಯ. ಪ್ರಾಮಾಣಿಕ ಟೀಕೆ ಹಾಗೂ ಈರ್ಷ್ಯೆಯಿಂದ ಪ್ರೇರಿತವಾದ ಟೀಕೆಗಳ ನಡುವಣ ವ್ಯತ್ಯಾಸವನ್ನು ಕಂಡುಕೊಳ್ಳುವುದು ಅತ್ಯಗತ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಸರಳತೆ, ಸೌಜನ್ಯ ಮಹೋನ್ನತಿಯ ಪ್ರತೀಕ

ನಮ್ರತೆ ಇಲ್ಲದ ಆತ್ಮವಿಶ್ವಾಸ ದುರಹಂಕಾರಕ್ಕೆ ಎಡೆ ಮಾಡಿಕೊಡುತ್ತದೆ. ನಮ್ರತೆ ಎಲ್ಲ ಚಾರಿತ್ರ್ಯಗಳಿಗೆ ವೇದಿಕೆಯಾಗುತ್ತದೆ. ಅದು ದೊಡ್ಡತನದ ಕುರುಹು. ಅನೇಕ ವರ್ಷಗಳ ಹಿಂದೆ ಕೆಲ ಸೈನಿಕರು ಭಾರಿ ಮರದ ದಿಮ್ಮಿಯೊಂದನ್ನು ಸಾಗಿಸುವ ವಿಫಲ ಯತ್ನ ಮಾಡುತ್ತಿದ್ದರು. ಅದನ್ನು ಕುದುರೆ ಮೇಲೆ ಹೋಗುತ್ತಿದ್ದ ದಾರಿಹೋಕನೊಬ್ಬ ನೋಡಿದ. ಸೈನಿಕರು ಪ್ರಯಾಸ ಪಡುವುದನ್ನು, ಅವರ ಮುಖ್ಯಸ್ಥ ನೋಡುತ್ತ ನಿಂತಿದ್ದ.

'ನೀನೇಕೆ ಸೈನಿಕರಿಗೆ ನೆರವಾಗುತ್ತಿಲ್ಲ?' ಎಂದು ದಾರಿಹೋಕ ಅವನನ್ನು ಕೇಳಿದ. 'ನಾನು ಅವರ ಮುಖ್ಯಸ್ಥ, ಆದೇಶಗಳನ್ನು ಮಾತ್ರ ನೀಡುತ್ತೇನೆ' ಎಂದ.

ಅದನ್ನು ಕೇಳಿದ ದಾರಿಹೋಕ ಕುದುರೆಯಿಂದ ಕೆಳಗಿಳಿದು ಸೈನಿಕರ ಜೊತೆ ಸೇರಿ ದಿಮ್ಮಿ ಸಾಗಿಸಲು ನೆರವಾದ. ಮತ್ತೆ ಕುದುರೆ ಏರಿದ ಆತ ಆ ಮುಖ್ಯಸ್ಥನ ಬಳಿ ಹೋಗಿ 'ಮುಂದೆ ಯಾವತ್ತಾದರೂ ನಿಮ್ಮ ಸೈನಿಕರಿಗೆ ನೆರವಿನ ಅಗತ್ಯವಿದ್ದಾಗ 'ಪ್ರಧಾನ ದಂಡನಾಯಕ'ನಿಗೆ ಬರ ಹೇಳು' ಎಂದು ಹೇಳಿ ಹೊರಟು ಹೋದ. ನಂತರ ಅಲ್ಲಿದ್ದ ಸೈನಿಕರು ಮತ್ತು ಹವಾಲ್ದಾರ್‌ಗೆ ಗೊತ್ತಾದದ್ದು, ಆತ ಬೇರೆ ಯಾರು ಅಲ್ಲ, 'ಜಾರ್ಜ್ ವಾಷಿಂಗ್ಟನ್' ಎಂಬುದು.

ಇದರ ಸಂದೇಶವಿಷ್ಟೇ. ಸರಳತೆ, ನಮ್ರತೆ ಮತ್ತು ಸೌಜನ್ಯ ಮಹೋನ್ನತಿಯ ಪ್ರತೀಕಗಳಾಗಿವೆ. ಸೌಜನ್ಯ ಮತ್ತು ಸನ್ನಡತೆಯಿಂದ ಆತ್ಮತೃಪ್ತಿ ಮಾತ್ರವಲ್ಲದೆ ಅನೇಕ ಪ್ರಯೋಜನಗಳಿವೆ. ಕಠೋರ ಮತ್ತು ಸೌಜನ್ಯರಹಿತ ನಡವಳಿಕೆಯಿಂದ ತಾತ್ಕಾಲಿಕ ಫಲ ಸಿಗಬಹುದಷ್ಟೇ. ಮಕ್ಕಳಿಗೆ ಬಾಲ್ಯದಲ್ಲಿಯೇ ಸೌಜನ್ಯ ಕಲಿಸಬೇಕು. ನಾವು ಸೌಜನ್ಯ ತೋರಿದರೆ ಇತರರೂ ನಮ್ಮೆಡೆಗೆ ಸೌಜನ್ಯ ತೋರುತ್ತಾರೆ. ಇದನ್ನು ಅರಿತಾಗ ಬದುಕು ಹಸನಾಗುತ್ತದೆ.

ಪ್ರಜಾವಾಣಿ



## ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಮಕ್ಕಳ ಆಯ್ಕೆ, ಪಾಲಕರ ಜವಾಬ್ದಾರಿ

ಕಳ್ಳತನ ಮಾಡಿ ಸಿಕ್ಕಿ ಬಿದ್ದ ವ್ಯಕ್ತಿಗೆ ಶಿಕ್ಷೆ ವಿಧಿಸಿದ ನ್ಯಾಯಾಧೀಶರು 'ನಿನ್ನ ಪರವಾಗಿ ಹೇಳುವುದೇನಾದರೂ ಇದ್ದರೆ ಹೇಳಬಹುದು' ಎಂದು ಹೇಳಿದಾಗ ಅದಕ್ಕಾತ 'ನ್ಯಾಯಾಧೀಶರೇ, ನನ್ನ ಜೊತೆಗೆ ನನ್ನ ತಂದೆ ತಾಯಿಗೂ ಶಿಕ್ಷೆ ವಿಧಿಸಿ ಅವರನ್ನು ಜೈಲಿಗೆ ಕಳಿಸಿ' ಎಂದ. ಹಾಗೇಕೆಂದು ನ್ಯಾಯಾಧೀಶರು ಪ್ರಶ್ನಿಸಿದಾಗ ಆತ ಹೇಳಿದ, 'ನಾನು ಚಿಕ್ಕವನಿದ್ದಾಗ ಶಾಲೆಯಲ್ಲಿ ಪೆನ್ಸಿಲ್, ಪೆನ್ ಕದಿಯುತ್ತಿದ್ದೆ. ಗೊತ್ತಿದ್ದೂ ಅವರೇನೂ ಹೇಳಲಿಲ್ಲ. ನನ್ನ ಈ ಕೃತ್ಯವನ್ನು ಅವರು ನಿರ್ಲಕ್ಷಿಸಿದರು. ಬರುಬರುತ್ತಾ ನನಗೆ ಕದಿಯುವುದು ಚಟವಾಯಿತು. ನಾನು ಈ ಪ್ರಮಾಣದಲ್ಲಿ ಕಳ್ಳತನ ಮಾಡಲು ಅವರೇ ಕಾರಣ' ಎಂದ!

ಹೌದು, ಅವನು ಸರಿಯಾಗಿ ಹೇಳಿದ್ದ. ಅವನ ಪಾಲಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದಿದ್ದರಿಂದ ಅವನ ಅಪರಾಧದಲ್ಲಿ ಪಾಲುದಾರರಾದರು. ಹಾಗೆಂದು ಅವರ ಮೇಲೆ ತಪ್ಪು ಹೊರಿಸಿ ಈತ ಪಾರಾಗುವಂತಿಲ್ಲ. ಮಕ್ಕಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುವುದು ಒಳ್ಳೆಯದೇನೋ ಹೌದು. ಆದರೆ, ಸೂಕ್ತ ನಿರ್ದೇಶನವಿಲ್ಲದ ಆಯ್ಕೆ ಗಂಡಾಂತರಕ್ಕೆ ಕಾರಣವಾಗಬಹುದು. ಶಿಸ್ತಿನ ಸಂಕೋಲೆಗಳು ನಮ್ಮನ್ನು ಕೆಳಕ್ಕೆಳೆಯುವುದರ ಬದಲು ನಿಜಕ್ಕೂ ನಮ್ಮನ್ನು ಮೇಲಕ್ಕೆತ್ತುತ್ತವೆ.

ತಂದೆ ಹಾಗೂ ಮಗ ಗಾಳಿಪಟದೊಂದಿಗೆ ಆಡುತ್ತಿದ್ದರು. ಗಾಳಿಪಟ ಮೇಲ ಮೇಲಕ್ಕೆ ಹಾರಲು ಕಾರಣವೇನೆಂದು ಮಗ ತಂದೆಯನ್ನು ಕೇಳಿದ. ಅದಕ್ಕೆ ತಂದೆ, 'ದಾರ' ಎಂದು ಉತ್ತರಿಸಿದ. ತಂದೆಯ ಉತ್ತರದಿಂದ ಸಮಾಧಾನವಾಗದ ಮಗ, 'ಗಾಳಿಪಟ ಹಾರಲು ದಾರ ಹೇಗೆ ಸಹಾಯಕವಾದೀತು? ಗಾಳಿಪಟವನ್ನು ಕೆಳಗೆ ಜಗ್ಗುತ್ತಿರುವುದು ದಾರವೇ ಅಲ್ಲವೇ?' ಎಂದು ಕೇಳಿದ. ಮಗನಿಗೆ ದಾರದ ಮಹತ್ವವನ್ನು ತೋರಿಸಬೇಕೆಂದು ಭಾವಿಸಿದ ತಂದೆ, ಗಾಳಿಪಟದ ದಾರವನ್ನು ಕತ್ತರಿಸಿದ. ದಾರವನ್ನು ತುಂಡರಿಸಿದಾಕ್ಷಣ ಗಾಳಿಪಟ ನೆಲಕ್ಕೆ ಬಿದ್ದಿತು.

ಇದು ಜೀವನದಲ್ಲಿ ಕೂಡ ಸತ್ಯ. ಯಾವುದು ನಮ್ಮನ್ನು ಬಂಧಿಸಿದೆ ಎಂದು ಭಾವಿಸುತ್ತೇವೋ, ಅದೇ ನಮ್ಮ ಹಾರಾಟಕ್ಕೆ ಅನುಕೂಲವಾಗುತ್ತದೆ. ಶಿಸ್ತು ಕೂಡ ಹೀಗೆ.



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ತೊಡಕುಗಳನ್ನು ಸಮರ್ಥವಾಗಿ ಎದುರಿಸಿ ಬಲಿಷ್ಠರಾಗಿ

ಜೀವನವೆಂಬದು ಕೇವಲ ಸುಖ -ಸಂತೋಷಗಳಲ್ಲ. ಇದರಲ್ಲಿ ನೋವು- ಬೇಸರ ಅಡಗಿರುತ್ತವೆ. ಕೆಲವೊಮ್ಮೆ ಯೋಚಿಸಲಾಗದಂತಹ ಪ್ರಸಂಗಗಳು ನಡೆಯುತ್ತವೆ. ಇನ್ನು ಕೆಲವೊಮ್ಮೆ ಎಲ್ಲವೂ ತಿರುವು-ಮುರುವು ಆಗುತ್ತವೆ. ಒಳ್ಳೆಯ ಜನರಿಗೆ ಕೆಡಕಾಗುತ್ತದೆ. ಕೆಲ ಸಂದರ್ಭಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ನಮ್ಮ ಪಾಲಕರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿಲ್ಲ. ಹಾಗೆ ಜನ್ಮದ ಸನ್ನಿವೇಶವನ್ನು ಆಯ್ಕೆ ಮಾಡಿಕೊಳ್ಳಲು ನಮ್ಮಿಂದ ಅಸಾಧ್ಯ.

ಪ್ರಶಾಂತ, ವಿಶಾಲ ಸರೋವರದಲ್ಲಿ ನೂರಾರು ದೋಣಿಗಳು ಬೇರೆ ಬೇರೆ ದಿಕ್ಕುಗಳಲ್ಲಿ ಸಾಗುತ್ತಿರುತ್ತವೆ. ಇದು ಹೇಗೆ ಎಂದರೆ ಗಾಳಿ ಒಂದೇ ದಿಕ್ಕಿಗೆ ಬೀಸುತ್ತಿದ್ದರೂ ದೋಣಿಗಳು ಮಾತ್ರ ಬೇರೆ ಬೇರೆ ದಿಕ್ಕುಗಳಲ್ಲಿ ಸಾಗುತ್ತಿರುತ್ತವೆ. ಕಾರಣ ದೋಣಿಯ ಹಾಯಿ, ಹೇಗೆ ನಿಲ್ಲಿಸಲ್ಪಟ್ಟಿದೆ ಎಂಬುದನ್ನು ಆಧರಿಸಿದೆ. ಇದನ್ನು ತೀರ್ಮಾನಿಸುವವನು ನಾವಿಕ. ಇದು ನಮ್ಮ ಜೀವನಕ್ಕೂ ಅನ್ವಯವಾಗುತ್ತದೆ.

ಸ್ವಾಸ್ಥ್ಯ, ಸಂತೋಷ ಮತ್ತು ಯಶಸ್ಸು ಪ್ರತಿಯೊಬ್ಬರ ಹೋರಾಡುವ ಮನೋಭಾವವನ್ನು ಅವಲಂಬಿಸಿದೆ. ಜೀವನದಲ್ಲಿ ನಮಗೆ ಏನಾಗುತ್ತದೆ ಎಂಬುದು ದೊಡ್ಡ ವಿಷಯವಲ್ಲ. ನಮಗೆ ಏನು ಆಗುತ್ತದೋ ಅದರ ಬಗ್ಗೆ ನಾವೇನು ಮಾಡುತ್ತೇವೆ ಎಂಬುದೇ ಮುಖ್ಯವಾದದ್ದು. ಹಾಗೆಯೇ, ಸನ್ನಿವೇಶವನ್ನು ಆಯ್ದುಕೊಳ್ಳುವುದು ನಮಗೆ ಅಸಾಧ್ಯವಾಗಬಹುದು. ಆದರೆ, ಆಯಾ ಸನ್ನಿವೇಶದಲ್ಲಿ ನಮ್ಮ ಮನೋಭಾವ ಹೇಗಿರಬೇಕೆಂಬುದನ್ನು ನಾವು ನಿರ್ಧರಿಸಬಹುದು. ನೀವು ಜಯಶಾಲಿಯಂತೆ ವರ್ತಿಸಬಹುದು ಅಥವಾ ಬಲಿ ಪಶುವಿನಂತೆ ವರ್ತಿಸಬಹುದು. ಇಲ್ಲಿ ನಮ್ಮ ಸ್ಥಾನಮಾನಕ್ಕಿಂತ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬ ಸಂಗತಿ ನಮ್ಮ ವಿಧಿಯನ್ನು ನಿರ್ಧರಿಸುತ್ತದೆ.

ಕಾಮನಬಿಲ್ಲು ಮೂಡಲು ಮಳೆಯೂ ಬೇಕು, ಬಿಸಿಲು ಬೇಕು. ನಮ್ಮ ಜೀವನ ಸಹ ಇದಕ್ಕಿಂತ ಭಿನ್ನವಾಗಿಲ್ಲ. ಜೀವನದಲ್ಲಿ ಕಷ್ಟ ಹಾಗೂ ಸುಖ ಸಾಮಾನ್ಯ ಮತ್ತು ಅನಿವಾರ್ಯ. ನಮ್ಮ ಜೀವನದಲ್ಲಿ ನಡೆಯುವ ಎಲ್ಲಾ ಸನ್ನಿವೇಶಗಳನ್ನು ನಾವು ನಿಯಂತ್ರಿಸಲಾರೆವು. ಆದರೆ, ಅಂತಹ ಸನ್ನಿವೇಶಗಳಲ್ಲಿ ನಮ್ಮ ನಡವಳಿಕೆ ಹೇಗಿರಬೇಕೆಂಬುದನ್ನು ನಿರ್ಧರಿಸಬಹುದು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಉತ್ಕಟ ಬಯಕೆಯಿದ್ದರೆ ಸಾಧನೆ

**ಹ**ಲವಾರು ನ್ಯೂನತೆ, ಕೊರತೆಗಳಿದ್ದರೂ ಜೀವನದಲ್ಲಿ ಅಪರಿಮಿತ ಸಾಧನೆ ಮಾಡಿ ಯಶಸ್ಸು ಸಾಧಿಸಿದ ಜನರ ಜೀವನಗಾಥೆಯನ್ನು ನೋಡಿದರೆ, ಅವರಲ್ಲಿ ಏನಾದರೂ ಸಾಧಿಸಬೇಕೆಂಬ ಉತ್ಕಟ ಬಯಕೆ, ಹಂಬಲವೇ ಇದಕ್ಕೆ ಕಾರಣವೆಂಬ ಅಂಶ ವೇದ್ಯವಾಗುತ್ತದೆ. ಅವರಿಗೆ ಜೀವನದಲ್ಲೊಂದು ಉದ್ದೇಶವಿತ್ತು. ಎಲ್ಲಾ ಅಡೆತಡೆ, ಕಷ್ಟಕಾರ್ಪಣ್ಯಗಳ ಮಧ್ಯದಲ್ಲಿಯೂ ತಾವೇನಾದರೂ ಸಾಧಿಸಿ ತೋರಿಸಬೇಕೆಂದು ಇವರೆಲ್ಲರೂ ಪಣತೊಟ್ಟಿದ್ದರು. ತಮ್ಮ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಬೇಕೆಂದು ಇವರೆಲ್ಲ ನಿರ್ಧರಿಸಿದ್ದರು. ಕೊನೆಗೆ ಅಂದುಕೊಂಡಿದ್ದನ್ನು ಮಾಡಿ ತೋರಿಸಿದರು.

ಮನುಷ್ಯನಿಗೆ ಅದಮ್ಯ ಆಕಾಂಕ್ಷೆ ಹಾಗೂ ಉತ್ಕಟ ಬಯಕೆಗಳಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ವಿಲ್ಮಾ ರುಡಾಲ್ಫ್ ಉತ್ತಮ ನಿದರ್ಶನ. ವಿಲ್ಮಾ ಪಾರ್ಶ್ವಾಯುವಿನಿಂದ ಬಾಧಿತಳಾಗಿದ್ದಳು. ಹಂಬಲ, ಆಸೆಗಳು ಆಕೆಯನ್ನು ಎಂಥ ಎತ್ತರಕ್ಕೆ ಒಯ್ದವೆಂದರೆ ವಿಲ್ಮಾ 1960ರ ಒಲಂಪಿಕ್ಸ್ ಸ್ಪರ್ಧೆಯಲ್ಲಿ ವೇಗದ ಓಟಕ್ಕೆ ಮೂರು ಚಿನ್ನದ ಪದಕಗಳನ್ನು ಪಡೆದಳು.

ತನ್ನ ಐದನೇ ವಯಸ್ಸಿನಲ್ಲಿ ಪೋಲಿಯೋ ಪೀಡಿತಳೊಬ್ಬಳು ಈಜುಕೊಳಕ್ಕೆ ಧುಮುಕಿದಳು. ಆಕೆಗೆ ಈಜು ಸ್ಪರ್ಧೆಯಲ್ಲಿ ಮಹಾನ್ ಸಾಧನೆ ಮಾಡುವ ಹಂಬಲವಿತ್ತು. ಸತತ ಪರಿಶ್ರಮ, ಶ್ರದ್ಧೆ, ಪ್ರಯತ್ನಗಳ ಫಲವಾಗಿ ಆಕೆ 3 ಸ್ಪರ್ಧೆಗಳಲ್ಲಿ ವಿಶ್ವ ದಾಖಲೆ ಮಾಡಿದಳಲ್ಲದೆ, 1956ರ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಳು. ಆಕೆಯ ಹೆಸರು ಷೆಲ್ಲಿಮ್ಯಾನ್!

ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಆಸೆ ಇರುವ ವ್ಯಕ್ತಿ ತನ್ನ ಮಾರ್ಗ ಯಾವುದೆಂಬುದನ್ನು ಕಂಡುಕೊಂಡು, ಪರಿಶ್ರಮದಿಂದ ದುಡಿಯುತ್ತಾ, ಕಾರ್ಯದಲ್ಲಿ ಶಿಸ್ತು, ಶ್ರದ್ಧೆಯನ್ನು ರೂಢಿಸಿಕೊಂಡರೆ, ಯಶಸ್ಸು ತಾನಾಗಿ ಬರುವುದು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ವೈಫಲ್ಯಗಳನ್ನು ಗುರುವಾಗಿ ಸ್ವೀಕರಿಸಿ

ಇತಿಹಾಸದಿಂದ ಪಾಠ ಕಲಿಯದ ಜನರು ಸಂಕಟಕ್ಕೆ ಸಿಲುಕುತ್ತಾರೆ. ನಾವು ಸರಿಯಾದ ಮನೋಭಾವ ಹೊಂದಿದವರಾಗಿದ್ದರೆ ನಮ್ಮ ವೈಫಲ್ಯಗಳನ್ನು ಗುರುವಾಗಿ ಕಾಣುತ್ತೇವೆ. ವೈಫಲ್ಯವೆಂಬುದು ಬಳಸು ಹಾದಿ ಇರಬಹುದೇ ಹೊರತು, ಅದು ಕೊನೆ ಅಲ್ಲ. ವೈಫಲ್ಯ ವಿಳಂಬವಿರಬಹುದೇ ಹೊರತು, ಸಂಪೂರ್ಣ ಸೋಲಲ್ಲ.

ನಮ್ಮ ತಪ್ಪುಗಳಿಗೆ ನಾವು ಇಡುವ ಹೆಸರು ಅನುಭವ. ಕೆಲವು ಮಂದಿ ಕಲಿಯುತ್ತಾರೆ ಮತ್ತು ಬದುಕುತ್ತಾರೆ. ಇನ್ನು ಕೆಲವರು ಕೇವಲ ಬದುಕುತ್ತಾರೆ. ಬುದ್ಧಿವಂತರಾದವರು ತಮ್ಮ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಇನ್ನು ಹೆಚ್ಚು ಬುದ್ಧಿವಂತರಾದವರು ಬೇರೆಯವರ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಕೇವಲ ನಮ್ಮ ತಪ್ಪುಗಳಿಂದ ಮಾತ್ರ ಪಾಠ ಕಲಿಯುವಷ್ಟು ನಮ್ಮ ಜೀವನ ದೀರ್ಘವಾಗಿಲ್ಲ.

ಮಂಗಗಳನ್ನು ಹಿಡಿಯುವವರು ಒಂದು ರೀತಿಯ ಪೆಟ್ಟಿಗೆಯನ್ನು ಬಳಸುತ್ತಾರೆ. ಅದರ ಮೇಲ್ಭಾಗದಲ್ಲಿ ಕಿಂಡಿಯೊಂದಿದ್ದು ಮಂಗ ತನ್ನ ಕೈಯನ್ನು ತೂರಿಸುವಷ್ಟು ಮಾತ್ರ ದೊಡ್ಡದಾಗಿರುತ್ತದೆ. ಈ ಪೆಟ್ಟಿಗೆಯೊಳಗೆ ತಿಂಡಿಯನ್ನು ಇಟ್ಟಿರಲಾಗುತ್ತದೆ. ಮಂಗ ತಿಂಡಿಯನ್ನು ಬಾಚಿಕೊಳ್ಳಲು ಹೋಗಿ ಸಿಕ್ಕಿಹಾಕಿಕೊಂಡು ಬಿಡುತ್ತದೆ.

ನಾವು ಮಂಗನಿಗಿಂತ ಭಿನ್ನರೇನಲ್ಲ. ನಾವು ನಮ್ಮ ಜೀವನದಲ್ಲಿ ಮಂಗನ ಹಾಗೆ ಈ ತಿಂಡಿ ಆಸೆಗೆ ಕೈ ಹಾಕಿ ಪೇಚಿಗೆ ಸಿಲುಕಿ ಕೊಳ್ಳುತ್ತೇವೆ. ಜೀವನದಲ್ಲಿ ಮುಂದಕ್ಕೆ ಹೋಗುವ ಅವಕಾಶದಿಂದ ವಂಚಿತರಾಗುತ್ತೇವೆ. ಇದಕ್ಕೆ ನಮ್ಮದೇ ಕಾರಣಗಳನ್ನು ಕೊಡುತ್ತ ಸಮಾಧಾನ ಪಟ್ಟುಕೊಳ್ಳುತ್ತೇವೆ. ಹೀಗಾಗಿದ್ದರೆ ಹಾಗಾಗುತ್ತಿತ್ತು ಎಂಬ ಸಬೂಬು ನೀಡುತ್ತೇವೆ. ಜೀವನದಲ್ಲಿ ಯಶಸ್ವಿಯಾದವನು ಎಂದೂ ಸಬೂಬು ಹೇಳುವುದಿಲ್ಲ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಸಕಾರಾತ್ಮಕ ಹವ್ಯಾಸದಿಂದ ಸುಖ ಜೀವನಕ್ಕೆ ದಾರಿ

ನಮ್ಮ ವಯಸ್ಸು ಮತ್ತು ಅಭ್ಯಾಸದ ಅವಧಿ ಎಷ್ಟೇ ದೀರ್ಘವಾಗಿದ್ದರೂ ಬದಲಾಗುವ ಸಮಯ ಎಂದೂ ಮೀರಿರುವುದಿಲ್ಲ. ಯಾವುದನ್ನು ಬದಲಾಯಿಸಬೇಕು ಎಂಬುದನ್ನು ಅರಿತುಕೊಂಡು, ಸೂಕ್ತ ವಿಧಾನಗಳನ್ನು ಬಳಸಿ ನಾವು ಬದಲಾಗಬಹುದು. ಆತ್ಮಘಾತುಕ ವರ್ತನೆಯನ್ನು ಕೈ ಬಿಟ್ಟು ಸಕಾರಾತ್ಮಕ ವರ್ತನೆಯನ್ನು ಮೈಗೂಡಿಸಿಕೊಳ್ಳುವ ಶಕ್ತಿ ಪ್ರತಿಯೊಬ್ಬರಲ್ಲೂ ಇದೆ.

ವಿಫಲರಾಗುವ ವ್ಯಕ್ತಿಗಳು ಯಾವ ಕಾರ್ಯವನ್ನು ಮಾಡಲು ಇಷ್ಟಪಡುವುದಿಲ್ಲವೋ ಅಥವಾ ಮಾಡುವುದಿಲ್ಲವೋ ಆ ಕಾರ್ಯಗಳನ್ನು ಮಾಡುವ ಅಭ್ಯಾಸಗಳನ್ನು ರೂಢಿಸಿಕೊಂಡಿರುವುದೇ ಯಶಸ್ವಿ ವ್ಯಕ್ತಿಗಳ ಸಾಧನೆ ಹಿಂದಿರುವ ಗುಟ್ಟು. ಸ್ವಲ್ಪ ಯೋಚಿಸಿ ನೋಡಿ, ಅದೇ ಕಾರ್ಯಗಳನ್ನು ಯಶಸ್ವಿ ವ್ಯಕ್ತಿಗಳು ಕೂಡ ಮಾಡಲು ಇಷ್ಟಪಡುವುದಿಲ್ಲ. ಆದರೂ ಮಾಡುತ್ತಾರೆ.

ಎಲ್ಲ ಅಭ್ಯಾಸಗಳು ಒಂದು ಪುಟ್ಟ ಎಳೆಯ ರೀತಿ ಆರಂಭವಾಗುತ್ತವೆ. ಆದರೆ, ಅಂತಿಮವಾಗಿ ನಿಲ್ಲಿಸಲಾರದಷ್ಟು ಅಗಾಧ ರೂಪ ಪಡೆಯುತ್ತವೆ. ಆದರೆ, ಮನೋಭಾವ ಅಭ್ಯಾಸವಾಗಿದ್ದು, ಅದನ್ನು ಬದಲಿಸಿಕೊಳ್ಳಬಹುದು. ಇದು ಹಳೆಯ ಅಭ್ಯಾಸಗಳನ್ನು ತೊರೆದು ಹೊಸ ಹಾಗೂ ಸಕಾರಾತ್ಮಕ ಅಭ್ಯಾಸಗಳನ್ನು ಕಲಿಯುವುದಾಗಿದೆ. ಕೆಟ್ಟ ಹವ್ಯಾಸಗಳನ್ನು ನಿಯಂತ್ರಿಸುವುದು ಅವುಗಳಿಂದ ಹೊರಬರುವುದಕ್ಕಿಂತ ಸುಲಭ. ಪ್ರಲೋಭನಗಳಿಂದ ಹೊರ ಬಂದಾಗ ಒಳ್ಳೆಯ ಹವ್ಯಾಸಗಳು ರೂಢಿಯಾಗುತ್ತವೆ. ಒಳ್ಳೆಯ ಹವ್ಯಾಸಗಳು ಅಥವಾ ಸಕಾರಾತ್ಮಕ ಹವ್ಯಾಸಗಳು ಸುಖ ಜೀವನಕ್ಕೆ ದಾರಿಯಾಗಿವೆ. ಬದಲಾಗುವುದನ್ನು ಆರಂಭಿಸಲು ಸಮಯ ಎಂದಿಗೂ ಮೀರಿರುವುದಿಲ್ಲ.

ಪ್ರತಿಯೊಂದು ನಕಾರಾತ್ಮಕ ಅಥವಾ ಸಕಾರಾತ್ಮಕತೆಗಳೂ ವ್ಯತ್ಯಾಸಗಳನ್ನು ತರುತ್ತವೆ. ನೂತನ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಆದರೆ, ಒಮ್ಮೆ ನೀವು ಸಕಾರಾತ್ಮಕ ಅಭ್ಯಾಸಗಳನ್ನು ಕರಗತ ಮಾಡಿಕೊಂಡರೆ ಅವು ನಿಮ್ಮ ಜೀವನಕ್ಕೆ ಹೊಸ ಅರ್ಥವನ್ನು ನೀಡುತ್ತವೆ.



# ವಚನಾಮೃತ

**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ವ್ಯಕ್ತಿಗೆ ಉನ್ನತ ಸ್ವಗೌರವ ಮುಖ್ಯ

**ನಮ್ಮ** ಬಗ್ಗೆ ನಾವು ಹೊಂದಿರುವ ಭಾವನೆ ಸ್ವಗೌರವ ಎಂದು ಸರಳವಾಗಿ ಹೇಳಬಹುದು. ಯಶಸ್ಸು ಅಥವಾ ವೈಫಲ್ಯಕ್ಕೆ ನಾವು ನಮ್ಮ ಬಗ್ಗೆ ತಳೆದಿರುವ ಅನಿಸಿಕೆಗಳೇ ಕಾರಣ. ಅತ್ಯುಚ್ಚ ಸ್ವಗೌರವ ಹೊಂದಿರುವ ವ್ಯಕ್ತಿ ಸದಾ ಉತ್ಸುಕನಾಗಿರುತ್ತಾನೆ. ಸಂತೋಷದಿಂದ ಇರುತ್ತಾನೆ. ಉದ್ದೇಶ ಸಹಿತವಾದ ಜೀವನ ನಿರ್ವಹಣೆ ಬಯಸುತ್ತಾನೆ.

ನೀವು ಯೋಗ್ಯರೆಂಬ ಅಭಿಪ್ರಾಯ ಸ್ವತಃ ನಿಮ್ಮ ಮೇಲಿರದಿದ್ದರೆ ನಿಮ್ಮಲ್ಲಿ ಉತ್ತಮ ಸ್ವಗೌರವ ಇರಲಾರದು. ಸ್ವಗೌರವ ನಿಮಗೆ ಆಂತರಿಕ ಚಾಲನಾಶಕ್ತಿಯನ್ನು ನೀಡುವುದು.

ನಾವು ನಮ್ಮ ಬಗೆಗಿನ ಅನಿಸಿಕೆಗಳನ್ನು ನಮಗೆ ಅರಿವಿಲ್ಲದಂತೆಯೇ ಇತರರಿಗೆ ರವಾನಿಸುತ್ತೇವೆ ಹಾಗೂ ಅವರು ಇದಕ್ಕೆ ತಕ್ಕುದಾಗಿ ಸ್ಪಂದಿಸುತ್ತಾರೆ. ಉನ್ನತ ಸ್ವಗೌರವ ಇರುವ ವ್ಯಕ್ತಿ ನಿಷ್ಠನೂ, ಸ್ವಾಭಿಮಾನಿಯೂ ಆಗಿರುತ್ತಾನಲ್ಲದೆ ಹೆಚ್ಚಿನ ಸಾಧನೆಗೆ ಹವಣಿಸುತ್ತಾನೆ. ಆಶಾವಾದಿಯಾಗಿ ಜೀವನವನ್ನು ಎದುರಿಸುತ್ತಾನೆ. ಉತ್ತಮ ಸಂಬಂಧ ಹೊಂದಲು ಬಯಸುತ್ತಾನೆ. ಅಂಥ ಜೀವನಕ್ಕೊಂದು ಸಾರ್ಥಕವಿರುತ್ತದೆ. ಇಂಥ ಭಾವನೆ ಹೊಂದಿದವರು ಆಕಾಂಕ್ಷಿಗಳು ಹಾಗೂ ಅತೀವ ಪ್ರೇರಣೆಯನ್ನು ಹೊಂದಿದವರಾಗಿರುತ್ತಾರೆ. ಅಲ್ಲದೆ, ಅಂತವರು ಸಂವೇದನಾಶೀಲರು ಆಗಿರುತ್ತಾರೆ. ಅವರು ಸಾಧನೆ ಮತ್ತು ಅವಕಾಶಗಳಿಗೆ ತೆರೆದವರಾಗಿರುತ್ತಾರೆ. ಹೊಗಳಿಕೆ ಮತ್ತು ತೆಗಳಿಕೆಯನ್ನು ಸಮಚಿತ್ತದಿಂದ ಸ್ವೀಕರಿಸುತ್ತಾರೆ.

ಯಾವುದು ಒಳ್ಳೆಯದೆಂಬ ಅರಿವು ಹಾಗೂ ಅದನ್ನು ಮಾಡಿದ ಸಮಾಧಾನದಿಂದ ಸಿಗುವ ಭಾವನೆಯೇ ಸ್ವಗೌರವ. ❖

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಯಶಸ್ಸಿನ ದಾರಿಯಲ್ಲಿ ಅಪಾಯ ಅನಿವಾರ್ಯ

ಯಶಸ್ಸಿನಲ್ಲಿ ಸ್ವಲ್ಪ ಪ್ರಮಾಣದ ಸವಾಲು, ಅಪಾಯವೂ ಒಳಗೊಂಡಿರುತ್ತದೆ. ಅಪಾಯ ಎದುರಿಸುವುದೆಂದರೆ ಮೂರ್ಖತನದಿಂದ ಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳುವುದಲ್ಲ. ಬೇಜವಾಬ್ದಾರಿಯಿಂದ ವರ್ತಿಸುವುದಲ್ಲ. ಅಪಾಯವನ್ನು ಎದುರಿಸುವುದೆಂದರೆ ಹೊಣೆಗೇಡಿತನದಿಂದ ನಡೆದುಕೊಳ್ಳುವುದೆಂದು ಅನೇಕ ಮಂದಿ ತಪ್ಪಾಗಿ ಭಾವಿಸುತ್ತಾರೆ. ಇಂಥವರಿಗೆ ಸೋಲು ಖಚಿತ. ಇಂಥವರು ಯಾವತ್ತೂ ಅದೃಷ್ಟವನ್ನು ದೂಷಿಸುತ್ತಾರೆ.

ತರಬೇತಿ ಪಡೆದ ಪರ್ವತಾರೋಹಿಗೂ, ತರಬೇತಿ ಪಡೆಯದವರಿಗೂ ಪರ್ವತಾರೋಹಣ ಅಪಾಯದ ಕೆಲಸ. ಆದರೆ, ತರಬೇತಿ ಪಡೆದವನಿಗೆ ಇದು ಬೇಜವಾಬ್ದಾರಿಯತವಾದ ಸವಾಲಲ್ಲ. ಜವಾಬ್ದಾರಿಯುತ ಅಪಾಯ ಸ್ವೀಕಾರವು, ಜ್ಞಾನ, ತರಬೇತಿ, ಕಾಳಜಿಪೂರ್ವಕ ಅಧ್ಯಯನ, ಆತ್ಮವಿಶ್ವಾಸ ಹಾಗೂ ಸಾಮರ್ಥ್ಯವನ್ನು ಆಧರಿಸುತ್ತದೆ.

ಅಪಾಯವನ್ನು ಎದುರಿಸುವಾಗ ಇವು ವ್ಯಕ್ತಿಗೆ ಧೈರ್ಯವನ್ನು ನೀಡುತ್ತವೆ. ಏನನ್ನೂ ಮಾಡದ ವ್ಯಕ್ತಿ ತಪ್ಪುಗಳನ್ನು ಮಾಡುವುದಿಲ್ಲ. ಆದರೆ, ಏನನ್ನೂ ಮಾಡದಿರುವುದು ತಪ್ಪು ಮಾಡಿ ಸೋಲುವುದಕ್ಕಿಂತಲೂ ದೊಡ್ಡ ತಪ್ಪು.

ಅಪಾಯವನ್ನು ಸ್ವೀಕರಿಸುವವರು ತಮ್ಮ ಕಣ್ಣುಗಳನ್ನು ತೆರೆದುಕೊಂಡೇ ನಡೆಯುತ್ತಾರೆ. ಜೂಜಾಡುವವರು ಕತ್ತಲೆಯಲ್ಲಿ ಗುಂಡು ಹಾರಿಸುತ್ತಾರೆ.

ಒಮ್ಮೆ ಒಬ್ಬ ರೈತನ ಬಳಿ ಯಾರೋ ಕೇಳಿದರು, ಈ ಸಲ ಗೋಧಿಯನ್ನು ಬಿತ್ತಿದ್ದೀರಾ? ಎಂದು ಅದಕ್ಕೆ 'ಇಲ್ಲ, ಈ ಸಲ ಮಳೆ ಬರಲಿಕ್ಕಿಲ್ಲವೆಂದು ಭಾವಿಸಿ ಗೋಧಿ ಬಿತ್ತಲಿಲ್ಲ' ಎಂದ. ಹಾಗಾದರೆ, ಜೋಳವನ್ನು ಬಿತ್ತಿದ್ದೀರಾ? ಎಂದು ಕೇಳಿದಾಗ 'ಕೀಟ ಬಾಧೆಯ ಭಯದಿಂದ ಅದನ್ನೂ ಬಿತ್ತಿಲ್ಲ' ಎಂದ ರೈತ.

ಅದೇನೋ ಸರಿ, ಹಾಗಾದ್ರೆ ಮತ್ತೇನನ್ನು ಬಿತ್ತಿದ್ದೀರಿ? ಎಂದು ಕೇಳಿದ್ದಕ್ಕೆ 'ನಾನು ಯಾವುದೇ ಅಸುರಕ್ಷತೆಯನ್ನೂ ಎದುರಿಸಲು ಇಷ್ಟಪಡದೆ ಸುಮ್ಮನಿದ್ದೇನೆ' ಎಂದು ರೈತ ಹೇಳಿದ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಸಕಾರಾತ್ಮಕ ಪ್ರೇರಣೆಯಿಂದ ಸುಖ

**ನಮ್ಮ** ಜೀವನದಲ್ಲಿ ಪ್ರೇರಣೆ ಎಂಬುದು ಚಾಲಕ ಶಕ್ತಿ. ಇದಕ್ಕೆ ಮನವೊಲಿಸುವ ಸಮಾಧಾನ ಪಡಿಸುವ ಮತ್ತು ಉತ್ತೇಜಿಸುವ ಸಾಮರ್ಥ್ಯವಿದೆ. ಇನ್ನೊಂದು ಅರ್ಥದಲ್ಲಿ ಪ್ರೇರಣೆ ಎಂದರೆ ಕ್ರಿಯೆಯನ್ನು ಮುನ್ನಡೆಸಲು ಅನುಕೂಲವಾಗುವ ಸಂಗತಿ. ಇದು ನಮ್ಮ ಜೀವನದ ಗತಿಯನ್ನೇ ಬದಲಿಸಬಲ್ಲ ಶಕ್ತಿಯಾಗಿದೆ. ಕ್ರಿಯೆ ಅಥವಾ ಭಾವನೆಯನ್ನು ಉದ್ದೀಪನಗೊಳಿಸುವ ಸಂಗತಿಯೇ ಪ್ರೇರಣೆ. ಉತ್ತೇಜನ ಮತ್ತು ಸ್ಫೂರ್ತಿಯೇ ಪ್ರೇರಣೆ.

ಒಂದೇ ಮನೆಯಲ್ಲಿ ಹುಟ್ಟಿ ಬೆಳೆದ ಅಣ್ಣತಮ್ಮಂದಿರ ಸ್ಥಿತಿಯಲ್ಲಿ ಬಹಳಷ್ಟು ಅಂತರವಿದ್ದದ್ದು ನಿಜಕ್ಕೂ ಆಶ್ಚರ್ಯಕರವಾದ ಸಂಗತಿ. ಒಬ್ಬ ಸದಾ ಮನೆ ಮಂದಿಗೆಲ್ಲ ಹೊಡೆಯುವ ಕುಡುಕ ಹಾಗೂ ವ್ಯಸನಿ ಮತ್ತು ಇನ್ನೊಬ್ಬ ಒಳ್ಳೆಯ ರೀತಿಯಿಂದ ಸಂಸಾರ ನಡೆಸುತ್ತಿರುವ, ಗೌರವಾನ್ವಿತ ವ್ಯಾಪಾರಿ.

ಮೊದಲನೆಯವನನ್ನು ಯಾರೋ ಕೇಳಿದರು.'ನೀನೇಕೆ ಕುಡುಕ? ಹೆಂಡತಿ -ಮಕ್ಕಳಿಗೆ ಹೊಡೆಯುತ್ತೀಯ? ಹೀಗೆ ಮಾಡಲು ನಿನಗೆ ಪ್ರೇರಣೆ ಏನು?'ಅದಕ್ಕೆ ಆತ ಹೇಳಿದ. 'ನನ್ನ ತಂದೆ. ಆತ ಕುಡುಕನಾಗಿದ್ದ, ಮಾದಕ ದ್ರವ್ಯ ವ್ಯಸನಿಯಾಗಿದ್ದ. ತನ್ನ ಹೆಂಡತಿಗೆ ಹೊಡೆಯುತ್ತಿದ್ದ. ಹೀಗಿದ್ದಾಗ ನಾನೇನು ಮಾಡಬಲ್ಲೆ? ಇದಕ್ಕೆಲ್ಲ ನನಗೆ ನನ್ನ ತಂದೆಯೇ ಪ್ರೇರಣೆ'.

ಎರಡನೆಯವನಿಗೆ ಕೂಡ ಇದೇ ಪ್ರಶ್ನೆಗಳನ್ನು ಯಾರೋ ಕೇಳಿದರು. 'ನೀನು ಹೇಗೆ ಜೀವನದಲ್ಲಿ ಯಶಸ್ವಿಯಾಗಿ ಉತ್ತಮವಾದ ಜೀವನ ನಡೆಸುತ್ತಿದ್ದೀಯ? ನಿನಗೆ ಪ್ರೇರಣೆಯ ಮೂಲ ಯಾವುದು?' ಅದಕ್ಕೆ ಎರಡನೆಯವ ಹೇಳಿದ. 'ನನ್ನ ತಂದೆ. ನಾನು ಸಣ್ಣವನಿದ್ದಾಗ, ನನ್ನ ತಂದೆ ಕುಡಿದು ಬಂದು ಮನೆಯಲ್ಲಿ ರಂಪ ಮಾಡಿ ತಾಯಿಗೆ ಹಾಗೂ ನಮ್ಮೆಲ್ಲರಿಗೂ ಹೊಡೆಯುತ್ತಿದ್ದ. ಇದನ್ನು ಕಂಡು ನನ್ನ ಮನಸ್ಸು ರೋಸಿ ಹೋಯಿತು. ಜೀವನದಲ್ಲಿ ಎಂದೂ ನನ್ನ ತಂದೆಯಂತೆ ಆಗಬಾರದೆಂದು ನಿರ್ಧರಿಸಿದೆ'.

ಇಬ್ಬರಿಗೂ ಒಂದೇ ಮೂಲ, ಒಂದೇ ಪ್ರೇರಣೆ. ಅವರಿಬ್ಬರ ಇಂದಿನ ಸ್ಥಿತಿಗೆ ಪ್ರೇರಣೆ ಒಂದೇ. ಆದರೆ ಒಬ್ಬಾತ ಪ್ರೇರಣೆಯನ್ನು ನಕಾರಾತ್ಮಕವಾಗಿ ಬಳಸಿಕೊಂಡ ಹಾಗೂ ಇನ್ನೊಬ್ಬ ಸಕಾರಾತ್ಮಕವಾಗಿ ಬಳಸಿಕೊಂಡ. ನಕಾರಾತ್ಮಕ ಪ್ರೇರಣೆ ಸುಲಭವಾದ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಅನಂತರ ಕಷ್ಟದಲ್ಲಿ ತಂದು ನಿಲ್ಲಿಸುತ್ತದೆ. ಸಕಾರಾತ್ಮಕ ಪ್ರೇರಣೆ ಕಷ್ಟದ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಅನಂತರ ಸುಖದಲ್ಲಿ ತಂದು ನಿಲ್ಲಿಸುತ್ತದೆ.

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಆಶೀರ್ವಾದಗಳನ್ನಷ್ಟೇ ಎಣಿಸಿ...

**ನಮಗೆ** ಭಗವಂತ ನೀಡಿರುವ ಆಶೀರ್ವಾದ ಅಥವಾ ಅನುಗ್ರಹಗಳನ್ನು ಎಣಿಸಬೇಕೇ ಹೊರತು ಕಷ್ಟವನ್ನಲ್ಲ. ಆದರೆ ನಮ್ಮಲ್ಲಿರದ ಸಂಗತಿಗಳ ಬಗ್ಗೆ ಕೊರಗುವುದರಲ್ಲಿ ಎಷ್ಟು ತಲ್ಲೀನರಾಗಿರುತ್ತೇವೆ ಎಂದರೆ, ನಮ್ಮಲ್ಲಿರುವುದಕ್ಕೆ ನಾವು ಕೃತಜ್ಞರಾಗಿರಬೇಕಾದಂತಹ ಅನೇಕ ಸಂಗತಿಗಳು ನಮಗೆ ಕಾಣುವುದೇ ಇಲ್ಲ. ಅನೇಕ ಉತ್ತಮ ಸಂಗತಿಗಳು ನಮ್ಮಲ್ಲಿವೆ ಎಂದು ಅರಿತುಕೊಳ್ಳಬೇಕು.

ನಮಗೆ ಬೇಕಿದ್ದನ್ನು ಮಾತ್ರ ಗ್ರಹಿಸುವ ಅಥವಾ ಕೇಳಿಸಿಕೊಳ್ಳುವ ಪ್ರವೃತ್ತಿಯ ಒಂದು ನಿದರ್ಶನ ಕೊಡುತ್ತೇನೆ. ಕುಡಿತದ ಚಟದ ಕುರಿತು ವೈದ್ಯರೊಬ್ಬರ ಉಪನ್ಯಾಸದ ಸಂದರ್ಭ ಇದು. ಹೆಂಡ ಎಷ್ಟು ಹಾನಿಕಾರಕ ಎಂಬುದನ್ನು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಕೊಡಲು ಅವರು ಒಂದು ಪ್ರಯೋಗವನ್ನು ಮಾಡುತ್ತಾರೆ.

ಒಂದು ಗಾಜಿನ ಪಾತ್ರೆಯಲ್ಲಿ ತಿಳಿ ನೀರು ಹಾಗೂ ಇನ್ನೊಂದು ಗಾಜಿನ ಪಾತ್ರೆಯಲ್ಲಿ ಹೆಂಡವನ್ನು ಹಾಕಿ ಎರೆಹುಳುವನ್ನು ತಿಳಿ ನೀರಿನ ಪಾತ್ರೆಗೆ ಹಾಕುತ್ತಾರೆ. ಅದು ನೀರಿನಲ್ಲಿ ಸುಲಭವಾಗಿ ಪಾತ್ರೆಯಿಂದ ಹೊರಬರುತ್ತದೆ. ಇನ್ನೊಂದು ಎರೆ ಹುಳವನ್ನು ಹೆಂಡ ತುಂಬಿದ ಗಾಜಿನ ಪಾತ್ರೆಯಲ್ಲಿ ಹಾಕುತ್ತಾರೆ. ಅದು ಹೆಂಡದಲ್ಲಿ ಕರಗಿ ಹೋಗುತ್ತದೆ. ನಮ್ಮ ದೇಹದೊಳಗೂ ಹೆಂಡ ಇದೇ ಪರಿಣಾಮ ಉಂಟುಮಾಡುತ್ತದೆಂದು ತಿಳಿಸಲು ವೈದ್ಯರು ಈ ಪ್ರಯೋಗ ಮಾಡಿದ್ದರು.

ಈ ಕಥೆಯ ನೀತಿ ಏನೆಂದು ತಿಳಿಸುವಂತೆ ಅವರು ಸಭಿಕರನ್ನು ಕೇಳಿದಾಗ ಒಬ್ಬಾತ, 'ಹೆಂಡ ಕುಡಿದರೆ ನನ್ನ ಹೊಟ್ಟೆಯೊಳಗೆ ಜಂತುಹುಳು ಇರುವುದಿಲ್ಲ' ಎಂದ. ಇದು ನಮಗೆ ಬೇಕಿದ್ದನ್ನು ಮಾತ್ರ ಕೇಳಿಸಿಕೊಳ್ಳುವುದು. ಅಂದರೆ, ಏನನ್ನು ಹೇಳಿದ್ದಾರೆ ಎಂಬುದನ್ನು ಕೇಳಿಸಿಕೊಳ್ಳುವುದಲ್ಲ.

ನಮ್ಮ ಬಹುತೇಕ ಆಶೀರ್ವಾದಗಳು ಹುದುಗಿರುವ ಸಂಪತ್ತುಗಳಂತೆ. ಅದಕ್ಕಾಗಿಯೇ ಹೇಳಿದ್ದು, ನಿಮ್ಮ ಆಶೀರ್ವಾದ, ಅನುಗ್ರಹಗಳನ್ನು ಎಣಿಸಬೇಕೇ ಹೊರತು, ಕಷ್ಟಗಳನ್ನಲ್ಲ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಗೆಲುವಿಗೆ ಬೇಕು ಆಕರ್ಷಕ ವ್ಯಕ್ತಿತ್ವ

**ಜೀವನದಲ್ಲಿ** ಬರುವ ಸಮಸ್ಯೆಗಳಲ್ಲಿ ಹೆಚ್ಚಿನ ಅಂಶ ವ್ಯಕ್ತಿಗತ ಸಮಸ್ಯೆಗಳೇ. ನಾವು ವ್ಯಕ್ತಿಗತ ಸಮಸ್ಯೆಗಳನ್ನು ಪರಿಹರಿಸಿದರೆ, ವ್ಯವಹಾರ ಸಂಬಂಧಿ ಸಮಸ್ಯೆಗಳೇ ಇರುವುದಿಲ್ಲ.

ವಸ್ತುವಿನ ಜ್ಞಾನಕ್ಕಿಂತ ವ್ಯಕ್ತಿಗತ ಜ್ಞಾನ ಬಹಳ ಮುಖ್ಯ. ಯಶಸ್ವಿ ವ್ಯಕ್ತಿಗಳು ಆಕರ್ಷಕ ಹಾಗೂ ಪ್ರಿಯಕರ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. ಇಂಥವರಿಗೆ ಬೇರೆಯವರು ಸ್ನೇಹಯುತವಾದ ಸಹಕಾರವನ್ನು ನೀಡಲು ಮುಂದಾಗುತ್ತಾರೆ.

ಆಕರ್ಷಕ ಹಾಗೂ ಪ್ರಿಯವಾಗುವ ವ್ಯಕ್ತಿತ್ವವನ್ನು ಸುಲಭವಾಗಿ ಗುರುತಿಸಬಹುದು. ಆದರೆ, ಇದನ್ನು ವ್ಯಾಖ್ಯಾನಿಸುವುದು ಬಹಳ ಕಷ್ಟ. ಇದು ವ್ಯಕ್ತಿಯ ಮಾತು, ನಡಿಗೆ, ಧ್ವನಿ, ಆತ್ಮವಿಶ್ವಾಸ ಹಾಗೂ ಆತ್ಮೀಯತೆಯಲ್ಲಿ ವ್ಯಕ್ತವಾಗುತ್ತದೆ. ಆಕರ್ಷಣೀಯ ವ್ಯಕ್ತಿತ್ವವು ವ್ಯಕ್ತಿಯ ನಡವಳಿಕೆ, ಮನೋಭಾವ ಹಾಗೂ ಅಭಿವ್ಯಕ್ತಿಯ ಸಂಗಮ. ಕೆಲವು ಜನರು ಯಾವತ್ತೂ ಆಕರ್ಷವಾಗಿ ಕಾಣುತ್ತಾರೆ. ಎಷ್ಟೇ ವಯಸ್ಸಾಗಿದ್ದರೂ ಸುಂದರವಾಗಿ ಕಾಣುತ್ತಾರೆ. ಏಕೆಂದರೆ ಅವರಲ್ಲಿ ಇದು ಹೃದಯಾಳದಿಂದ ಹರಿಯುತ್ತಿರುತ್ತದೆ. ಅಭಿವ್ಯಕ್ತಿಯಷ್ಟು ಉತ್ತಮವಾದ ಉಡುಪು ಇನ್ನೊಂದಿಲ್ಲ. ಕಳಪೆ ಚಾರಿತ್ರ್ಯದ ಮೇಲೆ ಹಾಕಿದ ನಯ, ವಿನಯಗಳ ಪರದೆ ಕೆಲವು ದಿನ ಕೆಲಸ ಮಾಡಿದರೂ ಅದು ಜಾರಲು ಹೆಚ್ಚು ಸಮಯವೇನೂ ಬೇಕಿಲ್ಲ. ಚಾರಿತ್ರ್ಯ ಇಲ್ಲದ ಕೇವಲ ವ್ಯಕ್ತಿತ್ವ ಹಾಗೂ ಕುಶಲತೆಗಳನ್ನು ಧರಿಸಿದ ಸಂಬಂಧಗಳು, ಜೀವನವನ್ನು ದುಃಖಕರವಾಗಿಸಬಹುದು. ಆಕರ್ಷಕ ವ್ಯಕ್ತಿತ್ವವಿದ್ದು ಆಕರ್ಷಕ ನಡತೆಯಿಲ್ಲದಿದ್ದರೆ, ಒಳ್ಳೆಯ ಮೈಕಟ್ಟು ಇದ್ದು ಒಳ್ಳೆಯತನವಿಲ್ಲದ ಹಾಗೆ. ಅಂದರೆ ನಡತೆ, ಗುಣವೈಶಿಷ್ಟ್ಯ ಹಾಗೂ ಆಕರ್ಷಕ ವ್ಯಕ್ತಿತ್ವ ಗೆಲುವಿಗೆ ಅತ್ಯಗತ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ಕೃತಜ್ಞನಾಗಿರು, ಕೃತಜ್ಞತೆ ಅಪೇಕ್ಷಿಸದಿರು

ಕೃತಜ್ಞತೆಯೊಂದು ಅನುಭವ. ಅದು ನಮ್ಮ ವ್ಯಕ್ತಿತ್ವ ವೃದ್ಧಿಸುತ್ತದೆ ಹಾಗೂ ಚಾರಿತ್ರ್ಯ ಬೆಳೆಸುತ್ತದೆ. ನಮ್ರತೆ ಮೂಲಕ ಕೃತಜ್ಞತೆ ವೃದ್ಧಿಸುತ್ತದೆ. ಮತ್ತೊಬ್ಬರ ಬಗ್ಗೆ ಕೃತಜ್ಞತಾ ಭಾವವಿರುವುದರ ಸಂಕೇತ ಅದು. ಇದು ಇತರರ ಬಗೆಗಿನ ನಮ್ಮ ಮನೋಭಾವದ ಮೂಲಕ ವ್ಯಕ್ತವಾಗಿ ನಮ್ಮ ನಡವಳಿಕೆಯಲ್ಲಿ ಪ್ರತಿಫಲಗೊಳ್ಳುತ್ತದೆ.

ಕೃತಜ್ಞತೆ ಅಂದರೆ ಒಳ್ಳೆಯ ಕೆಲಸಗಳನ್ನು ಪರಸ್ಪರ ವಿನಿಯೋಗಿಸಿಕೊಳ್ಳುವುದಲ್ಲ. ಏಕೆಂದರೆ ಅದು ಕೊಡು, ತೆಗೆದುಕೊಳ್ಳುವಂತಹ ವಸ್ತುವಲ್ಲ. ದಯಾಪರತೆ, ಅರ್ಥ ಮಾಡಿಕೊಳ್ಳುವಿಕೆ ಮತ್ತು ತಾಳ್ಮೆ ಮುಂತಾದವುಗಳನ್ನು ಎಂದಿಗೂ ಬೆಲೆಕಟ್ಟಿ ವಾಪಸ್ಸು ಕೊಡಲಾಗುವುದಿಲ್ಲ.

ಕೃತಜ್ಞತೆ ನಮಗೆ ಏನನ್ನು ಕಲಿಸುತ್ತದೆ? ಅದು ನಮಗೆ ಸಹಕಾರ ಮತ್ತು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಕಲೆಯನ್ನು ಹೇಳಿಕೊಡುತ್ತದೆ. ಕೃತಜ್ಞತೆ ಎಂದಿಗೂ ಪ್ರಾಮಾಣಿಕವಾಗಿರಬೇಕು. ಅತ್ಯಂತ ಸರಳ ಸುಂದರವಾದ 'ಧನ್ಯವಾದ' ಎಂಬ ಪದ ಎಷ್ಟೊಂದು ಮಹತ್ವ ಹೊಂದಿದೆ ಅಲ್ಲವೇ? ಅನೇಕ ವೇಳೆ ನಮಗೆ ಅತ್ಯಂತ ಆಪ್ತರಾದ ಗಂಡ- ಹೆಂಡತಿ, ಸಂಬಂಧಿ ಮತ್ತು ನಮ್ಮ ಸ್ನೇಹಿತರಿಗೆ ಕೃತಜ್ಞರಾಗಿರಲು ಮರೆಯುತ್ತೇವೆ.

ಕೃತಜ್ಞತಾಭಾವ ನಮ್ಮ ಜೀವನದ ದೃಷ್ಟಿಕೋನವನ್ನು ಬದಲಿಸುತ್ತದೆ. ಕೃತಜ್ಞತೆ ಮತ್ತು ನಮ್ರತೆಗಳ ಮೂಲಕ ಸರಿಯಾದ ಕೆಲಸಗಳು ತಂತಾನೇ ನಡೆಯುತ್ತವೆ. ಕೃತಜ್ಞತೆ ಜೀವನದ ರೀತಿ ಆಗಬೇಕು.

ಪ್ರಜಾವಾಣಿ



# ವಚನಾಮೃತ

**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಪರಿಶ್ರಮವಿಲ್ಲದ ಪ್ರತಿಭೆ ನಿಷ್ಪ್ರಯೋಜಕ

ಯಶಸ್ಸು ಏನೂ ಪರಿಶ್ರಮವಿಲ್ಲದೆ ತನ್ನಷ್ಟಕ್ಕೆ ತಾನು ಬರುವುದಿಲ್ಲ. ಯಶಸ್ಸಿಗೆ ಸಾಕಷ್ಟು ಸಿದ್ಧತೆ ಹಾಗೂ ಅರ್ಹತೆ ಬೇಕು. ಪ್ರತಿಯೊಬ್ಬರೂ ಜಯಗಳಿಸಲು ಇಷ್ಟಪಡುತ್ತಾರೆ. ಆದರೆ, ಎಷ್ಟು ಮಂದಿ ಜಯಗಳಿಸಲು ಬೇಕಾದ ಸಿದ್ಧತೆಯನ್ನು ಮಾಡುತ್ತಾರೆ ಹಾಗೂ ಅದಕ್ಕೆ ಬೇಕಾದ ಪ್ರಯತ್ನಕ್ಕೆ ತಮ್ಮನ್ನು ಅಣಿಗೊಳಿಸುತ್ತಾರೆ? ಇದಕ್ಕೆ ತ್ಯಾಗ ಹಾಗೂ ಸ್ವಯಂಶಿಸ್ತು ಬೇಕು. ಪರಿಶ್ರಮಕ್ಕೆ ಮಿಗಿಲಾದುದು ಯಾವುದೂ ಇಲ್ಲ. ಈ ಕುರಿತು ಹೆನ್ರಿ ಫೋರ್ಡ್ ಹೀಗೆ ಹೇಳುತ್ತಾರೆ, 'ನೀವು ಹೆಚ್ಚು ಹೆಚ್ಚು ಪರಿಶ್ರಮವಹಿಸಿದರೆ, ಅದೃಷ್ಟ ಲಭಿಸುವ ಅವಕಾಶವೂ ಹೆಚ್ಚು.'

ಕಠಿಣ ಪರಿಶ್ರಮವಿಲ್ಲದೆ ಮನುಷ್ಯನಿಗೆ ಏನೂ ದಕ್ಕುವುದಿಲ್ಲ. ಶಬ್ದಕೋಶವನ್ನು ಕೈಯಲ್ಲಿಟ್ಟುಕೊಂಡರೆ ಎಲ್ಲ ಪದಗಳ ಅರ್ಥ ತಿಳಿಯುವುದಿಲ್ಲ. ಯಶಸ್ಸು ಯಾವತ್ತೂ ಪರಿಶ್ರಮದಿಂದಲೇ ನಿರ್ಧರಿಸಬೇಕೇ ಹೊರತು ಕಡಿಮೆ ಕೆಲಸದ ಫಲದಿಂದಲ್ಲ.ಜಯಶಾಲಿಗಳು ಕಠಿಣ ದುಡಿಮೆಯನ್ನು ಮೈಗೂಡಿಸಿಕೊಂಡಿದ್ದಾರೆ.

ನಿಮ್ಮ ಕೆಲಸದ ಬಗ್ಗೆ ಹೆಮ್ಮೆಪಡಿ, ಇತರರ ಕೆಲಸದ ಬಗ್ಗೆ ಗೌರವ ತೋರಿ. ಅದಕ್ಕಾಗಿ ಅವರು ಪಟ್ಟ ಶ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ. ನೀವು ಕಷ್ಟಪಟ್ಟು ಚೆನ್ನಾಗಿ ಕೆಲಸ ಮಾಡಿ. ಕಠಿಣ ಪರಿಶ್ರಮದ ವೈಶಿಷ್ಟ್ಯವೆಂದರೆ ಇದು ಯಾವತ್ತೂ ಲಾಭದಾಯಕ. ವ್ಯಕ್ತಿ ಕಷ್ಟಪಟ್ಟು ದುಡಿದಷ್ಟೂ ಧನ್ಯತಾ ಭಾವವನ್ನು ಕಾಣುತ್ತ ಹೋಗುತ್ತಾನೆ. ಧನ್ಯತಾ ಭಾವ ಕಂಡ ಹಾಗೆ ಆತ ಇನ್ನೂ ಹೆಚ್ಚು ದುಡಿಯಲು ಬಯಸುತ್ತಾನೆ. ಇಚ್ಛಾಶಕ್ತಿ ಹಾಗೂ ಕಠಿಣ ಪರಿಶ್ರಮ ಇಲ್ಲದ ಮಹಾನ್ ಪ್ರತಿಭೆಯೂ ನಿಷ್ಪಯೋಜಕ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಇತಿಮಿತಿ ವಿಸ್ತರಿಸಿ, ಅಸಾಧ್ಯ ಸಾಧಿಸಿ

ಈ ಜಗತ್ತಿಗೆ ವಿ8 (V8) ಎಂಜಿನ್ ನೀಡಿದವರು ಅಮೆರಿಕದ ಕೈಗಾರಿಕೋದ್ಯಮಿ ಹೆನ್ರಿ ಫೋರ್ಡ್, ಅವರು ಅಷ್ಟೇನೂ ಕಲಿತವರಲ್ಲ. 14ನೇ ವಯಸ್ಸಿನ ನಂತರ ಶಾಲೆಗೆ ಹೋಗಲಿಲ್ಲ. ಅವರಿಗೆ ಆ ಎಂಜಿನ್ ಅಗತ್ಯದ ಅರಿವಿತ್ತು. ಆದರೆ, ಅದನ್ನು ಹೇಗೆ ತಯಾರಿಸಬೇಕೆಂಬ ಬಗ್ಗೆ ಅರಿವು ಇರಲಿಲ್ಲ. ತಮ್ಮ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಮೇಧಾವಿಗಳನ್ನು ಕರೆದು ಇಂಥ ಒಂದು ಎಂಜಿನ್ ಸಿದ್ಧಪಡಿಸಲು ಹೇಳಿದರು. ಅವರೆಲ್ಲ ಸೇರಿ ಅಂಥ ಎಂಜಿನ್ ತಯಾರಿಸಲು ಸಾಧ್ಯವಿಲ್ಲವೆಂದು ವಾದಿಸಿದರು. ಆದರೆ, ಫೋರ್ಡ್ ಬಿಡಲಿಲ್ಲ. 'ನನಗೆ ಈ ಎಂಜಿನ್ ಬೇಕೇ ಬೇಕು. ಅಲ್ಲಿಯ ತನಕ ವಿರಮಿಸುವಂತಿಲ್ಲ' ಅಂದುಬಿಟ್ಟರು. ಶೀಘ್ರದಲ್ಲಿಯೇ ತಯಾರಿಸಲು ಸಾಧ್ಯವಿಲ್ಲ ಎಂದ ಅದೇ ತಂತ್ರಜ್ಞರು ಕೊನೆಗೂ ಅದನ್ನು ತಯಾರಿಸಿಕೊಟ್ಟರು.

ಇದು ಹೇಗೆ ಸಾಧ್ಯವಾಯಿತು? ಅವರೆಲ್ಲ ತಮ್ಮ ಕಲ್ಪನೆಯನ್ನು ವಿಸ್ತರಿಸಿದರು. ಕೆಲವು ಸಲ, ಸುಳ್ಳು ಇತಿಮಿತಿಗಳನ್ನು ಸಹ ಕಲಿಸುತ್ತದೆ. ಅನೇಕ ವಿಷಯಗಳನ್ನು ನಾವು ನಿಸರ್ಗದಿಂದ ಕಲಿಯಬೇಕಾಗುತ್ತದೆ. ದುಂಬಿಯನ್ನು ನೋಡಿ, ಅದರ ದೇಹ ದೊಡ್ಡದು, ರೆಕ್ಕೆಗಳು ತೀರಾ ತೆಳು ಹಾಗೂ ಚಿಕ್ಕದು. ಏರೋಡೈನಾಮಿಕ್ಸ್ ನಿಯಮದ ಪ್ರಕಾರ ದುಂಬಿಗೆ ಹಾರುವುದು ಸಾಧ್ಯವೇ ಇಲ್ಲ. ಅದರ ದೇಹ ಗಾತ್ರಕ್ಕಿಂತ ದೊಡ್ಡದಾದ ರೆಕ್ಕೆಗಳಿದ್ದರೆ ಮಾತ್ರ ಹಾರಲು ಸಾಧ್ಯ. ಆದರೆ, ಈ ನಿಯಮ ದುಂಬಿಗೆ ಗೊತ್ತಿಲ್ಲ. ಅದಕ್ಕಾಗಿ ಅದು ಇಂದಿಗೂ ಹಾರುತ್ತಿದೆ.

ನಮ್ಮ ಇತಿಮಿತಿಗಳು ಗೊತ್ತಿಲ್ಲದಿದ್ದರೆ ಅಸಾಧ್ಯವನ್ನು ಸಾಧಿಸಿ ನಮ್ಮನ್ನೇ ನಾವು ಬೆರಗುಗೊಳಿಸಿಕೊಳ್ಳಬಲ್ಲೆವು. ಹಿಂತಿರುಗಿ ನೋಡಿದರೆ ಈ ಇತಿಮಿತಿಗಳು ಪ್ರಾರಂಭದಲ್ಲಿ ನಮ್ಮಲ್ಲಿ ಇದ್ದವೇ ಎಂಬ ಪ್ರಶ್ನೆ ಏಳುವುದು. ಈ ಇತಿಮಿತಿಗಳನ್ನು ನಮಗೆ ನಾವೇ ವಿಧಿಸಿಕೊಂಡಿದ್ದು. ಇವು ಸ್ವಯಂ ನಿರ್ಮಿತ ಹಾಗೂ ಸ್ವಯಂ ಕಲ್ಪಿತ. ಶಿಕ್ಷಣವು ನಮಗೆ ಈ ಇತಿಮಿತಿಯನ್ನು ವಿಧಿಸದಂತೆ ನಾವು ನೋಡಿಕೊಳ್ಳಬೇಕು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಸುಲಭದ ಮಾರ್ಗ ಸಂಕಷ್ಟಕ್ಕೆ ದಾರಿ

**ಕಾಡಿನಲ್ಲೊಂದು ಪಕ್ಷಿ ಇತ್ತು.** ಹಾಡುತ್ತಾ, ಹಾರಾಡುತ್ತಾ ಅದು ಆರಾಮಾಗಿತ್ತು. ಒಂದು ದಿನ ಅದು ಪೆಟ್ಟಿಗೆಯಲ್ಲಿ ಹುಳು ಹುಪ್ಪಟೆಗಳನ್ನು ತುಂಬಿಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ನೋಡಿತು. ಈ ಪೆಟ್ಟಿಗೆಯಲ್ಲಿರುವುದೇನು? ಅದನ್ನು ತೆಗೆದುಕೊಂಡು ಎಲ್ಲಿಗೆ ಹೋಗುತ್ತಿರುವೆ? ಎಂದು ಪಕ್ಷಿಯು ಅವನನ್ನು ಕೇಳಿತು. ಅದಕ್ಕೆ ಆತ ಈ ಪೆಟ್ಟಿಗೆಯಲ್ಲಿರುವ ಹುಳು ಹುಪ್ಪಟೆಗಳನ್ನು ಮಾರಾಟ ಮಾಡಿ ಅದಕ್ಕೆ ಪ್ರತಿಯಾಗಿ ಗರಿಗಳನ್ನು ಖರೀದಿಸುವುದಾಗಿ ತಿಳಿಸಿದ.

ಅವನ ಮಾತಿನಿಂದ ಉಲ್ಲಸಿತವಾದ ಪಕ್ಷಿಯು ‘ಒಂದು ಕೆಲಸ ಮಾಡು, ನಾನು ನಿನಗೆ ನನ್ನ ಗರಿಯನ್ನು ನೀಡುತ್ತೇನೆ. ಅದಕ್ಕೆ ಪ್ರತಿಯಾಗಿ ನೀನು ನನಗೆ ತಿನ್ನಲು ಒಂದು ಹುಳುವನ್ನು ನೀಡು. ನಾನು ಆಹಾರಕ್ಕಾಗಿ ಹುಳುಗಳನ್ನು ಹುಡುಕುವುದಾದರೂ ತಪ್ಪುತ್ತದೆ’ ಎಂದಿತು. ಇದಕ್ಕೆ ಆ ವ್ಯಕ್ತಿಯು ಒಪ್ಪಿಕೊಂಡ. ಕರಾರಿನಂತೆ ಪಕ್ಷಿಯು ತನ್ನ ಒಂದು ಗರಿಯನ್ನು ನೀಡಿತು. ಅದಕ್ಕೆ ಆತ ಒಂದು ಹುಳು ನೀಡಿದ.

ಈ ಕೊಡು-ಕೊಳ್ಳುವ ವ್ಯವಹಾರ ಸುಮಾರು ಒಂದು ತಿಂಗಳವರೆಗೆ ನಡೆಯಿತು. ಅಷ್ಟೊತ್ತಿಗೆ ಪಕ್ಷಿಯ ಗರಿಗಳೆಲ್ಲ ಮುಗಿದು ಹೋಗಿತ್ತು. ಹುಳು-ಹುಪ್ಪಟೆಗಾಗಿ ಗರಿಗಳೆಲ್ಲವನ್ನು ನೀಡಿದ ಪಕ್ಷಿಗೆ ಹಾರಲಾಗದಂತಹ ಸ್ಥಿತಿ. ಹುಳು ಹುಪ್ಪಟೆಯನ್ನು ಹಿಡಿದು ತರಲು ಹೋಗಲಾರದಂತ ಸ್ಥಿತಿ. ಅಸಹ್ಯವಾಗಿ ಕಾಣತೊಡಗಿದ ಪಕ್ಷಿಯು ಉಪವಾಸ ಬಿದ್ದು ಒಂದು ದಿನ ಸತ್ತು ಹೋಯಿತು.

ಕಥೆಯಲ್ಲಿ ಅಡಕವಾಗಿರುವ ನೀತಿ ಸ್ಪಷ್ಟವಾಗಿದೆ. ಪಕ್ಷಿಯು ಸುಲಭವಾಗಿ ಏನೂ ಶ್ರಮವಿಲ್ಲದ ಜೀವನವನ್ನು ಸಾಗಿಸಲು ಯೋಚಿಸಿ ಪಡಬಾರದ ಕಷ್ಟ ಅನುಭವಿಸುವಂತಾಯಿತು. ಇದೇ ರೀತಿ ನಾವು ಕೂಡ ಬಹುತೇಕ ಸಂದರ್ಭದಲ್ಲಿ ಸುಲಭ ಮಾರ್ಗವನ್ನು ಅರಸಿ, ಕಷ್ಟಕ್ಕೊಳಗಾಗುತ್ತೇವೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಸಾಧನೆಯ ಹಿಂದೆ ಇರಬೇಕು ಪ್ರಯತ್ನ

ಒಬ್ಬ ವ್ಯಕ್ತಿ ರೇಸ್ ಕುದುರೆ ಖರೀದಿಸಿ ಅದನ್ನು ಧ್ಯಾನಾಗಾರದಲ್ಲಿ ಕಟ್ಟಿಹಾಕಿ ಅಲ್ಲೊಂದು ಬೋರ್ಡನ್ನು ನೇತುಹಾಕಿ, 'ಜಗತ್ತಿನಲ್ಲಿ ಅತಿ ವೇಗವಾಗಿ ಓಡುವ ಕುದುರೆ' ಎಂದು ಬರೆಸಿದ. ಕುದುರೆಯೇನೋ ದಷ್ಟಪುಷ್ಟವಾಗಿ ಬೆಳೆಯ ತೊಡಗಿತು. ಆದರೆ ಅದಕ್ಕೆ ತರಬೇತಿ ಕೊಡಲಿಲ್ಲ. ಈ ಕುದುರೆಯನ್ನು ರೇಸಿನಲ್ಲಿ ಓಡಲು ಬಿಟ್ಟಾಗ ಕೊನೆಯಲ್ಲಿ ಬಂದಿದ್ದೇ ಈ ಕುದುರೆ! ಕೊನೆಗೆ ಮಾಲೀಕ 'ಅತಿ ವೇಗವಾಗಿ ಓಡುತ್ತಿದ್ದ ಜಗತ್ತಿನ ಕುದುರೆ' ಎಂದು ಬೋರ್ಡ್ ಬದಲಾಯಿಸಿದ.

ದೂರ ದೃಷ್ಟಿ, ಧೈರ್ಯ ಹಾಗೂ ಆಳವಿಲ್ಲದ ಜೀವನ ಅಂಧಕಾರಮಯ. ಸಣ್ಣ ಸೋಮಾರಿ ಹಾಗೂ ದುರ್ಬಲ ಮನಸ್ಸು ಯಾವತ್ತೂ ಸುಲಭದ, ಅಡೆತಡೆ ಇಲ್ಲದ ಮಾರ್ಗಗಳನ್ನು ಅರಸುತ್ತದೆ. ಅಥ್ಲೀಟ್‌ಗಳು 15 ಸೆಕೆಂಡ್ ಓಟದ ಸ್ಪರ್ಧೆಗಾಗಿ 15 ವರ್ಷಗಳ ಪರಿಶ್ರಮ ಪಡುತ್ತಾರೆ. ಪ್ರತಿಸಲ ಕಠಿಣ ಅಭ್ಯಾಸದ ನಂತರ, ಆ ಅನುಭವ ಹೇಗಿತ್ತೆಂದು ಓಟಗಾರರನ್ನು ಕೇಳಿ. ಆತ ತನ್ನ ಶಕ್ತಿ ಎಲ್ಲವೂ ಖಾಲಿ ಆಗಿರುವಂತೆ ಅನಿಸುತ್ತದೆಂದೇ ಹೇಳುತ್ತಾನೆ.

ಜೀವನದಲ್ಲಿ ತಮಗೆ ಯಾವಾಗಲೂ ಅನ್ಯಾಯವೇ ಆಗಿದೆ ಎಂದು ಪರಾಜಿತರು ಭಾವಿಸುತ್ತಾರೆ. ಅವರು ಸದಾ ತಮ್ಮ ದುರದೃಷ್ಟದ ಕುರಿತು ಯೋಚಿಸುತ್ತಿರುತ್ತಾರೆ. ಆದರೆ, ಅವರಿಗೆ ಸಾಕಷ್ಟು ಅಭ್ಯಾಸ ಮಾಡಿದ, ಸಿದ್ಧತೆ ನಡೆಸಿದ ವ್ಯಕ್ತಿ ಕೂಡ ಇಂಥದ್ದೇ ಅಡೆತಡೆಗಳನ್ನು ಎದುರಿಸಿಯೂ ಅವನ್ನೆಲ್ಲ ದಾಟಿ ಯಶ ಸಾಧಿಸಿದ್ದಾರೆ ಎಂಬುದರ ಬಗ್ಗೆ ಗಮನಹರಿಸುವುದೇ ಇಲ್ಲ. ಹಣೆಬರಹ ನಂಬಿ ಕೂರುವ ಮನೋಭಾವದಿಂದ ಹೊರಬರುವ ಏಕೈಕ ಮಾರ್ಗವೆಂದರೆ ಜವಾಬ್ದಾರಿ ಸ್ವೀಕರಿಸುವುದು ಹಾಗೂ ಅದೃಷ್ಟವನ್ನು ನೆನೆಯುತ್ತಾ ಕುಳಿತುಕೊಳ್ಳದಿರುವುದು. ಜೀವನದಲ್ಲಿ ಯಾವುದೇ ಗುರಿಯನ್ನು ಸಾಧಿಸಲು ಕ್ರಿಯೆ, ಸಿದ್ಧತೆ ಹಾಗೂ ಯೋಜನೆ ಅತ್ಯಗತ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಮಕ್ಕಳ ಆಯ್ಕೆ, ಪಾಲಕರ ಜವಾಬ್ದಾರಿ

ಕಳ್ಳತನ ಮಾಡಿ ಸಿಕ್ಕಿ ಬಿದ್ದ ವ್ಯಕ್ತಿಗೆ ಶಿಕ್ಷೆ ವಿಧಿಸಿದ ನ್ಯಾಯಾಧೀಶರು 'ನಿನ್ನ ಪರವಾಗಿ ಹೇಳುವುದೇನಾದರೂ ಇದ್ದರೆ ಹೇಳಬಹುದು' ಎಂದು ಹೇಳಿದಾಗ ಅದಕ್ಕಾತ 'ನ್ಯಾಯಾಧೀಶರೇ, ನನ್ನ ಜೊತೆಗೆ ನನ್ನ ತಂದೆ ತಾಯಿಗೂ ಶಿಕ್ಷೆ ವಿಧಿಸಿ ಅವರನ್ನು ಜೈಲಿಗೆ ಕಳಿಸಿ' ಎಂದ. ಹಾಗೇಕೆಂದು ನ್ಯಾಯಾಧೀಶರು ಪ್ರಶ್ನಿಸಿದಾಗ ಆತ ಹೇಳಿದ, 'ನಾನು ಚಿಕ್ಕವನಿದ್ದಾಗ ಶಾಲೆಯಲ್ಲಿ ಪೆನ್ಸಿಲ್, ಪೆನ್ ಕದಿಯುತ್ತಿದ್ದೆ. ಗೊತ್ತಿದ್ದೂ ಅವರೇನೂ ಹೇಳಲಿಲ್ಲ. ನನ್ನ ಈ ಕೃತ್ಯವನ್ನು ಅವರು ನಿರ್ಲಕ್ಷಿಸಿದರು. ಬರುಬರುತ್ತಾ ನನಗೆ ಕದಿಯುವುದು ಚಟವಾಯಿತು. ನಾನು ಈ ಪ್ರಮಾಣದಲ್ಲಿ ಕಳ್ಳತನ ಮಾಡಲು ಅವರೇ ಕಾರಣ' ಎಂದ!

ಹೌದು, ಅವನು ಸರಿಯಾಗಿ ಹೇಳಿದ್ದ. ಅವನ ಪಾಲಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದಿದ್ದರಿಂದ ಅವನ ಅಪರಾಧದಲ್ಲಿ ಪಾಲುದಾರರಾದರು. ಹಾಗೆಂದು ಅವರ ಮೇಲೆ ತಪ್ಪು ಹೊರಿಸಿ ಈತ ಪಾರಾಗುವಂತಿಲ್ಲ. ಮಕ್ಕಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುವುದು ಒಳ್ಳೆಯದೇನೋ ಹೌದು. ಆದರೆ, ಸೂಕ್ತ ನಿರ್ದೇಶನವಿಲ್ಲದ ಆಯ್ಕೆ ಗಂಡಾಂತರಕ್ಕೆ ಕಾರಣವಾಗಬಹುದು. ಶಿಸ್ತಿನ ಸಂಕೋಲೆಗಳು ನಮ್ಮನ್ನು ಕೆಳಕ್ಕೆಳೆಯುವುದರ ಬದಲು ನಿಜಕ್ಕೂ ನಮ್ಮನ್ನು ಮೇಲಕ್ಕೆತ್ತುತ್ತವೆ.

ತಂದೆ ಹಾಗೂ ಮಗ ಗಾಳಿಪಟದೊಂದಿಗೆ ಆಡುತ್ತಿದ್ದರು. ಗಾಳಿಪಟ ಮೇಲ ಮೇಲಕ್ಕೆ ಹಾರಲು ಕಾರಣವೇನೆಂದು ಮಗ ತಂದೆಯನ್ನು ಕೇಳಿದ. ಅದಕ್ಕೆ ತಂದೆ, 'ದಾರ' ಎಂದು ಉತ್ತರಿಸಿದ. ತಂದೆಯ ಉತ್ತರದಿಂದ ಸಮಾಧಾನವಾಗದ ಮಗ, 'ಗಾಳಿಪಟ ಹಾರಲು ದಾರ ಹೇಗೆ ಸಹಾಯಕವಾದೀತು? ಗಾಳಿಪಟವನ್ನು ಕೆಳಗೆ ಜಗ್ಗುತ್ತಿರುವುದು ದಾರವೇ ಅಲ್ಲವೇ?' ಎಂದು ಕೇಳಿದ. ಮಗನಿಗೆ ದಾರದ ಮಹತ್ವವನ್ನು ತೋರಿಸಬೇಕೆಂದು ಭಾವಿಸಿದ ತಂದೆ, ಗಾಳಿಪಟದ ದಾರವನ್ನು ಕತ್ತರಿಸಿದ. ದಾರವನ್ನು ತುಂಡರಿಸಿದಾಕ್ಷಣ ಗಾಳಿಪಟ ನೆಲಕ್ಕೆ ಬಿದ್ದಿತು.

ಇದು ಜೀವನದಲ್ಲಿ ಕೂಡ ಸತ್ಯ. ಯಾವುದು ನಮ್ಮನ್ನು ಬಂಧಿಸಿದೆ ಎಂದು ಭಾವಿಸುತ್ತೇವೋ, ಅದೇ ನಮ್ಮ ಹಾರಾಟಕ್ಕೆ ಅನುಕೂಲವಾಗುತ್ತದೆ. ಶಿಸ್ತು ಕೂಡ ಹೀಗೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಸಕಾರಾತ್ಮಕ ಪ್ರೇರಣೆಯಿಂದ ಸುಖ

**ನಮ್ಮ** ಜೀವನದಲ್ಲಿ ಪ್ರೇರಣೆ ಎಂಬುದು ಚಾಲಕ ಶಕ್ತಿ. ಇದಕ್ಕೆ ಮನವೊಲಿಸುವ ಸಮಾಧಾನ ಪಡಿಸುವ ಮತ್ತು ಉತ್ತೇಜಿಸುವ ಸಾಮರ್ಥ್ಯವಿದೆ. ಇನ್ನೊಂದು ಅರ್ಥದಲ್ಲಿ ಪ್ರೇರಣೆ ಎಂದರೆ ಕ್ರಿಯೆಯನ್ನು ಮುನ್ನಡೆಸಲು ಅನುಕೂಲವಾಗುವ ಸಂಗತಿ. ಇದು ನಮ್ಮ ಜೀವನದ ಗತಿಯನ್ನೇ ಬದಲಿಸಬಲ್ಲ ಶಕ್ತಿಯಾಗಿದೆ. ಕ್ರಿಯೆ ಅಥವಾ ಭಾವನೆಯನ್ನು ಉದ್ದೀಪನಗೊಳಿಸುವ ಸಂಗತಿಯೇ ಪ್ರೇರಣೆ. ಉತ್ತೇಜನ ಮತ್ತು ಸ್ಫೂರ್ತಿಯೇ ಪ್ರೇರಣೆ.

ಒಂದೇ ಮನೆಯಲ್ಲಿ ಹುಟ್ಟಿ ಬೆಳೆದ ಅಣ್ಣ ತಮ್ಮಂದಿರ ಸ್ಥಿತಿಯಲ್ಲಿ ಬಹಳಷ್ಟು ಅಂತರವಿದ್ದದ್ದು ನಿಜಕ್ಕೂ ಆಶ್ಚರ್ಯಕರವಾದ ಸಂಗತಿ. ಒಬ್ಬ ಸದಾ ಮನೆ ಮಂದಿಗೆಲ್ಲ ಹೊಡೆಯುವ ಕುಡುಕ ಹಾಗೂ ವ್ಯಸನಿ ಮತ್ತು ಇನ್ನೊಬ್ಬ ಒಳ್ಳೆಯ ರೀತಿಯಿಂದ ಸಂಸಾರ ನಡೆಸುತ್ತಿರುವ, ಗೌರವಾನ್ವಿತ ವ್ಯಾಪಾರಿ.

ಮೊದಲನೆಯವನನ್ನು ಯಾರೋ ಕೇಳಿದರು.'ನೀನೇಕೆ ಕುಡುಕ? ಹೆಂಡತಿ -ಮಕ್ಕಳಿಗೆ ಹೊಡೆಯುತ್ತೀಯ? ಹೀಗೆ ಮಾಡಲು ನಿನಗೆ ಪ್ರೇರಣೆ ಏನು?'ಅದಕ್ಕೆ ಆತ ಹೇಳಿದ. 'ನನ್ನ ತಂದೆ. ಆತ ಕುಡುಕನಾಗಿದ್ದ, ಮಾದಕ ದ್ರವ್ಯ ವ್ಯಸನಿಯಾಗಿದ್ದ. ತನ್ನ ಹೆಂಡತಿಗೆ ಹೊಡೆಯುತ್ತಿದ್ದ. ಹೀಗಿದ್ದಾಗ ನಾನೇನು ಮಾಡಬಲ್ಲೆ? ಇದಕ್ಕೆಲ್ಲ ನನಗೆ ನನ್ನ ತಂದೆಯೇ ಪ್ರೇರಣೆ'.

ಎರಡನೆಯವನಿಗೆ ಕೂಡ ಇದೇ ಪ್ರಶ್ನೆಗಳನ್ನು ಯಾರೋ ಕೇಳಿದರು. 'ನೀನು ಹೇಗೆ ಜೀವನದಲ್ಲಿ ಯಶಸ್ವಿಯಾಗಿ ಉತ್ತಮವಾದ ಜೀವನ ನಡೆಸುತ್ತಿದ್ದೀಯ? ನಿನಗೆ ಪ್ರೇರಣೆಯ ಮೂಲ ಯಾವುದು?' ಅದಕ್ಕೆ ಎರಡನೆಯವ ಹೇಳಿದ. 'ನನ್ನ ತಂದೆ. ನಾನು ಸಣ್ಣವನಿದ್ದಾಗ, ನನ್ನ ತಂದೆ ಕುಡಿದು ಬಂದು ಮನೆಯಲ್ಲಿ ರಂಪ ಮಾಡಿ ತಾಯಿಗೆ ಹಾಗೂ ನಮ್ಮೆಲ್ಲರಿಗೂ ಹೊಡೆಯುತ್ತಿದ್ದ. ಇದನ್ನು ಕಂಡು ನನ್ನ ಮನಸ್ಸು ರೋಸಿ ಹೋಯಿತು. ಜೀವನದಲ್ಲಿ ಎಂದೂ ನನ್ನ ತಂದೆಯಂತೆ ಆಗಬಾರದೆಂದು ನಿರ್ಧರಿಸಿದೆ'.

ಇಬ್ಬರಿಗೂ ಒಂದೇ ಮೂಲ, ಒಂದೇ ಪ್ರೇರಣೆ. ಅವರಿಬ್ಬರ ಇಂದಿನ ಸ್ಥಿತಿಗೆ ಪ್ರೇರಣೆ ಒಂದೇ. ಆದರೆ ಒಬ್ಬಾತ ಪ್ರೇರಣೆಯನ್ನು ನಕಾರಾತ್ಮಕವಾಗಿ ಬಳಸಿಕೊಂಡ ಹಾಗೂ ಇನ್ನೊಬ್ಬ ಸಕಾರಾತ್ಮಕವಾಗಿ ಬಳಸಿಕೊಂಡ. ನಕಾರಾತ್ಮಕ ಪ್ರೇರಣೆ ಸುಲಭವಾದ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಅನಂತರ ಕಷ್ಟದಲ್ಲಿ ತಂದು ನಿಲ್ಲಿಸುತ್ತದೆ. ಸಕಾರಾತ್ಮಕ ಪ್ರೇರಣೆ ಕಷ್ಟದ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಅನಂತರ ಸುಖದಲ್ಲಿ ತಂದು ನಿಲ್ಲಿಸುತ್ತದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಉತ್ಕಟ ಬಯಕೆಯಿದ್ದರೆ ಸಾಧನೆ

ಹಲವಾರು ನ್ಯೂನತೆ, ಕೊರತೆಗಳಿದ್ದರೂ ಜೀವನದಲ್ಲಿ ಅಪರಿಮಿತ ಸಾಧನೆ ಮಾಡಿ ಯಶಸ್ಸು ಸಾಧಿಸಿದ ಜನರ ಜೀವನಗಾಥೆಯನ್ನು ನೋಡಿದರೆ, ಅವರಲ್ಲಿ ಏನಾದರೂ ಸಾಧಿಸಬೇಕೆಂಬ ಉತ್ಕಟ ಬಯಕೆ, ಹಂಬಲವೇ ಇದಕ್ಕೆ ಕಾರಣವೆಂಬ ಅಂಶ ವೇದ್ಯವಾಗುತ್ತದೆ. ಅವರಿಗೆ ಜೀವನದಲ್ಲೊಂದು ಉದ್ದೇಶವಿತ್ತು. ಎಲ್ಲಾ ಅಡೆತಡೆ, ಕಷ್ಟಕಾರ್ಪಣ್ಯಗಳ ಮಧ್ಯದಲ್ಲಿಯೂ ತಾವೇನಾದರೂ ಸಾಧಿಸಿ ತೋರಿಸಬೇಕೆಂದು ಇವರೆಲ್ಲರೂ ಪಣತೊಟ್ಟಿದ್ದರು. ತಮ್ಮ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಬೇಕೆಂದು ಇವರೆಲ್ಲ ನಿರ್ಧರಿಸಿದ್ದರು. ಕೊನೆಗೆ ಅಂದುಕೊಂಡಿದ್ದನ್ನು ಮಾಡಿ ತೋರಿಸಿದರು.

ಮನುಷ್ಯನಿಗೆ ಅದಮ್ಯ ಆಕಾಂಕ್ಷೆ ಹಾಗೂ ಉತ್ಕಟ ಬಯಕೆಗಳಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ವಿಲ್ಮಾ ರುಡಾಲ್ಫ್ ಉತ್ತಮ ನಿದರ್ಶನ. ವಿಲ್ಮಾ ಪಾರ್ಶ್ವವಾಯುವಿನಿಂದ ಬಾಧಿತಳಾಗಿದ್ದಳು. ಹಂಬಲ, ಆಸೆಗಳು ಆಕೆಯನ್ನು ಎಂಥ ಎತ್ತರಕ್ಕೆ ಒಯ್ದವೆಂದರೆ ವಿಲ್ಮಾ 1960ರ ಒಲಂಪಿಕ್ಸ್ ಸ್ಪರ್ಧೆಯಲ್ಲಿ ವೇಗದ ಓಟಕ್ಕೆ ಮೂರು ಚಿನ್ನದ ಪದಕಗಳನ್ನು ಪಡೆದಳು.

ತನ್ನ ಐದನೇ ವಯಸ್ಸಿನಲ್ಲಿ ಪೋಲಿಯೋ ಪೀಡಿತಳೊಬ್ಬಳು ಈಜುಕೊಳಕ್ಕೆ ಧುಮುಕಿದಳು. ಆಕೆಗೆ ಈಜು ಸ್ಪರ್ಧೆಯಲ್ಲಿ ಮಹಾನ್ ಸಾಧನೆ ಮಾಡುವ ಹಂಬಲವಿತ್ತು. ಸತತ ಪರಿಶ್ರಮ, ಶ್ರದ್ಧೆ, ಪ್ರಯತ್ನಗಳ ಫಲವಾಗಿ ಆಕೆ 3 ಸ್ಪರ್ಧೆಗಳಲ್ಲಿ ವಿಶ್ವ ದಾಖಲೆ ಮಾಡಿದಳಲ್ಲದೆ, 1956ರ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಳು. ಆಕೆಯ ಹೆಸರು ಷೆಲ್ಲಿಮ್ಯಾನ್!

ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಆಸೆ ಇರುವ ವ್ಯಕ್ತಿ ತನ್ನ ಮಾರ್ಗ ಯಾವುದೆಂಬುದನ್ನು ಕಂಡುಕೊಂಡು, ಪರಿಶ್ರಮದಿಂದ ದುಡಿಯುತ್ತಾ, ಕಾರ್ಯದಲ್ಲಿ ಶಿಸ್ತು, ಶ್ರದ್ಧೆಯನ್ನು ರೂಢಿಸಿಕೊಂಡರೆ, ಯಶಸ್ಸು ತಾನಾಗಿ ಬರುವುದು.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ವೈಫಲ್ಯಗಳನ್ನು ಗುರುವಾಗಿ ಸ್ವೀಕರಿಸಿ

ಇತಿಹಾಸದಿಂದ ಪಾಠ ಕಲಿಯದ ಜನರು ಸಂಕಟಕ್ಕೆ ಸಿಲುಕುತ್ತಾರೆ. ನಾವು ಸರಿಯಾದ ಮನೋಭಾವ ಹೊಂದಿದವರಾಗಿದ್ದರೆ ನಮ್ಮ ವೈಫಲ್ಯಗಳನ್ನು ಗುರುವಾಗಿ ಕಾಣುತ್ತೇವೆ. ವೈಫಲ್ಯವೆಂಬುದು ಬಳಸು ಹಾದಿ ಇರಬಹುದೇ ಹೊರತು, ಅದು ಕೊನೆ ಅಲ್ಲ. ವೈಫಲ್ಯ ವಿಳಂಬವಿರಬಹುದೇ ಹೊರತು, ಸಂಪೂರ್ಣ ಸೋಲಲ್ಲ.

ನಮ್ಮ ತಪ್ಪುಗಳಿಗೆ ನಾವು ಇಡುವ ಹೆಸರು ಅನುಭವ. ಕೆಲವು ಮಂದಿ ಕಲಿಯುತ್ತಾರೆ ಮತ್ತು ಬದುಕುತ್ತಾರೆ. ಇನ್ನು ಕೆಲವರು ಕೇವಲ ಬದುಕುತ್ತಾರೆ. ಬುದ್ಧಿವಂತರಾದವರು ತಮ್ಮ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಇನ್ನು ಹೆಚ್ಚು ಬುದ್ಧಿವಂತರಾದವರು ಬೇರೆಯವರ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಕೇವಲ ನಮ್ಮ ತಪ್ಪುಗಳಿಂದ ಮಾತ್ರ ಪಾಠ ಕಲಿಯುವಷ್ಟು ನಮ್ಮ ಜೀವನ ದೀರ್ಘವಾಗಿಲ್ಲ.

ಮಂಗಗಳನ್ನು ಹಿಡಿಯುವವರು ಒಂದು ರೀತಿಯ ಪೆಟ್ಟಿಗೆಯನ್ನು ಬಳಸುತ್ತಾರೆ. ಅದರ ಮೇಲ್ಭಾಗದಲ್ಲಿ ಕಿಂಡಿಯೊಂದಿದ್ದು ಮಂಗ ತನ್ನ ಕೈಯನ್ನು ತೂರಿಸುವಷ್ಟು ಮಾತ್ರ ದೊಡ್ಡದಾಗಿರುತ್ತದೆ. ಈ ಪೆಟ್ಟಿಗೆಯೊಳಗೆ ತಿಂಡಿಯನ್ನು ಇಟ್ಟಿರಲಾಗುತ್ತದೆ. ಮಂಗ ತಿಂಡಿಯನ್ನು ಬಾಚಿಕೊಳ್ಳಲು ಹೋಗಿ ಸಿಕ್ಕಿಹಾಕಿಕೊಂಡು ಬಿಡುತ್ತದೆ.

ನಾವು ಮಂಗನಿಗಿಂತ ಭಿನ್ನರೇನಲ್ಲ. ನಾವು ನಮ್ಮ ಜೀವನದಲ್ಲಿ ಮಂಗನ ಹಾಗೆ ಈ ತಿಂಡಿ ಆಸೆಗೆ ಕೈ ಹಾಕಿ ಪೇಚಿಗೆ ಸಿಲುಕಿ ಕೊಳ್ಳುತ್ತೇವೆ. ಜೀವನದಲ್ಲಿ ಮುಂದಕ್ಕೆ ಹೋಗುವ ಅವಕಾಶದಿಂದ ವಂಚಿತರಾಗುತ್ತೇವೆ. ಇದಕ್ಕೆ ನಮ್ಮದೇ ಕಾರಣಗಳನ್ನು ಕೊಡುತ್ತ ಸಮಾಧಾನ ಪಟ್ಟುಕೊಳ್ಳುತ್ತೇವೆ. ಹೀಗಾಗಿದ್ದರೆ ಹಾಗಾಗುತ್ತಿತ್ತು ಎಂಬ ಸಬೂಬು ನೀಡುತ್ತೇವೆ. ಜೀವನದಲ್ಲಿ ಯಶಸ್ವಿಯಾದವನು ಎಂದೂ ಸಬೂಬು ಹೇಳುವುದಿಲ್ಲ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಸಕಾರಾತ್ಮಕ ಹವ್ಯಾಸದಿಂದ ಸುಖ ಜೀವನಕ್ಕೆ ದಾರಿ

ನಮ್ಮ ವಯಸ್ಸು ಮತ್ತು ಅಭ್ಯಾಸದ ಅವಧಿ ಎಷ್ಟೇ ದೀರ್ಘವಾಗಿದ್ದರೂ ಬದಲಾಗುವ ಸಮಯ ಎಂದೂ ಮೀರಿರುವುದಿಲ್ಲ. ಯಾವುದನ್ನು ಬದಲಾಯಿಸಬೇಕು ಎಂಬುದನ್ನು ಅರಿತುಕೊಂಡು, ಸೂಕ್ತ ವಿಧಾನಗಳನ್ನು ಬಳಸಿ ನಾವು ಬದಲಾಗಬಹುದು. ಆತ್ಮಘಾತುಕ ವರ್ತನೆಯನ್ನು ಕೈ ಬಿಟ್ಟು ಸಕಾರಾತ್ಮಕ ವರ್ತನೆಯನ್ನು ಮೈಗೂಡಿಸಿಕೊಳ್ಳುವ ಶಕ್ತಿ ಪ್ರತಿಯೊಬ್ಬರಲ್ಲೂ ಇದೆ.

ವಿಫಲರಾಗುವ ವ್ಯಕ್ತಿಗಳು ಯಾವ ಕಾರ್ಯವನ್ನು ಮಾಡಲು ಇಷ್ಟಪಡುವುದಿಲ್ಲವೋ ಅಥವಾ ಮಾಡುವುದಿಲ್ಲವೋ ಆ ಕಾರ್ಯಗಳನ್ನು ಮಾಡುವ ಅಭ್ಯಾಸಗಳನ್ನು ರೂಢಿಸಿಕೊಂಡಿರುವುದೇ ಯಶಸ್ವಿ ವ್ಯಕ್ತಿಗಳ ಸಾಧನೆ ಹಿಂದಿರುವ ಗುಟ್ಟು. ಸ್ವಲ್ಪ ಯೋಚಿಸಿ ನೋಡಿ, ಅದೇ ಕಾರ್ಯಗಳನ್ನು ಯಶಸ್ವಿ ವ್ಯಕ್ತಿಗಳು ಕೂಡ ಮಾಡಲು ಇಷ್ಟಪಡುವುದಿಲ್ಲ. ಆದರೂ ಮಾಡುತ್ತಾರೆ.

ಎಲ್ಲ ಅಭ್ಯಾಸಗಳು ಒಂದು ಪುಟ್ಟ ಎಳೆಯ ರೀತಿ ಆರಂಭವಾಗುತ್ತವೆ. ಆದರೆ, ಅಂತಿಮವಾಗಿ ನಿಲ್ಲಿಸಲಾರದಷ್ಟು ಅಗಾಧ ರೂಪ ಪಡೆಯುತ್ತವೆ. ಆದರೆ, ಮನೋಭಾವ  ಅಭ್ಯಾಸವಾಗಿದ್ದು, ಅದನ್ನು ಬದಲಿಸಿಕೊಳ್ಳಬಹುದು. ಇದು ಹಳೆಯ ಅಭ್ಯಾಸಗಳನ್ನು ತೊರೆದು ಹೊಸ ಹಾಗೂ ಸಕಾರಾತ್ಮಕ ಅಭ್ಯಾಸಗಳನ್ನು ಕಲಿಯುವುದಾಗಿದೆ. ಕೆಟ್ಟ ಹವ್ಯಾಸಗಳನ್ನು ನಿಯಂತ್ರಿಸುವುದು ಅವುಗಳಿಂದ ಹೊರಬರುವುದಕ್ಕಿಂತ ಸುಲಭ. ಪ್ರಲೋಭನಗಳಿಂದ ಹೊರ ಬಂದಾಗ ಒಳ್ಳೆಯ ಹವ್ಯಾಸಗಳು ರೂಢಿಯಾಗುತ್ತವೆ. ಒಳ್ಳೆಯ ಹವ್ಯಾಸಗಳು ಅಥವಾ ಸಕಾರಾತ್ಮಕ ಹವ್ಯಾಸಗಳು ಸುಖ ಜೀವನಕ್ಕೆ ದಾರಿಯಾಗಿವೆ. ಬದಲಾಗುವುದನ್ನು ಆರಂಭಿಸಲು ಸಮಯ ಎಂದಿಗೂ ಮೀರಿರುವುದಿಲ್ಲ.

ಪ್ರತಿಯೊಂದು ನಕಾರಾತ್ಮಕ ಅಥವಾ ಸಕಾರಾತ್ಮಕತೆಗಳೂ ವ್ಯತ್ಯಾಸಗಳನ್ನು ತರುತ್ತವೆ. ನೂತನ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಆದರೆ, ಒಮ್ಮೆ ನೀವು ಸಕಾರಾತ್ಮಕ ಅಭ್ಯಾಸಗಳನ್ನು ಕರಗತ ಮಾಡಿಕೊಂಡರೆ ಅವು ನಿಮ್ಮ ಜೀವನಕ್ಕೆ ಹೊಸ ಅರ್ಥವನ್ನು ನೀಡುತ್ತವೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಗೆಲುವಿಗೆ ಬೇಕು ಆಕರ್ಷಕ ವ್ಯಕ್ತಿತ್ವ

**ಜೀ**ವನದಲ್ಲಿ ಬರುವ ಸಮಸ್ಯೆಗಳಲ್ಲಿ ಹೆಚ್ಚಿನ ಅಂಶ ವ್ಯಕ್ತಿಗತ ಸಮಸ್ಯೆಗಳೇ. ನಾವು ವ್ಯಕ್ತಿಗತ ಸಮಸ್ಯೆಗಳನ್ನು ಪರಿಹರಿಸಿದರೆ, ವ್ಯವಹಾರ ಸಂಬಂಧಿ ಸಮಸ್ಯೆಗಳೇ ಇರುವುದಿಲ್ಲ.

ವಸ್ತುವಿನ ಜ್ಞಾನಕ್ಕಿಂತ ವ್ಯಕ್ತಿಗತ ಜ್ಞಾನ ಬಹಳ ಮುಖ್ಯ. ಯಶಸ್ವಿ ವ್ಯಕ್ತಿಗಳು ಆಕರ್ಷಕ ಹಾಗೂ ಪ್ರಿಯಕರ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. ಇಂಥವರಿಗೆ ಬೇರೆಯವರು ಸ್ನೇಹಯುತವಾದ ಸಹಕಾರವನ್ನು ನೀಡಲು ಮುಂದಾಗುತ್ತಾರೆ.

ಆಕರ್ಷಕ ಹಾಗೂ ಪ್ರಿಯವಾಗುವ ವ್ಯಕ್ತಿತ್ವವನ್ನು ಸುಲಭವಾಗಿ ಗುರುತಿಸಬಹುದು. ಆದರೆ, ಇದನ್ನು ವ್ಯಾಖ್ಯಾನಿಸುವುದು ಬಹಳ ಕಷ್ಟ. ಇದು ವ್ಯಕ್ತಿಯ ಮಾತು, ನಡಿಗೆ, ಧ್ವನಿ, ಆತ್ಮವಿಶ್ವಾಸ ಹಾಗೂ ಆತ್ಮೀಯತೆಯಲ್ಲಿ ವ್ಯಕ್ತವಾಗುತ್ತದೆ. ಆಕರ್ಷಣೀಯ ವ್ಯಕ್ತಿತ್ವವು ವ್ಯಕ್ತಿಯ ನಡವಳಿಕೆ, ಮನೋಭಾವ ಹಾಗೂ ಅಭಿವ್ಯಕ್ತಿಯ ಸಂಗಮ. ಕೆಲವು ಜನರು ಯಾವತ್ತೂ ಆಕರ್ಷವಾಗಿ ಕಾಣುತ್ತಾರೆ. ಎಷ್ಟೇ ವಯಸ್ಸಾಗಿದ್ದರೂ ಸುಂದರವಾಗಿ ಕಾಣುತ್ತಾರೆ. ಏಕೆಂದರೆ ಅವರಲ್ಲಿ ಇದು ಹೃದಯಾಳದಿಂದ ಹರಿಯುತ್ತಿರುತ್ತದೆ. ಅಭಿವ್ಯಕ್ತಿಯಷ್ಟು ಉತ್ತಮವಾದ ಉಡುಪು ಇನ್ನೊಂದಿಲ್ಲ. ಕಳಪೆ ಚಾರಿತ್ರ್ಯದ ಮೇಲೆ ಹಾಕಿದ ನಯ, ವಿನಯಗಳ ಪರದೆ ಕೆಲವು ದಿನ ಕೆಲಸ ಮಾಡಿದರೂ ಅದು ಜಾರಲು ಹೆಚ್ಚು ಸಮಯವೇನೂ ಬೇಕಿಲ್ಲ. ಚಾರಿತ್ರ್ಯ ಇಲ್ಲದ ಕೇವಲ ವ್ಯಕ್ತಿತ್ವ ಹಾಗೂ ಕುಶಲತೆಗಳನ್ನು ಧರಿಸಿದ ಸಂಬಂಧಗಳು, ಜೀವನವನ್ನು ದುಃಖಕರವಾಗಿಸಬಹುದು. ಆಕರ್ಷಕ ವ್ಯಕ್ತಿತ್ವವಿದ್ದು ಆಕರ್ಷಕ ನಡತೆಯಿಲ್ಲದಿದ್ದರೆ, ಒಳ್ಳೆಯ ಮೈಕಟ್ಟು ಇದ್ದು ಒಳ್ಳೆಯತನವಿಲ್ಲದ ಹಾಗೆ. ಅಂದರೆ ನಡತೆ, ಗುಣವೈಶಿಷ್ಟ್ಯ ಹಾಗೂ ಆಕರ್ಷಕ ವ್ಯಕ್ತಿತ್ವ ಗೆಲುವಿಗೆ ಅತ್ಯಗತ್ಯ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಪ್ರೇರಣೆ ಜೀವನದ ಚಾಲಕ ಶಕ್ತಿ

ನಮ್ಮ ಜೀವನದಲ್ಲಿ ಪ್ರೇರಣೆಯು ಚಾಲಕ ಶಕ್ತಿ. ಯಶಸ್ವಿಯಾಗಬೇಕೆಂಬ ಉತ್ಕಟ ಹಂಬಲದಿಂದ ಇದು ಬರುತ್ತದೆ. ಯಶಸ್ಸಿಲ್ಲದಿದ್ದರೆ ಜೀವನದಲ್ಲಿ ಅಂಥ ಸೊಗಸಿರುವುದಿಲ್ಲ. ಯಶಸ್ಸಿಲ್ಲದ ಜೀವನ ಕಳಾಹೀನ.

ಅಲ್ಪ ತೃಪ್ತಿಯೇ ಪ್ರೇರಣೆಯ ಅತಿ ದೊಡ್ಡ ಶತ್ರು. ಅಲ್ಪತೃಪ್ತಿ ಪರಿಶ್ರಮವನ್ನು ಕುಂಠಿತಗೊಳಿಸುತ್ತದೆ. ಜನ ಅಲ್ಪತೃಪ್ತರಾಗಿರುವಾಗ, ಅವರಿಗೆ ತಮ್ಮ ಜೀವನದಲ್ಲಿ ಏನು ಮಾಡಬೇಕು? ಎಂಬುದು ತಿಳಿದಿರುವುದಿಲ್ಲವಾದ್ದರಿಂದ ಅವರು ಏಳಿಗೆ ಹೊಂದುವುದಿಲ್ಲ.

ಪ್ರಬಲವಾದ ಪ್ರೇರಣೆ ಬರುವುದು ನಮ್ಮ ನಂಬಿಕೆಗಳಿಂದ. ಕ್ರಿಯಾತ್ಮಕವಾಗಲು ನಮಗೆ ನಾವು ಮಾಡುವುದರಲ್ಲಿ ನಂಬಿಕೆ ಇರಬೇಕು ಹಾಗೂ ನಮ್ಮ ಜೀವನದ ಹೊಣೆಗಾರಿಕೆಯನ್ನು ನಾವು ಹೊತ್ತುಕೊಳ್ಳಬೇಕು. ನಮ್ಮ ನಡವಳಿಕೆಗಳಿಗೆ ಹಾಗೂ ನಮ್ಮ ಕ್ರಿಯೆಗಳಿಗೆ ನಾವು ಹೊಣೆಗಾರಿಕೆಯನ್ನು ಹೊತ್ತುಕೊಂಡಾಗ ಜೀವನದ ಬಗ್ಗೆ ನಮ್ಮ ಮನೋಭಾವ ಸಕಾರಾತ್ಮಕ ಆಗುವುದು. ನಾವು ವೈಯಕ್ತಿಕವಾಗಿ ಹಾಗೂ ನಮ್ಮ ವೃತ್ತಿಯಲ್ಲಿ ಹೆಚ್ಚು ಉತ್ಪಾದಕರಾಗುತ್ತೇವೆ. ಕುಟುಂಬದಲ್ಲಿ ಹಾಗೂ ಕಚೇರಿಯಲ್ಲಿ ನಮ್ಮ ಸಂಬಂಧಗಳು ಉತ್ತಮಗೊಳ್ಳುತ್ತವೆ. ಜೀವನ ಹೆಚ್ಚು ಅರ್ಥಪೂರ್ಣ ಹಾಗೂ ಸಾರ್ಥಕವಾಗುತ್ತದೆ.

ವ್ಯಕ್ತಿಯ ಮೂಲ ಭೌತಿಕ ಅಗತ್ಯಗಳು ಈಡೇರಿದ ನಂತರ ಭಾವನಾತ್ಮಕ ಅಗತ್ಯಗಳು ಇನ್ನಷ್ಟು ಪ್ರೇರಣದಾಯಕವಾಗುತ್ತವೆ. ಪ್ರೇರಣೆ ಬಹಳ ಶಕ್ತಿಶಾಲಿ. ಇದಕ್ಕೆ ಮನವೊಲಿಸುವ, ಸಮಾಧಾನಪಡಿಸುವ ಮತ್ತು ಉತ್ತೇಜಿಸುವ ಸಾಮರ್ಥ್ಯವಿದೆ. ಇನ್ನೊಂದು ಅರ್ಥದಲ್ಲಿ ಪ್ರೇರಣೆಯೆಂದರೆ ಕ್ರಿಯೆಯನ್ನು ಮುನ್ನಡೆಸಲು ಅನುಕೂಲವಾಗುವ ಸಂಗತಿ. ಅದು ನಮ್ಮ ಜೀವನದ ಗತಿಯನ್ನೇ ಬದಲಿಸಬಲ್ಲ ಶಕ್ತಿಯಾಗಿದೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

# ಜ್ಞಾನ ಸಂಪಾದನೆ ಆಂತರಿಕ

ವಿವೇಕಾನಂದರ ಪ್ರಕಾರ ಜ್ಞಾನ ನಮ್ಮೊಳಗೆ ಇರುವಂತಹದು. ಅದನ್ನು ಹೊರಗಿನಿಂದ ಪಡೆಯಲಾಗುವುದಿಲ್ಲ. ಸಾಮಾನ್ಯ ದೃಷ್ಟಿಯಲ್ಲಿ ನೋಡಿದಾಗ ಜ್ಞಾನ ಹೊರಗಡೆಯಿಂದ ಬರುತ್ತದೆ ಎಂದು ನಮಗನಿಸುತ್ತದೆ. ಉಪಾಧ್ಯಾಯರಿಂದ, ಇತರ ವ್ಯಕ್ತಿಗಳಿಂದ, ಗ್ರಂಥಗಳಿಂದ, ಇನ್ನೂ ಬೇರೆ ಬೇರೆ ಮಾಧ್ಯಮಗಳಿಂದ ನಾವು ಜ್ಞಾನವನ್ನು ಸಂಪಾದಿಸುತ್ತೇವೆ. ಆದರೆ ನಿಜವಾಗಿಯೂ ಈ ಎಲ್ಲ ಮಾಧ್ಯಮಗಳೂ ಆಂತರಿಕ ಜ್ಞಾನೋತ್ಪತ್ತಿಗೆ ಪೂರಕಗಳು.

ಹೊರಗಡೆ ಇರುವುದು ಕೇವಲ ವಸ್ತುಗಳು ಅಷ್ಟೆ, ಆದರೆ ಜ್ಞಾನ ಉಂಟಾಗುವುದು ಅಂತರ್ಯದಲ್ಲಿ. ಹೊರಗಿನ ವಸ್ತುಗಳು ಕೇವಲ ಪ್ರಚೋದನೆ ನೀಡುತ್ತವೆ. ನಾನು ಒಂದು ವಸ್ತುವನ್ನೊ, ಘಟನೆಯನ್ನೊ ನೋಡಿದಾಗ ಆ ವಸ್ತು ಅಥವಾ ಘಟನೆಯ ಬಗ್ಗೆ ವಿವಿಧ ಬಗೆಯ ಜ್ಞಾನ ಉಂಟಾಗುವುದು ಮನಸ್ಸಿನಲ್ಲಿ. ಆ ಜ್ಞಾನ ವಸ್ತುವಿನಲ್ಲಾಗಲಿ, ಘಟನೆಯಲ್ಲಾಗಲಿ ಇರುವುದಿಲ್ಲ. ಒಳಗಿನ ಸ್ಮೃತಿ ರೂಪದ ಜ್ಞಾನದೊಡನೆ ಹೊರಗಿನಿಂದ ಬರುವ ಸಂವೇದನೆಯು ಸೇರಿ ಹೊಸ ಜ್ಞಾನ ಉಂಟಾಗುತ್ತದೆ.

ಜ್ಞಾನ ಪ್ರಕ್ರಿಯೆ ನಡೆಯುವುದು ಅಂತರಂಗದಲ್ಲಿ. ಹೊರಗಿನಿಂದ ತರಕಾರಿ, ಬೇಳೆ ಮುಂತಾದವುಗಳನ್ನು ತಂದು ಒಳಗಿರುವ ಮಸಾಲೆಯನ್ನು ಸೇರಿಸಿ ಪಾಕಶಾಲೆಯ ಒಳಗೆ ಅಡುಗೆ ನಡೆಯುವಂತೆ. ನರ ಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ, ಮೆದುಳಿನ ಕೇಂದ್ರಗಳು ಇಂದ್ರಿಯ ಸಂವೇದನೆಗಳನ್ನು ತೆಗೆದುಕೊಂಡು, ಅವುಗಳನ್ನು ನೆನಪಿನಲ್ಲಿರುವ ಮಾಹಿತಿಗಳೊಡನೆ ಹೋಲಿಸಿ ನ್ಯೂರಾನ್ಗಳ ಮೂಲಕ ಹೊಸ ಸಂಪರ್ಕಗಳನ್ನು ಏರ್ಪಡಿಸುತ್ತದೆ. ಈ ಸಂಪರ್ಕಗಳನ್ನು ನಾವು ಜ್ಞಾನವೆಂದು ಕರೆಯುವುದು.

ನಾವೊಂದು ಪುಸ್ತಕವನ್ನು ಓದುತ್ತಿರುವಾಗ ಪಠ್ಯ ವಿಷಯವು, ನೆನಪಿನ ಕೇಂದ್ರವನ್ನೂ ಸೇರಿದಂತೆ ಮೆದುಳಿನ ಅನೇಕ ಕೇಂದ್ರಗಳನ್ನು ಪ್ರಚೋದಿಸುತ್ತದೆ. ಇದರಿಂದ ನ್ಯೂರಾನುಗಳು ತ್ವರಿತ ಗತಿಯಲ್ಲಿ ಚಲಿಸತೊಡಗಿ ಹೊಸ ಹೊಸ ಸಂಪರ್ಕಗಳನ್ನು ನಿರ್ಮಿಸತೊಡಗುತ್ತವೆ. ಆಗ ನಮಗೆ ಓದಿದ್ದು ಅರ್ಥವಾಗುತ್ತಾ ಹೋಗುತ್ತದೆ. ಎಲ್ಲಿ ಸಂಪರ್ಕ ಕಡಿದು ಹೋಗುವುದೊ ಅಥವಾ ಏರ್ಪಡುವುದಿಲ್ಲವೋ ಆಗ ನಮಗೆ ಓದು ಅರ್ಥವಾಗುವುದಿಲ್ಲ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಕ್ಷಮಿಸುವ ಗುಣ ಬೆಳೆಸಿಕೊಳ್ಳಿ

ಎಲ್ಲಿಯವರೆಗೆ ನಾವು ಬೇರೆಯವರನ್ನು ದೂಷಿಸುತ್ತಿರುತ್ತೇವೋ ಅಲ್ಲಿಯವರೆಗೆ ನಮ್ಮ ಕಷ್ಟ, ತಾಪತ್ರಯಗಳು ಮುಂದುವರಿಯುತ್ತಲೇ ಇರುತ್ತವೆ. ನಾವು ಅಸಹಾಯಕರಾಗಿರುತ್ತೇವೆ. ನಮ್ಮ ಭಾವನೆ ಹಾಗೂ ನಡವಳಿಕೆಗೆ ಎಲ್ಲಿಯ ತನಕ ನಾವು ಜವಾಬ್ದಾರರಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಬದಲಾಗುವುದಿಲ್ಲ.

ಒಬ್ಬ ಸನ್ಯಾಸಿ ದಾರಿಯಂಚಿನ ಗುಡಿಸಲಲ್ಲಿ ತನ್ನ ಪಾಡಿಗೆ ತಾನು ಧ್ಯಾನ ಮಾಡುತ್ತಾ ದೇವರ ಸ್ಮರಣೆಯಲ್ಲಿ ನಿರತನಾಗಿದ್ದ. ದಾರಿಹೋಕನೊಬ್ಬ ಈ ಸನ್ಯಾಸಿಯನ್ನು ಕಂಡು ಬಾಯಿಗೆ ಬಂದಂತೆ ವಿನಾಕಾರಣ ಬೈಯುತ್ತಿದ್ದ. ಸನ್ಯಾಸಿ ಆ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅವನು ಬೈದರೆ ತನಗೇನಾದೀತೆಂದು ಬಾವಿಸಿ ಸುಮ್ಮನಿದ್ದ. ದಾರಿ ಹೋಕನ ಬೈಗುಳ ಸಂಪತ್ತು ಖರ್ಚಾಗಿರಬೇಕು. ಬೈಯುವುದನ್ನು ನಿಲ್ಲಿಸಿದ. ಆಗ ಸನ್ಯಾಸಿಯು ದಾರಿಹೋಕನನ್ನು ಕರೆದು ಕೇಳಿದ. 'ನಾವು ಕೊಟ್ಟಿದ್ದೆಲ್ಲ ಸ್ವೀಕೃತವಾಗದಿದ್ದರೆ, ಅದು ಯಾರಿಗೆ ಸೇರುತ್ತದೆ?' ಎಂದು. ದಾರಿಹೋಕ ನಿರುತ್ತರನಾದ.

ಭಾವನಾತ್ಮಕ ವೈಫಲ್ಯದ ಸಂಕೇತವೇ ಕಹಿ ಭಾವನೆ ಅಥವಾ ಖಿನ್ನತೆ. ಏನಾದರೂ ಒಳ್ಳೆಯದನ್ನು ಮಾಡುವ ನಮ್ಮ ಸಾಮರ್ಥ್ಯವನ್ನೇ ಇದು ನಿಸ್ಸತ್ವಗೊಳಿಸುತ್ತದೆ. ನಮ್ಮದೇ ಆದ ಗುಣಮಟ್ಟವನ್ನು ನಿರ್ಧರಿಸಿಕೊಂಡು ನಮಗೆ ನಾವು ಯಾವತ್ತೂ ಪ್ರಾಮಾಣಿಕವಾಗಿರಬೇಕು. ನಮ್ಮ ವಿರುದ್ಧ ಸ್ಪರ್ಧಿಸಿ ಸದಾ ಸಂತೋಷದಿಂದ ಇರುವ ನಿರ್ಧಾರವನ್ನು ಮಾಡಬೇಕು. ನಮ್ಮನ್ನು ಹಾಗೂ ಇತರರನ್ನು ಕ್ಷಮಿಸುವ ಗುಣವನ್ನು ಬೆಳೆಸಿಕೊಂಡು ವೈರತ್ವ, ಹಗೆತನ ಸಾಧಿಸದೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಹಾಗೂ ಸನ್ನಿವೇಶದಲ್ಲಿ ಸಕಾರಾತ್ಮಕವಾದದ್ದನ್ನು ಕಾಣುವಂತಾಗಬೇಕು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ವಿವೇಕ ಇರದಿದ್ದರೆ ಜೀವನ ಅರ್ಥಹೀನ

ವಿಶ್ಲೇಷಣಾತ್ಮಕ ಮನೋಭಾವವನ್ನು ವಿವೇಕ ಬುದ್ಧಿ ಎಂದು ಕರೆಯಬಹುದು. ವಿವೇಕವೆಂದರೆ ವಿಭಾಗಿಸುವುದು ಎಂದರ್ಥ. ಸತ್ಯಾಸತ್ಯಗಳನ್ನು, ನಿತ್ಯಾನಿತ್ಯಗಳನ್ನು, ಸುಖ ದುಃಖಗಳನ್ನು, ಒಳಿತು ಕೆಡುಕುಗಳನ್ನು, ಗುಣ ದೋಷಗಳನ್ನು, ಕಾರ್ಯಾ-ಕಾರ್ಯಗಳನ್ನು ವಿಭಾಗಿಸಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವೇ ವಿವೇಕ.

ನಿತ್ಯ ಜೀವನದಲ್ಲಿ ಈ ವಿವೇಕ ಬುದ್ಧಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸುತ್ತದೆ. ನಾವು ಸಮಾಜದಲ್ಲಿರುವಾಗ ಅನೇಕ ಸತ್ಯ ಅಥವಾ ದುಷ್ಟ ಭಾವಗಳಿಗೆ ಒಳಗಾಗುತ್ತೇವೆ. ವಿಶೇಷವಾಗಿ ಆಧುನಿಕ ಕಾಲದಲ್ಲಿ ಇಂತಹ ಪ್ರಭಾವಗಳು ಅತ್ಯಧಿಕ. ವಿವಿಧ ಪತ್ರಿಕೆಗಳು, ಜಾಹೀರಾತುಗಳು, ಟಿವಿ, ಇಂಟರ್ನೆಟ್‌ಗಳು ಮುಂತಾದ ಮಾಧ್ಯಮಗಳು ನಮ್ಮ ಮೇಲೆ ಅನೇಕ ಬಗೆಯ ಪ್ರಭಾವಗಳನ್ನು ನಮ್ಮ ಅರಿವಿಲ್ಲದಂತೆಯೇ ಬೀರುತ್ತಿರುತ್ತವೆ. ಇಲ್ಲಿ ನಾವು ಹಂಸಕ್ಷೀರ ನ್ಯಾಯವನ್ನು ಉಪಯೋಗಿಸಿ ದುಷ್ಟಭಾವಗಳಿಗೆ ಒಳಗಾಗದೆ ಸದ್ಭಾವಗಳಿಂದ ಪ್ರಯೋಜನವನ್ನು ಪಡೆಯಬೇಕು.

ಇಲ್ಲದಿದ್ದರೆ ನಮ್ಮ ಜೀವನ ಗಾಳಿಯಲ್ಲಿ ತೂರಿಬಿಟ್ಟ ತರಗೆಲೆಯಂತಾಗಿ ಯಾವ ಒಂದು ನಿರ್ದಿಷ್ಟ ನೆಲೆಯೂ ಇಲ್ಲದೆ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತದೆ. ಇಂದಿನ ಯುವಕರ ಜೀವನದಲ್ಲಿ ಈ ಅರ್ಥಹೀನತೆಯನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಜೀವನ ಅರ್ಥಹೀನವಾದಾಗ ಎಲ್ಲ ಉನ್ನತ ಮೌಲ್ಯಗಳನ್ನು ಜನರು ಕಡೆಗಣಿಸಿ ಸ್ವೇಚ್ಛಾಚಾರದ ಜೀವನಕ್ಕೆ ಇಳಿಯುತ್ತಾರೆ. ಆದ್ದರಿಂದ ಆಧುನಿಕ ಜೀವನದಲ್ಲಿ ವಿವೇಕ ಬುದ್ಧಿ ಹೆಚ್ಚು ಜಾಗೃತವಾಗಿರಬೇಕಾಗುತ್ತದೆ.

ಇನ್ನೊಂದು ದೃಷ್ಟಿಯಿಂದ ಇದನ್ನು ಆತ್ಮವಿಶ್ಲೇಷಣೆ ಎಂದು ಕರೆಯಬಹುದು. ನಮ್ಮ ಆಲೋಚನೆ, ಮಾತು ಕೃತಿಗಳ ಹಿಂದೆ ಅನೇಕ ಸದುದ್ದೇಶ ದುರುದ್ದೇಶಗಳು ಅಡಗಿರುತ್ತವೆ. ಅನೇಕ ಆಸೆ, ಆಕಾಂಕ್ಷೆಗಳು ಹುದುಗಿಕೊಂಡಿರುತ್ತವೆ. ಇವುಗಳನ್ನು ನಿರ್ಲಿಪ್ತ ಭಾವದಿಂದ ವಿಶ್ಲೇಷಿಸಿ, ಇವುಗಳ ನಿಜವಾದ ಸ್ವರೂಪವನ್ನು ಕಂಡುಹಿಡಿಯುವುದು, ಇವುಗಳ ಹಿಂದಿರುವ ಮೂಲ ಸೂತ್ರವನ್ನು ಪತ್ತೆ ಹಚ್ಚುವುದು ವಿವೇಕದ ಕಾರ್ಯ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

# ಸ್ವಹಿತದಿಂದ ಸಮಾಜದ ಹಿತ

ವ್ಯಕ್ತಿ ತನ್ನ ಆತ್ಮೋನ್ನತಿಯನ್ನು ಸಾಧಿಸುವುದರ ಮೂಲಕವೇ ಸಮೂಹದ ಹಿತವನ್ನು ಸಾಧಿಸುತ್ತಾನೆ. ತನ್ನ ಹಿತವನ್ನು ಅವನು ಕಡೆಗಣಿಸಿದಷ್ಟೂ ಸಮಾಜದ ಹಿತ ಕಡೆಗಣಿಸುತ್ತಾನೆ.

ಇಡೀ ದೇಹ ಸ್ವಸ್ತವಾಗಿರಬೇಕಾದರೆ ಪ್ರತಿಯೊಂದು ಅಂಗಾಂಗವೂ ಆರೋಗ್ಯವಾಗಿರಬೇಕು. ಇದು ಸಮಾಜಕ್ಕೂ ಅನ್ವಯಿಸುತ್ತದೆ. ಸಮಾಜವೆಂಬ ಬೃಹತ್ ದೇಹವು ನಿರಾಮಯವಾಗಿರಬೇಕಾದರೆ ಅದರ ಅಂಗಾಂಗಗಳಾದ ನಾವೆಲ್ಲರೂ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಆರೋಗ್ಯವಂತರಾಗಿರಬೇಕು. ಆದ್ದರಿಂದಲೇ ಪಾಶ್ಚಾತ್ಯ ಪ್ರಸಿದ್ಧ ತತ್ವಜ್ಞಾನಿ ಸ್ಪಿನೋಚ ಹೇಳುತ್ತಾರೆ.

‘ಎಷ್ಟರಮಟ್ಟಿಗೆ ವ್ಯಕ್ತಿಯು ಶ್ರಮವಹಿಸಿ ತನ್ನ ಲಾಭವನ್ನು ಅರಸುತ್ತಾನೆಯೋ ಅಂದರೆ ತನ್ನನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾನೆಯೋ, ಅಷ್ಟರಮಟ್ಟಿಗೆ ಅವನು ಸದ್ಗುಣ ಸಂಪನ್ನನಾಗುತ್ತಾನೆ. ಅದಲ್ಲದೆ ವ್ಯಕ್ತಿಯು ತನ್ನನ್ನು ತಾನು ಕಡೆಗಣಿಸಿದಷ್ಟೂ ಅವನು ನಿಃಸತ್ವನಾಗುತ್ತಾನೆ. ಇಂತಹ ವ್ಯಕ್ತಿಯಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಆಗದು’

ವ್ಯಕ್ತಿಯು ಸಮಾಜವೆಂಬ ದೇಹದ ಒಂದು ಭಾಗ ಎಂದ ಮಾತ್ರಕ್ಕೆ ಅವನು ಯಂತ್ರದ ಒಂದು ಭಾಗದಂತಲ್ಲ. ಯಂತ್ರದ ಭಾಗಗಳು ಜಡ. ಅವಕ್ಕೆ ತನ್ನತನವಿರುವುದಿಲ್ಲ. ತಮ್ಮ ಆತ್ಮೋನ್ನತಿಯ ಬಗ್ಗೆ ಚಿಂತಿಸಲಾರವು. ಆದರೆ, ವ್ಯಕ್ತಿಯು ಚೇತನಾತ್ಮಕ. ಅವನಿಗೆ ತನ್ನ ಅರಿವಿದೆ. ತನ್ನ ಉನ್ನತಿಯ ಜವಾಬ್ದಾರಿಯುಳ್ಳವನು. ತನ್ನ ಉನ್ನತಿಯು ಸಮಾಜದ ಉನ್ನತಿಯನ್ನೂ, ಸಮಾಜದ ಉನ್ನತಿಯು ತನ್ನ ಉನ್ನತಿಯನ್ನೂ ಅವಲಂಬಿಸಿದೆ ಎಂಬುದನ್ನು ಅವನು ಅರಿಯಬೇಕು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಅನುಭೂತಿ ಸಕಾರಾತ್ಮಕ ವ್ಯಕ್ತಿತ್ವದ ಪ್ರತೀಕ

**ನಾವು** ಇತರರ ವಿಷಯದಲ್ಲಿ ತಪ್ಪು ಮಾಡುವುದು ಮತ್ತು ಸ್ವತಃ ಅನುಭವಿಸುವುದು ಎರಡೂ ವಿಭಿನ್ನ ಸಂಗತಿಗಳು. ಅನುಭೂತಿ ಸಕಾರಾತ್ಮಕ ವ್ಯಕ್ತಿತ್ವದ ಒಂದು ಪ್ರತೀಕ. 'ಯಾರಾದರೂ ನನ್ನೊಂದಿಗೆ ಈ ರೀತಿ ನಡೆದುಕೊಂಡಿದ್ದರೆ ನನಗೆ ಹೇಗೆ ಅನ್ನಿಸುತ್ತಿತ್ತು?' ಎಂದು ಅನುಭೂತಿಯಿರುವ ವ್ಯಕ್ತಿ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ.

ಬಾಲಕನೊಬ್ಬ ಮುದ್ದು ನಾಯಿಮರಿ ಒಂದನ್ನು ಕೊಳ್ಳಲು ಅಂಗಡಿಗೆ ಹೋದ. ತಲಾ ₹500 ಬೆಲೆಯ ನಾಲ್ಕು ನಾಯಿ ಮರಿಗಳು ಸಾಲಾಗಿ ಕೂತಿದ್ದವು. ಒಂದು ಮರಿ ಮಾತ್ರ ಒಂಟಿಯಾಗಿ ಮೂಲೆಯಲ್ಲಿ ಇತ್ತು.

'ಆ ಮರಿಯೂ ಇವುಗಳ ಜಾತಿಗೆ ಸೇರಿದ್ದೇ? ಅದಕ್ಕೂ ಅಷ್ಟೇ ಬೆಲೆಯೇ? ಅದೇಕೆ ಮೂಲೆಯಲ್ಲಿ ಕುಳಿತಿದೆ?' ಬಾಲಕ ಅಂಗಡಿಯವನ ಮುಂದೆ ಪ್ರಶ್ನೆಗಳ ಸರಮಾಲೆಯನ್ನೇ ಇಟ್ಟ. 'ಅದೂ ಇವುಗಳ ಜಾತಿಗೇ ಸೇರಿದ್ದು, ಅದು ಅಂದಗೆಟ್ಟಿದೆ. ಅದಕ್ಕೆ ಅಂಗವೈಕಲ್ಯವಿದೆ. ಆದ್ದರಿಂದ ಮಾರಾಟಕ್ಕಿಟ್ಟಿಲ್ಲ' ಎಂದ ಅಂಗಡಿಯವ.

'ನಾನು ಆ ನಾಯಿ ಜೊತೆ ಒಮ್ಮೆ ಆಟವಾಡಬಹುದೇ?' ಬಾಲಕ ಪ್ರಶ್ನಿಸಿದ. ಅಂಗಡಿಯವ ಆಗಬಹುದು ಎಂದ. ಬಾಲಕ ಮೂಲೆಯಲ್ಲಿದ್ದ ನಾಯಿಮರಿಯನ್ನು ಅಕ್ಕರೆಯಿಂದ ಎತ್ತಿಕೊಂಡ. ನಾಯಿಮರಿಯೂ ಅಷ್ಟೇ ಪ್ರೀತಿಯಿಂದ ಬಾಲಕನ ಮುಖ ನೆಕ್ಕಿತು. 'ನನಗೆ ಬೇಕಾಗಿದ್ದೂ ಇದೇ ಮರಿ' ಎಂದು ಬಾಲಕ ನಿಶ್ಚಯಿಸಿದ. 'ನನಗೆ ಇದೇ ಮರಿ ಬೇಕು' ಎಂದು ಅಂಗಡಿಯವನನ್ನು ಕೇಳಿದ. 'ಅದು ವ್ಯಾಪಾರಕ್ಕಿಲ್ಲ' ಅಂಗಡಿಯವ ಮತ್ತೆ ಉದ್ಗರಿಸಿದ. ಆದರೆ, ಬಾಲಕ ಹಠ ಬಿಡಲಿಲ್ಲ. ಕೊನೆಗೂ ಅಂಗಡಿಯಾತ ಆ ನಾಯಿಮರಿಯನ್ನು ಮಾರಲು ಒಪ್ಪಿಕೊಂಡ.

ಬಾಲಕ ತನ್ನ ಜೇಬಿನಿಂದ ₹100 ತೆಗೆದು ಅಂಗಡಿಯವನಿಗೆ ನೀಡಿದ. ಉಳಿದ ₹400 ಅಮ್ಮನಿಂದ ಕೇಳಿ ತರಲು ಮನೆಗೆ ಓಡಿದ. ಮರಳಿ ಬಂದ ಬಾಲಕನನ್ನು ಅಂಗಡಿಯವ ಪ್ರಶ್ನಿಸಿದ. 'ಈ ಕುರೂಪಿ ಮರಿಗೆ ನೀನೇಕೆ ಪೂರ್ತಿ ಹಣ ನೀಡುತ್ತಿರುವೆ. ಇಷ್ಟೇ ಹಣಕ್ಕೆ ನೀನು ಒಳ್ಳೆಯ ಮರಿಯನ್ನೇ ಖರೀದಿಸಬಹುದಲ್ಲ?' ಬಾಲಕ ಮಾತನಾಡಲಿಲ್ಲ. ತನ್ನ ಎಡಗಾಲಿನ ಪ್ಯಾಂಟು ಮೇಲಕ್ಕೇರಿಸಿದ. ಅದಕ್ಕೆ ಕೃತಕ ಪಟ್ಟಿ ಜೋಡಿಸಲಾಗಿತ್ತು. ಅಂಗಡಿಯವ ಹೇಳಿದ, 'ನನಗೆ ಅರ್ಥವಾಯಿತು, ಈ ಮರಿಯನ್ನೇ ತೆಗೆದುಕೋ...' ಇದು ಅನುಭೂತಿ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ವಾದವೆಂದರೆ ಅಜ್ಞಾನದ ವಿನಿಮಯ

ಸ್ವಲ್ಪ ಜಾಗರೂಕತೆಯಿಂದ ನೋವು, ವಾದಗಳನ್ನು ತಪ್ಪಿಸಬಹುದು. ವಾದದಲ್ಲಿ ಗೆಲ್ಲಲು ಅದರಿಂದ ದೂರವಿರುವುದು ಒಳ್ಳೆಯ ಮಾರ್ಗ. ವಾದದಿಂದ ಗೆಲ್ಲುವುದು ಖಂಡಿತಾ ಸಾಧ್ಯವಿಲ್ಲ. ವಾದದಲ್ಲಿ ಗೆದ್ದವನು ಸೋತ; ಸೋತವನೂ ಗೆದ್ದ. ವಾದದಲ್ಲಿ ಗೆದ್ದು ಒಳ್ಳೆಯ ಉದ್ಯೋಗ, ಸ್ನೇಹಿತ ಅಥವಾ ಒಳ್ಳೆಯ ಸಂಬಂಧ ಹೀಗೆ ಏನಾದರೊಂದನ್ನು ಕಳೆದುಕೊಂಡರೆ ಅದು ಯಾವ ಬಗೆಯ ಗೆಲುವು? ಮೇರೆ ಮೀರಿದ ಅಹಂಕಾರವೇ ವಾದಕ್ಕೆ ಮೂಲ.

ವಾದ ಮಾಡುವುದೆಂದರೆ ಸೋಲುವ ಯುದ್ಧದಲ್ಲಿ ಸೇರಿಕೊಂಡಂತೆ. ಒಂದೊಮ್ಮೆ ಗೆದ್ದರೂ ಜಯ ಬಹಳ ದುಬಾರಿಯಾಗುತ್ತದೆ. ಭಾವನಾತ್ಮಕ ಸಂಘರ್ಷಗಳು ನೀವು ಗೆದ್ದ ನಂತರವೂ ಕಾಡುತ್ತಲೇ ಇರುತ್ತವೆ. ವಾದದಲ್ಲಿ ತೊಡಗಿದ್ದವರಿಬ್ಬರು ತಮ್ಮ ಮಾತೇ ಕೊನೆಯದಾಗಬೇಕೆಂದು ಬಯಸುತ್ತಾರೆ. ಇದು ಕೇವಲ ಅಹಂಭಾವದ ಸಂಘರ್ಷವೇ ಹೊರತು, ಬೇರೇನೂ ಅಲ್ಲ. ಎಲ್ಲವೂ ತಿಳಿದಿದೆ ಎಂದು ಭಾವಿಸುವ ಮೂರ್ಖನಿಗಿಂತ ದೊಡ್ಡ ಮೂರ್ಖ ಇಂಥವನೊಂದಿಗೆ ವಾದಿಸುವವನು!

ಎದುರಿಗಿರುವ ವ್ಯಕ್ತಿಯು ವಾದಿಸುವ ಪ್ರವೃತ್ತಿಯವನಾಗಿದ್ದರೆ ಹಾಗೂ ಆತನ ವಾದವನ್ನು ನೀವು ತಪ್ಪೆಂದು ಸಾಬೀತುಪಡಿಸುವುದರಿಂದ ಲಾಭವೇನು? ವಾದ -ವಿವಾದ ಆರಂಭವಾಗುವುದೇ ಸಂಕುಚಿತ ಮನಸ್ಸಿನಿಂದ. ಯಾರು ಸರಿ ಎನ್ನುವುದರಿಂದ, ಯಾವುದು ಸರಿ ಎನ್ನುವುದರಿಂದಲ್ಲ.

ಜೀವನದಲ್ಲಿ ಶ್ರೇಷ್ಠವಾದುದನ್ನು ಸಾಧಿಸಬೇಕಾದರೆ ಪ್ರೌಢಿಮೆಯಿಂದ ವರ್ತಿಸುವುದನ್ನು ಕಲಿಯಬೇಕು. ಪ್ರೌಢತೆ ಎಂದರೆ ಅನಗತ್ಯ ವಿಚಾರಗಳಲ್ಲಿ, ಕ್ಷುಲ್ಲಕವಾದ ವಿವಾದಗಳಲ್ಲಿ ಸಿಲುಕಿಕೊಳ್ಳದೇ ಇರುವುದು. ವಾದ ಉದ್ರೇಕದ ಅಭಿವ್ಯಕ್ತಿ, ಅಜ್ಞಾನದ ವಿನಿಮಯ. ವಾದ ಅಹಂಕಾರ ಮತ್ತು ಸಂಕುಚಿತ ಮನಸ್ಸಿನಿಂದ ಹುಟ್ಟುವುದು. ಪೂರ್ವಾಗ್ರಹ ಪೀಡಿತ ಮನಸ್ಸಿನೊಂದಿಗೆ ವಾದಿಸುವುದರಿಂದ ಪ್ರಯೋಜನವಿಲ್ಲ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ದೋಣಿಯೊಳಗೆ ನೀರು ಇರಬಾರದು

ಸಮುದ್ರದ ಮಧ್ಯೆ ಒಂದು ದೊಡ್ಡ ಆಯಸ್ಕಾಂತ ಪರ್ವತವಿದೆಯಂತೆ. ಏನಾದರೂ ಹಡಗು ಅದರ ಹತ್ತಿರ ಹೋದರೆ ಆ ಹಡಗಿನಲ್ಲಿರುವ ಬೋಲ್ಟು ನಟ್ಟು ಮುಂತಾದ ಕಬ್ಬಿಣದ ಭಾಗಗಳೆಲ್ಲ ಕಳಚಿಕೊಂಡು ಪರ್ವತದ ಕಡೆ ಆಕರ್ಷಿತವಾಗಿ ಹೋಗಿಬಿಡುತ್ತವೆಯಂತೆ ಮತ್ತು ಹಡಗು ಮುರಿದು ನೀರು ಪಾಲಾಗುತ್ತದೆ!

ನಿಜವಾಗಿ ಆ ಹಡಗನ್ನು ಹಿಡಿದಿರಿಸಿದ ಅಂಶವೇ ಕಬ್ಬಿಣ, ಅದೇ ಅದರ ಪ್ರಧಾನ ಅಂಶ. ಹಾಗೆಯೇ ನಮ್ಮ ವ್ಯಕ್ತಿತ್ವವೆಂಬ ಹಡಗಿನಲ್ಲಿ ಪ್ರಧಾನ ಅಂಶವೇ ಅಧ್ಯಾತ್ಮ. ಅದೇ ನಮ್ಮನ್ನು ಗಟ್ಟಿಯಾಗಿ ಹಿಡಿದಿರಿಸಿರುವುದು. ನಮಗೆ ನಿಜವಾದ ವ್ಯಕ್ತಿತ್ವವನ್ನು ಕೊಟ್ಟಿರುವುದು. ಅದನ್ನೇ ಭಗವಂತನೆಂಬ ಚುಂಬಕ ಪರ್ವತವು ಆಕರ್ಷಿಸಿ ಬಿಟ್ಟರೆ ಮತ್ತೆ ಆ ವ್ಯಕ್ತಿತ್ವ ಉಳಿಯುವುದೆಂತು! ಅದು ಪ್ರಕೃತಿಯಲ್ಲಿ ಲೀನವಾಗಿ ಬಿಡುತ್ತದೆ.

ಹಡಗು ನೀರಿನಲ್ಲಿ ಇರಬೇಕು. ಹಾಗೆಯೇ ನಾವು ಸಂಸಾರದಲ್ಲಿಯೇ ಇರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ದೋಣಿ ನೀರಿನಲ್ಲಿದ್ದರೆ ಪರವಾಗಿಲ್ಲ, ದೋಣಿಯೊಳಗೆ ನೀರು ಇರಬಾರದು ಎಂದು. ಹಾಗೆಯೇ, ನಾವು ಸಂಸಾರದಲ್ಲಿ ಇದ್ದರೆ ತೊಂದರೆ ಇಲ್ಲ. ಸಾಂಸಾರಿಕತೆ ನಮ್ಮೊಳಗೆ ನುಗ್ಗದಂತೆ ಎಚ್ಚರಿಕೆ ವಹಿಸಬೇಕು.

ಒಮ್ಮೆ ಕೆಲವರು ದೋಣಿಯಲ್ಲಿ ಪಯಣಿಸುತ್ತಿರುವಾಗ ಒಂದು ಚಿಕ್ಕ ರಂಧ್ರದ ಮೂಲಕ ನೀರು ದೋಣಿಯನ್ನು ಪ್ರವೇಶಿಸ ತೊಡಗಿತು. ಒಬ್ಬ ಮೇಧಾವಿ ಒಂದು ಉಪಾಯವನ್ನು ಹೇಳಿದ. ದೋಣಿಯಲ್ಲಿ ಇನ್ನೊಂದು ರಂಧ್ರವನ್ನು ಮಾಡಿದರೆ ಆ ನೀರು ಹೊರಗೆ ಹೊರಟು ಹೋಗುತ್ತದೆ. ನಾವೂ ಕೂಡ ಅನೇಕಾನೇಕ ಆಶಾ ರಂಧ್ರಗಳನ್ನು ಮಾಡಿಕೊಂಡು, ಸಾಂಸಾರಿಕತೆ ನಮ್ಮೊಳಗೆ ಪ್ರವೇಶಿಸುವಂತೆ ಮಾಡಿಕೊಂಡು ಸಂಸಾರದ ನೀರಿನಲ್ಲಿ ಮುಳುಗಿಬಿಡುತ್ತೇವೆ. ಆದ್ದರಿಂದಲೇ ಶ್ರೀರಾಮಕೃಷ್ಣರು ಸಂಸಾರಿಕತೆ ಒಳಗೆ ಪ್ರವೇಶಿಸಿದಂತೆ ನೋಡಿಕೊಳ್ಳಿ ಎಂದು ಎಚ್ಚರಿಕೆ ನೀಡುತ್ತಾರೆ. ನಮ್ಮ ಹಡಗಿಗೆ ಸಾಂಸಾರಿಕತೆ ತಗುಲಿಬಿಟ್ಟರೆ ಅದರಲ್ಲಿರುವ ಕಬ್ಬಿಣದ ಭಾಗಕ್ಕೆ ತುಕ್ಕು ಹಿಡಿಯುತ್ತದೆ. ಆಗ ಅದು ಶ್ರೀರಾಮಕೃಷ್ಣರಂತಹ ಮಹಾಚುಂಬಕ ಪರ್ವತದ ಹತ್ತಿರ ಹೋದರೂ ನಮ್ಮ ವ್ಯಕ್ತಿತ್ವ ಬಂಧನ ಕಳಚಿ ಹೋಗುವುದಿಲ್ಲ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,**
ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಯುಜನರಿಗೆ ವಿವೇಕರೇ ಆದರ್ಶ

ಆಧುನಿಕ ಯುಗವನ್ನು ಯುವಕರ ಯುಗವೆಂದು ಪರಿಗಣಿಸಬಹುದು. ಹಿಂದೆಂದಿಗಿಂತಲೂ ಯುವಕರು ಈಗ ಸಾಮಾಜಿಕ ಆಗುಹೋಗುಗಳಲ್ಲಿ ಭಾಗವಹಿಸುತ್ತಿದ್ದಾರೆ. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತ ಅಧಿಕ ಯುವಕರನ್ನು ಹೊಂದಿದೆ. ಯಾವುದೇ ಕ್ಷೇತ್ರದಲ್ಲಿ ಹೊಸ ಕ್ರಾಂತಿ ಪ್ರಾರಂಭವಾಗುವುದು ಯುವಕರಿಂದಲೇ.

ಎಲ್ಲರ ಗಮನವನ್ನು ಸೆಳೆದು ಅಸಾಮಾನ್ಯ ಸಾಮರ್ಥ್ಯದ ಚಿರ ಜಾಗೃತವಾದ ಈ ಯುವಶಕ್ತಿಯನ್ನು ರಚನಾತ್ಮಕವಾಗಿ ಹರಿಸಲು ಯುವಕರು ಮೆಚ್ಚಬಹುದಾದ ಆದರ್ಶವನ್ನು ಅವರ ಮುಂದೆ ಇಡಬೇಕಾಗುತ್ತದೆ. ಅಂತಹ ಆದರ್ಶ ಸ್ವಾಮಿ ವಿವೇಕಾನಂದರಲ್ಲಿ ನಮಗೆ ದೊರೆಯುತ್ತದೆ.

ಹಳೆಯದನ್ನು ಪ್ರಶ್ನಿಸುವ ಒಂದು ಮುಖ್ಯ ಗುಣವನ್ನು ನಾವು ವಿವೇಕಾನಂದರಲ್ಲಿ ಕಾಣುತ್ತೇವೆ. ಎಲ್ಲ ಬಗೆಯ ಮೂಢ ನಂಬಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಆಧುನಿಕ ಕಾಲಕ್ಕೆ ಅನ್ವಯವಾಗುವ ಹೊಸ ಸಮಾಜ ನಿರ್ಮಾಣಕ್ಕಾಗಿ ಅವರು ಕರೆಕೊಟ್ಟರು.

ಈ ಹೊಸತನದ ಬಯಕೆ ಯುವಕರಲ್ಲಿ ಕಂಡುಬರುವ ಬಹು ಮುಖ್ಯ ಲಕ್ಷಣ. ಆದರೆ ಈ ಹೊಸತನದ ಬಯಕೆ ಹಳೆಯದನ್ನೆಲ್ಲ ತಿರಸ್ಕರಿಸುವ, ಲೇವಡಿ ಮಾಡುವ ಪ್ರವೃತ್ತಿಯಾಗಿ ಉಳಿಯಬಾರದು. ಹಳೆಯದನ್ನು ಹೊಸದಾಗಿ ಮಾರ್ಪಡಿಸುವ ರಚನಾತ್ಮಕ ಶಕ್ತಿಯಾಗಿ ಅಭಿವ್ಯಕ್ತವಾಗಬೇಕು. 'ನಮ್ಮ ದೇಶದ ಪ್ರಗತಿಯು ಹಳೆಯದನ್ನು ಆಧರಿಸಿರಬೇಕು. ಹಳೆಯದರ ಆಧಾರದ ಮೇಲೆ ಹೊಸದನ್ನು ನಿರ್ಮಿಸಬೇಕೆನ್ನುವ' ಸ್ವಾಮಿ ವಿವೇಕಾನಂದರ ಆದರ್ಶ ಯುವಕರ ಹೊಸತನ ಬಯಸುವ ಪ್ರವೃತ್ತಿಗೆ ಒಂದು ಸೃಜನಾತ್ಮಕ ತಳಹದಿಯನ್ನು ನೀಡುತ್ತದೆ. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ,** ಅಧ್ಯಕ್ಷರು, ಶ್ರೀಶಾರದಾ ಆಶ್ರಮ, ವಿಜಯಪುರ

## ಸುಖಕ್ಕಿಂತ ದುಃಖವೇ ದೊಡ್ಡ ಶಿಕ್ಷಕ

ನಾವು ಜೀವನದಲ್ಲಿ ವಿವಿಧ ಬಗೆಯ ಅನುಭವಗಳನ್ನು ಪಡೆಯುತ್ತೇವೆ. ಅವು ತೃಪ್ತಿಕರವಾಗಿರಬಹುದು ಅಥವಾ ಅತೃಪ್ತಿಕರವಾಗಿರಬಹುದು. ಇವು ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

ಸ್ವಾಮಿ ವಿವೇಕಾನಂದರು ಹೇಳುವಂತೆ, ‘ಶೀಲ ನಿರ್ಮಾಣದಲ್ಲಿ ಸುಖ ದುಃಖಗಳೆರಡೂ ಸಮಾನವಾದ ಪಾತ್ರವನ್ನು ವಹಿಸುತ್ತವೆ. ಹಾಗೆ ನೋಡಿದರೆ ಕೆಲವು ಸಂದರ್ಭಗಳಲ್ಲಿ ಸುಖಕ್ಕಿಂತ ದುಃಖವೇ ದೊಡ್ಡ ಶಿಕ್ಷಕನಾಗಿ ವರ್ತಿಸುತ್ತದೆ. ಜಗತ್ತಿನಲ್ಲಿ ಕಾಣಿಸಿಕೊಂಡಿರುವ ಮಹಾನ್ ವ್ಯಕ್ತಿಗಳಲ್ಲಿ ಅನೇಕ ವೇಳೆ ದುಃಖವೇ ಸುಖಕ್ಕಿಂತಲೂ ಹೆಚ್ಚಾದ ಶಿಕ್ಷಣವನ್ನು ಕೊಟ್ಟು ಬುದ್ಧಿ ಕಲಿಸಿತೆಂದೂ, ಐಶ್ವರ್ಯಕ್ಕಿಂತಲೂ ದಾರಿದ್ರ್ಯವೇ ಅಧಿಕವಾಗಿ ಕಲಿಸಿತೆಂದೂ, ಮನುಷ್ಯನಲ್ಲಿ ಅಡಗಿರುವ ಅಂತರಾಗ್ನಿಯನ್ನು ಹೊರಗೆಡವಿದುದು ಹೊಗಳಿಕೆಯಲ್ಲ, ಪೆಟ್ಟುಗಳು ಎಂದೂ ನಾನು ಧೈರ್ಯವಾಗಿ ಹೇಳುತ್ತೇನೆ' ಎನ್ನುತ್ತಾರೆ.

‘ಜೀವನದಲ್ಲಿ ನಾವು ಯಾವ ಆದರ್ಶವನ್ನು ಇಟ್ಟುಕೊಳ್ಳುತ್ತೇವೆ ಎಂಬುದು ಅತ್ಯಂತ ಮುಖ್ಯ. ಸ್ವಾಮಿ ವಿವೇಕಾನಂದ ಹೇಳುತ್ತಾರೆ, ‘ಆದರ್ಶವಿರುವ ಮನುಷ್ಯ ಸಾವಿರ ತಪ್ಪುಗಳನ್ನು ಮಾಡಿದರೆ, ಆದರ್ಶವಿಲ್ಲದವನು 50 ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದ ಕಾರಣ ಒಂದು ಆದರ್ಶವಿರುವುದು ಮೇಲು.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

# ಸತ್ಯದಿಂದ ಬದುಕಿಗೆ ಭರವಸೆ

‘ಸತ್ಯವಿಲ್ಲದಿದ್ದರೆ ಈ ಜೀವನದ ಪ್ರಯೋಜನವೇನು?’ ಎಂದು ಸ್ವಾಮಿ ವಿವೇಕಾನಂದರು ಕೇಳುತ್ತಾರೆ. ಎಲ್ಲರೂ ಬಾಳುವುದು ಸತ್ಯದ ಆಧಾರದ ಮೇಲೆಯೇ. ನಮ್ಮ ಜೀವನ, ನಮ್ಮ ಸುತ್ತಲಿನ ವಸ್ತುಗಳು, ನಮ್ಮ ಅನುಭವಗಳೆಲ್ಲವೂ ನಮ್ಮ ಪಾಲಿಗೆ ಸತ್ಯವೇ. ಆದ್ದರಿಂದಲೇ ನಮ್ಮ ಬಾಳು ಸುಗಮವಾಗಿ ಸಾಗುತ್ತದೆ.

ಯಾರೂ ಮಿಥ್ಯಾಲೋಕದಲ್ಲಿ, ಭ್ರಮಾ ಲೋಕದಲ್ಲಿ ಬಾಳಲಾರರು. ಅವರು ಭ್ರಮಾಲೋಕದಲ್ಲಿದ್ದರೂ ಅದನ್ನು ಸತ್ಯವೆಂದೇ ತಿಳಿದು ಬದುಕುತ್ತಾರೆ. ಮಗು ತಾಯಿಯ ಗರ್ಭದಿಂದ ಹೊರಬಂದ ಕೂಡಲೇ ಈ ಜಗತ್ತು ಅದಕ್ಕೆ ಅತ್ಯಂತ ಹೊಸದು. ಸತ್ಯಾಸತ್ಯತೆಯ ಅರಿವು ಅದಕ್ಕಿನ್ನೂ ಉಂಟಾಗಿರುವುದಿಲ್ಲ. ಹೀಗಾಗಿ ಅಳಲು ಪ್ರಾರಂಭಿಸುತ್ತದೆ. ಕ್ರಮೇಣ ಅದಕ್ಕೆ ಸುತ್ತಲಿನ ಜಗತ್ತಿನ ಸತ್ಯತೆಯ ಅರಿವಾಗಿ ಅದಕ್ಕೆ ಭರವಸೆ ಉಂಟಾಗುತ್ತದೆ. ಆದ್ದರಿಂದ ಸತ್ಯವೇ ಭರವಸೆಯನ್ನು ನೀಡುವುದು.

ವ್ಯಕ್ತಿಯೊಬ್ಬ ತಾನು ಯಾವುದೋ ಪ್ರಪಂಚದಲ್ಲಿರುವಂತೆ ಕನಸು ಕಾಣುತ್ತಾನೆ. ಆ ಕನಸು ಅವನ ಮೇಲೆ ತುಂಬ ಪ್ರಭಾವವನ್ನುಂಟು ಮಾಡಿರುತ್ತದೆ. ಕನಸಿನಿಂದ ಎದ್ದ ಮೇಲೆ ಜಾಗೃತ ಪ್ರಪಂಚ ಅವನಿಗೆ ಭ್ರಮೆಯಾಗಿ ಕಾಣುತ್ತದೆ. ತಾನೆಲ್ಲೋ ಇರುವಂತೆ ಅವನಿಗೆ ಭಾಸವಾಗಿ ಗಾಬರಿಯಾಗುತ್ತದೆ. ತನ್ನ ಹಾಸಿಗೆ, ಮಂಚ, ಮೇಜು ಮುಂತಾದವುಗಳನ್ನೆಲ್ಲ ಮುಟ್ಟಿ ನೋಡಿಕೊಂಡು ಇದೆಲ್ಲ ಸತ್ಯ ಎಂದು ತಿಳಿದ ಮೇಲೆ ಅವನಿಗೆ ಭರವಸೆ ಉಂಟಾಗುತ್ತದೆ.

ನಮ್ಮ ಸ್ನೇಹಿತ ಮತ್ತು ನಿಕಟಪರಿಚಿತನ ವಿಷಯದಲ್ಲಿ ನಮಗೆ ಭರವಸೆ ಇರುತ್ತದೆ. ಏಕೆಂದರೆ ಅವನ ಮಾತು ಮತ್ತು ಕೃತಿ ನಮ್ಮ ಪಾಲಿಗೆ ಯಥಾರ್ಥವಾಗಿರುತ್ತದೆ. ಯಾರ ಮಾತಿನ ಸತ್ಯತೆಯ ವಿಷಯದಲ್ಲಿ ನಮಗೆ ಸಂದೇಹವಿರುತ್ತದೋ ಅವನ ಸ್ನೇಹವನ್ನು ಮಾಡಿಕೊಳ್ಳುವುದೇ ಇಲ್ಲ. ಆದ್ದರಿಂದ ಮಾನವೀಯ ನಿಕಟ ಸಂಬಂಧಗಳೆಲ್ಲ ನಿಂತಿರುವುದು ಸತ್ಯದ ಆಧಾರದ ಮೇಲೆ.

ಪ್ರಜಾವಾಣಿ

## ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

# ಶಿವ ಜ್ಞಾನೇ ಜೀವಸೇವಾ

ಮನುಷ್ಯನು ಪ್ರಜ್ಞಾಪೂರ್ವಕ ಜೀವನ ನಡೆಸಬೇಕು. ಪ್ರಜ್ಞಾಪೂರ್ವಕ ಜೀವನದ ಒಂದು ಮುಖ್ಯ ಲಕ್ಷಣವೇನೆಂದರೆ ಒಂದು ಉನ್ನತ ಆದರ್ಶವನ್ನು ಹೊಂದಿರುವುದು. ಒಂದು ಯಂತ್ರಕ್ಕೆ ಅಥವಾ ಭೌತವಸ್ತುವಿಗೆ ಯಾವ ಆದರ್ಶವೂ ಇರುವುದಿಲ್ಲ. ಪ್ರಜ್ಞೆ ವಿಕಾಸವಾದಂತೆಲ್ಲ ಆದರ್ಶವು ಸ್ಪಷ್ಟವಾಗುತ್ತ ಬರುತ್ತದೆ. ಯಾಂತ್ರಿಕತೆ ಕಡಿಮೆಯಾಗುತ್ತ ಬರುತ್ತದೆ. ಇದೆಲ್ಲವೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರ ಮೇಲೆ ನಿಂತಿದೆ.

ಮಾನವೀಯ ಮೌಲ್ಯಗಳು ಸ್ವಾರ್ಥತ್ಯಾಗವನ್ನು ಅವಲಂಬಿಸಿರುತ್ತವೆ. ವ್ಯಾಪಾರ ಮತ್ತು ಗ್ರಾಹಕ ಮನೋಭಾವ ಈ ತ್ಯಾಗಕ್ಕೆ ವಿರುದ್ಧವಾದದ್ದು. ಅದು ನಾನು ನನ್ನದೆಂಬ ಭಾವವನ್ನು ಪೋಷಿಸುತ್ತದೆ. ನಾನು ನನ್ನದೆಂಬ ಸಂಕುಚಿತ ಪರಿಧಿಯನ್ನು ಮೀರಿ ಹೋಗದೆ ನಾವು ಯಾವ ಮಾನವೀಯ ಮೌಲ್ಯಗಳನ್ನೂ ಬೆಳೆಸಿಕೊಳ್ಳಲಾರೆವು.

ಈ ಮೇಲಿನ ಚರ್ಚೆಯಿಂದ, ಯಾರೂ ವ್ಯಾಪಾರ ಮಾಡಬಾರದೆಂದಾಗಲಿ, ಗ್ರಾಹಕರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬಾರದೆಂದಾಗಲಿ ಅರ್ಥಮಾಡಿಕೊಳ್ಳಬಾರದು. ವ್ಯಾಪಾರ ಮತ್ತು ಗ್ರಾಹಕ ಮನೋಭಾವ ಮಾನವನ ಮನಸ್ಸನ್ನು ಸಂಪೂರ್ಣ ಆವರಿಸಿಕೊಂಡು ಬಿಟ್ಟರೆ ಮಾನವೀಯತೆ ನಷ್ಟವಾಗುತ್ತದೆ. ಸಮಾಜವು ಕೇವಲ ಸ್ವಾರ್ಥ ಸಾಧಕರ ಕಾರ್ಯಕ್ಷೇತ್ರವಾಗುತ್ತದೆ ಹಾಗೂ ಕ್ರಮೇಣ ಸಮಾಜವು ಶಕ್ತಿಗುಂದುತ್ತದೆ. ಆದ್ದರಿಂದ ಪ್ರತಿಯೊಬ್ಬರನ್ನೂ ಮಾನವರೆಂದು ಗುರುತಿಸುವುದನ್ನು ಕಲಿತು ಮಾನವೀಯ ಮೌಲ್ಯಗಳನ್ನು ನಾವು ಬೆಳೆಸಿಕೊಳ್ಳದಿದ್ದರೆ ಈ ಅನಿಷ್ಟದಿಂದ ನಾವು ಪಾರಾಗಲಾರೆವು. 'ಶಿವ ಜ್ಞಾನೇ ಜೀವಸೇವಾ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರೂ, ಜೀವ ಭಾವವನ್ನೇ ಕಳೆದುಕೊಂಡು ಯಂತ್ರ ಸದೃಶರಾಗುತ್ತಿರುವ ನಾವು ಮೊದಲು ಮಾನವರಾಗಿ ಬಾಳುವುದನ್ನು ಕಲಿಯಬೇಕಾಗಿದೆ.

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ಸಂಸ್ಕೃತಿ - ನಾಗರಿಕತೆಯ ಸಮನ್ವಯವೇ ಸತ್ಯಯುಗ

ಸಮಾಜದಲ್ಲಿ ಈಗ ಮುಖ್ಯವಾಗಿ ಬೇಕಾಗಿರುವುದು ಸಂಸ್ಕೃತಿ ಮತ್ತು ನಾಗರಿಕತೆಗಳ ಸಮನ್ವಯ. ನಾಗರಿಕತೆಯನ್ನು ಕಡೆಗಣಿಸಿ ಕೇವಲ ಸಂಸ್ಕೃತಿಯ ಬೆಳವಣಿಗೆ ಆದರೆ ಕ್ರಮೇಣ ಸಮಾಜವು ದುರ್ಬಲವಾಗುತ್ತದೆ ಮತ್ತು ಇದರಿಂದ ಸಂಸ್ಕೃತಿಯ ಬೆಳವಣಿಗೆಯು ಸ್ಥಗಿತವಾಗುತ್ತದೆ. ಹಾಗೆ ಅಡೆತಡೆ ಇಲ್ಲದ ನಾಗರಿಕತೆಯ ಬೆಳವಣಿಗೆ ಸಂಸ್ಕೃತಿಯ ಬೆಳವಣಿಗೆಯನ್ನು ಕುಂಠಿತಗೊಳಿಸಿ ಮನುಷ್ಯ ತನ್ನ ಅಸ್ತಿತ್ವದ ನೆಲೆಯನ್ನೇ ಕಳೆದುಕೊಳ್ಳುವಂತಾಗುತ್ತದೆ.

ಸ್ವಾಮಿ ವಿವೇಕಾನಂದರ ಆದರ್ಶವೂ ಇದೇ ಆಗಿತ್ತು. 'ಪಾಶ್ಚಾತ್ಯ ಸಂಘಟನಾ ಕ್ರಮ, ಅವರ ಬಾಹ್ಯ ನಾಗರಿಕತೆ ಹೇಗೆ ನಮ್ಮ ಮೇಲೆ, ನಾವು ಇಚ್ಛಿಸಲಿ ಬಿಡಲಿ, ತಮ್ಮ ಪ್ರಭಾವವನ್ನು ಬೀರುತ್ತವೆಯೋ ಹಾಗೆಯೇ ಭರತ ಖಂಡದ ದರ್ಶನ ಮತ್ತು ಆಧ್ಯಾತ್ಮಿಕತೆ ಪಾಶ್ಚಾತ್ಯ ದೇಶಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ಅದನ್ನು ಯಾರು ತಡೆಯಲಾರರು. ನಾವು ಕೂಡ ಪಾಶ್ಚಾತ್ಯ ಭೌತಿಕ ನಾಗರಿಕತೆಯ ಪ್ರಭಾವವನ್ನು ತಡೆಯಲಾಗುವುದಿಲ್ಲ. ಬಹುಶಃ ಸ್ವಲ್ಪ ಅವರ ನಾಗರಿಕತೆ ನಮಗೆ ಹಿತಕಾರಿ. ಸ್ವಲ್ಪ ಆಧ್ಯಾತ್ಮ ಅವರಿಗೆ ಹಿತಕಾರಿ. ಹೀಗೆ ಸಮತೋಲನ ಉಂಟಾಗುತ್ತದೆ.

ಈಶಾವಾಸ್ಯ ಉಪನಿಷತ್ತಿನಲ್ಲಿ ಹೀಗಿದೆ. 'ಯಾವನು ವಿದ್ಯೆ ಮತ್ತು ಅವಿದ್ಯೆ ಇವೆರಡನ್ನು ಒಟ್ಟಿಗೆ ಅರಿಯುತ್ತಾನೋ ಅವನು ಅವಿದ್ಯೆಯ ಮೂಲಕ ಮೃತ್ಯುವನ್ನು ದಾಟಿ, ವಿದ್ಯೆಯ ಮೂಲಕ ಅಮೃತತ್ವವನ್ನು ಪಡೆಯುತ್ತಾನೆ'.

ಹೀಗೆ ಸಂಸ್ಕೃತಿ ಮತ್ತು ನಾಗರಿಕತೆ ಇವೆರಡೂ ಸಮಾನವಾಗಿ ಮುಂದುವರಿಯಬೇಕು, ಒಂದನ್ನೊಂದು ಹಿಂದೆ ತಳ್ಳಿ ಮುನ್ನುಗ್ಗಬಾರದು. ಒಂದನ್ನೊಂದು ನಿಗ್ರಹಿಸುತ್ತಾ ಪರಸ್ಪರ ಪೂರಕವಾಗಿ ಮುಂದುವರಿಯಬೇಕು. ಸಮಾಜವು ಇವೆರಡರ ಸಮನ್ವಯ ಸ್ಥಿತಿಯನ್ನು ಮುಟ್ಟಿದಾಗ ಅದು ಸತ್ಯಯುಗ ಎಂದು ಕರೆಯಬಹುದು. ❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ಜಪಸಾಧನೆಯ ಹಿಂದಿದೆ ತಾತ್ವಿಕ ಹಿನ್ನೆಲೆ

ಜಪ ಎಂದರೆ ಭಗವಂತನ ಯಾವುದಾದರೂ ಹೆಸರನ್ನು ಅಥವಾ ಅವನಿಗೆ ಸಂಬಂಧಿಸಿದ ಮಂತ್ರವನ್ನು ನಿರಂತರವಾಗಿ ಪುನರುಚ್ಚರಿಸುತ್ತಾ ಹೋಗುವುದು. ಗುರುವಿನಿಂದ ಮಂತ್ರವನ್ನು ಪಡೆದು ಅವರಿಂದ ದೀಕ್ಷಿತರಾಗಿ ಈ ಜಪ ಸಾಧನೆಯನ್ನು ಪ್ರಾರಂಭಿಸುವುದು ವಾಡಿಕೆ. ಶ್ರೇಷ್ಠ ಗುರುವಿನಿಂದ ದೀಕ್ಷೆ ಪಡೆದರೆ ಮಂತ್ರದಲ್ಲಿ ಹೆಚ್ಚು ಶ್ರದ್ಧೆ ಉಂಟಾಗುತ್ತದೆ ಮತ್ತು ಗುರುವಿನ ಆಶೀರ್ವಾದ ಬಲವೂ ಇರುತ್ತದೆ.

‘ತಜ್ಜಪಃ ತದರ್ಥ ಭಾವನಂ’, ‘ಮಂತ್ರವನ್ನು ಉಚ್ಚರಿಸುತ್ತ, ಆ ಮಂತ್ರವು ಪ್ರತಿನಿಧಿಸುವ ಅರ್ಥವನ್ನು ಅಂದರೆ ದೇವತಾ ಸ್ವರೂಪವನ್ನು ಧ್ಯಾನಿಸುವುದು’ ಎಂದು ಪತಂಜಲಿ ಜಪದ ಕುರಿತಾಗಿ ಹೇಳುತ್ತಾರೆ.

ಮಂತ್ರ, ವಿಶೇಷವಾಗಿ ಬೀಜಮಂತ್ರ, ಒಂದು ನಿರ್ದಿಷ್ಟ ದೇವತೆಯ ಸ್ಪಂದನ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಈ ಪ್ರಪಂಚದಲ್ಲಿ ಎಲ್ಲವೂ ಒಂದು ಸ್ಪಂದನದ ಸ್ಥಿತಿಯಲ್ಲಿವೆ. ಇಡೀ ಜಗತ್ತೇ ಒಂದು ಸ್ಪಂದನ. ಜಗತ್ತು ಸೃಷ್ಟಿಯಾದುದೇ ಸ್ಪಂದನದಿಂದ. ಈಶ್ವರನಲ್ಲಿ ಸೃಷ್ಟಿ ಸಂಕಲ್ಪ ಉಂಟಾಗುತ್ತದೆ. ‘ಸ ಈಕ್ಷತ ಲೋಕಾನ್ ನು ಸೃಜಾ ಇತಿ’ ‘ಲೋಕಗಳನ್ನು ಸೃಷ್ಟಿಸುವೆನು ಎಂದು ಅವನು ಆಲೋಚಿಸಿದನು’ ಎಂದು ಉಪನಿಷತ್ ಹೇಳುತ್ತದೆ.

ಈಶ್ವರ, ಸೃಷ್ಟಿ ಸಂಕಲ್ಪ ಮತ್ತು ಸೃಷ್ಟಿ ಈ ಮೂರೂ ಬೇರೆ ಬೇರೆ ಅಲ್ಲ. ಈಶ್ವರನಲ್ಲಿ ಬೀಜ ರೂಪದಲ್ಲಿ ಅಡಗಿರುವ ವಿಶ್ವವು ಸ್ಪಂದನದ ಮೂಲಕ ಹೊರಗೆ ವ್ಯಕ್ತವಾಗುತ್ತದೆ. ಆ ಪ್ರಥಮ ಸ್ಪಂದನವನ್ನೇ ಸೃಷ್ಟಿ ಸಂಕಲ್ಪವೆಂದು ಕರೆಯಲಾಗಿದೆ. ಈ ಪ್ರಥಮ ಸ್ಪಂದನದಿಂದ ಉಂಟಾದ ಸೂಕ್ಷ್ಮಾತಿ ಸೂಕ್ಷ್ಮ ಧ್ವನಿಯನ್ನೇ ಶಬ್ದ ಬ್ರಹ್ಮ ಎಂದು ಕರೆಯುತ್ತಾರೆ. ಹೀಗೆಯೇ ಪ್ರತಿಯೊಂದು ದೇವತೆಯೂ ತನ್ನದೇ ಆದ ಒಂದು ಸ್ಪಂದನ ಸ್ಥರದಲ್ಲಿ ಇರುತ್ತದೆ ಮತ್ತು ಆಯಾ ದೇವತೆಗೆ ಸಂಬಂಧಿಸಿದ ಬೀಜ ಮಂತ್ರವು ಆಯಾ ದೇವತೆಯ ಸ್ಪಂದನದ ಸ್ಥಿತಿಯನ್ನು ಪ್ರತಿನಿಧಿಸುತ್ತದೆ ಎಂಬುದು ತಂತ್ರ ಶಾಸ್ತ್ರದ ಅಭಿಪ್ರಾಯ. ಜಪ ಮಾಡುವುದೆಂದರೆ ನಮ್ಮ ಮನಸ್ಸು ಇಷ್ಟ ದೇವತಾ ಶ್ರುತಿಯೊಂದಿಗೆ ಮೇ ಮೇಳಯಿಸುವಂತೆ ಮಾಡುವುದು.

❖

ಪ್ರಜಾವಾಣಿ

# ವಚನಾಮೃತ



**ಮಾತಾ ಕೈವಲ್ಯಮಯಿ**, ಅಧ್ಯಕ್ಷರು,
ಶ್ರೀಶಾರದಾ ಆಶ್ರಮ, ವಿಜಯಪುರ

## ದೋಣಿಯೊಳಗೆ ನೀರು ಇರಬಾರದು

ಸಮುದ್ರದ ಮಧ್ಯೆ ಒಂದು ದೊಡ್ಡ ಆಯಸ್ಕಾಂತ ಪರ್ವತವಿದೆಯಂತೆ. ಏನಾದರೂ ಹಡಗು ಅದರ ಹತ್ತಿರ ಹೋದರೆ ಆ ಹಡಗಿನಲ್ಲಿರುವ ಬೋಲ್ಟು ನಟ್ಟು ಮುಂತಾದ ಕಬ್ಬಿಣದ ಭಾಗಗಳೆಲ್ಲ ಕಳಚಿಕೊಂಡು ಪರ್ವತದ ಕಡೆ ಆಕರ್ಷಿತವಾಗಿ ಹೋಗಿಬಿಡುತ್ತವೆಯಂತೆ ಮತ್ತು ಹಡಗು ಮುರಿದು ನೀರು ಪಾಲಾಗುತ್ತದೆ!

ನಿಜವಾಗಿ ಆ ಹಡಗನ್ನು ಹಿಡಿದಿರಿಸಿದ ಅಂಶವೇ ಕಬ್ಬಿಣ, ಅದೇ ಅದರ ಪ್ರಧಾನ ಅಂಶ. ಹಾಗೆಯೇ ನಮ್ಮ ವ್ಯಕ್ತಿತ್ವವೆಂಬ ಹಡಗಿನಲ್ಲಿ ಪ್ರಧಾನ ಅಂಶವೇ ಅಧ್ಯಾತ್ಮ. ಅದೇ ನಮ್ಮನ್ನು ಗಟ್ಟಿಯಾಗಿ ಹಿಡಿದಿರಿಸಿರುವುದು. ನಮಗೆ ನಿಜವಾದ ವ್ಯಕ್ತಿತ್ವವನ್ನು ಕೊಟ್ಟಿರುವುದು. ಅದನ್ನೇ ಭಗವಂತನೆಂಬ ಚುಂಬಕ ಪರ್ವತವು ಆಕರ್ಷಿಸಿ ಬಿಟ್ಟರೆ ಮತ್ತೆ ಆ ವ್ಯಕ್ತಿತ್ವ ಉಳಿಯುವುದೆಂತು! ಅದು ಪ್ರಕೃತಿಯಲ್ಲಿ ಲೀನವಾಗಿ ಬಿಡುತ್ತದೆ.

ಹಡಗು ನೀರಿನಲ್ಲಿ ಇರಬೇಕು. ಹಾಗೆಯೇ ನಾವು ಸಂಸಾರದಲ್ಲಿಯೇ ಇರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ದೋಣಿ ನೀರಿನಲ್ಲಿದ್ದರೆ ಪರವಾಗಿಲ್ಲ, ದೋಣಿಯೊಳಗೆ ನೀರು ಇರಬಾರದು ಎಂದು. ಹಾಗೆಯೇ, ನಾವು ಸಂಸಾರದಲ್ಲಿ ಇದ್ದರೆ ತೊಂದರೆ ಇಲ್ಲ. ಸಾಂಸಾರಿಕತೆ ನಮ್ಮೊಳಗೆ ನುಗ್ಗದಂತೆ ಎಚ್ಚರಿಕೆ ವಹಿಸಬೇಕು.

ಒಮ್ಮೆ ಕೆಲವರು ದೋಣಿಯಲ್ಲಿ ಪಯಣಿಸುತ್ತಿರುವಾಗ ಒಂದು ಚಿಕ್ಕ ರಂಧ್ರದ ಮೂಲಕ ನೀರು ದೋಣಿಯನ್ನು ಪ್ರವೇಶಿಸ ತೊಡಗಿತು. ಒಬ್ಬ ಮೇಧಾವಿ ಒಂದು ಉಪಾಯವನ್ನು ಹೇಳಿದ. ದೋಣಿಯಲ್ಲಿ ಇನ್ನೊಂದು ರಂಧ್ರವನ್ನು ಮಾಡಿದರೆ ಆ ನೀರು ಹೊರಗೆ ಹೊರಟು ಹೋಗುತ್ತದೆ. ನಾವೂ ಕೂಡ ಅನೇಕಾನೇಕ ಆಶಾ ರಂಧ್ರಗಳನ್ನು ಮಾಡಿಕೊಂಡು, ಸಾಂಸಾರಿಕತೆ ನಮ್ಮೊಳಗೆ ಪ್ರವೇಶಿಸುವಂತೆ ಮಾಡಿಕೊಂಡು ಸಂಸಾರದ ನೀರಿನಲ್ಲಿ ಮುಳುಗಿಬಿಡುತ್ತೇವೆ. ಆದ್ದರಿಂದಲೇ ಶ್ರೀರಾಮಕೃಷ್ಣರು ಸಂಸಾರಿಕತೆ ಒಳಗೆ ಪ್ರವೇಶಿಸಿದಂತೆ ನೋಡಿಕೊಳ್ಳಿ ಎಂದು ಎಚ್ಚರಿಕೆ ನೀಡುತ್ತಾರೆ. ನಮ್ಮ ಹಡಗಿಗೆ ಸಾಂಸಾರಿಕತೆ ತಗುಲಿಬಿಟ್ಟರೆ ಅದರಲ್ಲಿರುವ ಕಬ್ಬಿಣದ ಭಾಗಕ್ಕೆ ತುಕ್ಕು ಹಿಡಿಯುತ್ತದೆ. ಆಗ ಅದು ಶ್ರೀರಾಮಕೃಷ್ಣರಂತಹ ಮಹಾಚುಂಬಕ ಪರ್ವತದ ಹತ್ತಿರ ಹೋದರೂ ನಮ್ಮ ವ್ಯಕ್ತಿತ್ವ ಬಂಧನ ಕಳಚಿ ಹೋಗುವುದಿಲ್ಲ.